ನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ

ಮನೋಹರ ಗ್ರಂಥಮಾಲೆಯ ೧೪೧ನೆಯ ಕುಸುಮ

ಆ ಮನಿ

(ಎರಡಂಕಿನ ನಾಟಕ)

ಬರೆದವರು :
ಕೀರ್ತಿನಾಥ ಕುರ್ತಕೋಟಿ

ಡಿಸೆಂಬರ
೧೯೫೬

ಬೆಲೆ
೧-೦-೦

ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ.

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ,
ಧಾರವಾಡ

ಮುದ್ರಕರು :
ಎಂ. ಎ. ಕಾಮತ
ಹಿಂದಮಾತಾ ಮುದ್ರಣಾಲಯ
ಧಾರವಾಡ

ಮೊದಲಮಾತು

ಇದು ನನ್ನ ಮೊದಲ ಪ್ರಯತ್ನ. ಇದನ್ನು ರಸಿಕರ ಮುಂದಿಡುವಾಗ ನನ್ನೆದೆಯ ದುಗುಡ ದೇವರಿಗೇ ಗೊತ್ತು. ನಾನೇ ಈ ನಾಟಕವನ್ನು ಮರಮರಳಿ ಓದಿ ನೋಡಿದ್ದೇನೆ; ಹತ್ತು ಜನರೆದುರು ಓದಿ ತೋರಿಸಿದ್ದೇನೆ. ಇದರಲ್ಲಿ ಯಾವ ಸಮಸ್ಯೆಯನ್ನೂ ನಾನು ಚರ್ಚಿಸಹೊರಟಿಲ್ಲ. ನಾಟಕವೆಂದರೆ, ಸಮಾಜದ ಒಂದು ಘೋರಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿ, ಸಾಧ್ಯವಾದರೆ ಅದಕ್ಕೆ ಉತ್ತರವನ್ನು ನೀಡುವ ಒಂದು ಸಾಧನ ಎಂದು ತಿಳುವಳಿಕೆಯಿದ್ದ ಈ ಕಾಲಕ್ಕೆ ಈ ನಾಟಕದ ಭವಿತವ್ಯ ಏನಿರಬಹುದು ಎಂದು ನಾನು ಕುತೂಹಲಕ್ಕೊಳಗಾಗಿದ್ದೇನೆ. ನಾನು ಬರೆದದ್ದು ಕೇವಲ ಒಂದು 'ಆಟ'.

ಈ ನಾಟಕದಲ್ಲಿ ನಾನು ಎಲ್ಲಕ್ಕಿಂತ ಹೆಚ್ಚು ಮಹತ್ವವನ್ನು ವಾತಾವರಣಸೃಷ್ಟಿಗೆ ಕೊಟ್ಟಿದ್ದೇನೆ. ಅಂತಲೇ ಇಲ್ಲಿಯ ಕಥಾವಸ್ತುವಿನ ಇತಿಹಾಸ ದೂರ, ಬಹುದೂರ ಓಡುತ್ತದೆ. ಕಥೆಯ ಗಮನ ವರ್ತಮಾನಕಾಲದಿಂದ ಭೂತಕಾಲಕ್ಕೆ ಹೋಗಿ, ಆಮೇಲೆ ವರ್ತಮಾನದಿಂದ ಮುಂದುವರಿಯುತ್ತದೆ. ಈ ನಾಟಕಕ್ಕೆ ನಿರಂತರವಾಗಿ ಹಿನ್ನೆಲೆಯಾಗಿರುವ 'ಆ ಮನಿ' ಕೂಡ ಒಂದು ಮೂಕಪಾತ್ರವೆಂದೇ ನಾನು ತಿಳಿದಿದ್ದೇನೆ.

ಇದು ಮಕ್ಕಳ ಜೀವನದಲ್ಲಿಯ ಕೆಲವು ಸನ್ನಿವೇಶಗಳನ್ನು ರೂಪಿಸುವ ನಾಟಕವಾಗಿದ್ದರೂ ಕೂಡ ಅದೇ ಅದರ ಉದ್ದೇಶವಲ್ಲ. ಜೀವನಕ್ಕೆ ಜೀವನವೇ ಇಲ್ಲಿ ಸಂಕೇತವಾಗಿದೆ. ವಾಸ್ತವತೆಯ ಅದ್ಭುತರಮ್ಯತೆಯನ್ನು ತೆರೆದು ತೋರುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಜೀವನದಲ್ಲಿ ಕಾಣುವ ಸತ್ಯದ ಪರಿಗಳನ್ನು ಒಂದೊಂದಾಗಿ ಬಿಚ್ಚಿ ನೋಡಿದಾಗ ಕೊನೆಗೆ ಅನಿರ್ವಚನೀಯವಾದ ಗೂಢವೊಂದೇ ಉಳಿಯುತ್ತದೆ. ಮಕ್ಕಳ ಜೀವನದಲ್ಲಿ, ಆಟಗಳಲ್ಲಿ, ಉತ್ಸಾಹದಲ್ಲಿ, ಅನುಕರಣದಲ್ಲಿ ಮನುಕುಲದ ಹೃದಯಸ್ಪಂದನ ಕೇಳುತ್ತಿದೆ. ಇತಿಹಾಸದ ಫಲವಾಗಿ, ಭವಿಷ್ಯದ ಬೀಜವಾಗಿರುವ ಶೈಶವದ ಅಲೌಕಿಕ ಸೌಂದರ್ಯವನ್ನು ಸೆರೆಹಿಡಿಯುವ ಸಾಹಸ ಇಲ್ಲಿದೆ.

ಇನ್ನು ತಂತ್ರದ ವಿಷಯ. ಉಳಿದ ನಾಟಕಗಳಲ್ಲಿ ಸಾಮಾನ್ಯವಾಗಿರುವ ಕಥಾನಕದ ಬೆಳವಣಿಗೆ ಇಲ್ಲಿ ಇಲ್ಲ. ಕತೆ ಹುಟ್ಟಿ, ಬೆಳೆದು, ಹಬ್ಬಿ ಕೊನೆಗೊಳ್ಳುವದಿಲ್ಲ. ತೆರೆ ಸರಿಯುತ್ತ ಹೋದಂತೆ ಕತೆ ತಾನಾಗಿ ತೆರೆಯುತ್ತದೆ. ತಾಂತ್ರಿಕವಾಗಿ ಕೂಡ ಕತೆ 'ವಿಂಗಿ'ನಿಂದ 'ವಿಂಗಿ'ಗೆ ಚಲಿಸುವದಿಲ್ಲ. ರಂಗದ ತುದಿಯಿಂದ ಆಳವಾಗಿ ತೆರೆಯುತ್ತ ಹೋಗುತ್ತದೆ. ಚಲಿಸುವ ಬೆಳಕು, ಕತ್ತಲೆಯಲ್ಲಿ ಅಡಗಿದ ವಸ್ತುಗಳನ್ನು ಬೆಳಗಿಸಿ ತೋರಿಸುವಂತೆ, ಬರವಣಿಗೆ ಇದ್ದ ಕತೆಯ ಮೇಲೆಯೇ ಬೆಳಕು ಬೀರುತ್ತದೆ. ಇದ್ದ ಕತೆ ಹೊರಬರುವದಕ್ಕೆ ಗತಕಾಲದ ಸಂಗತಿಗಳ ಕಥನವಿದೆ; ನೆನಪುಗಳಿವೆ. ಸಕ್ಕರೆಗಿಣಿಯ ಮುದುಕ 'ಆ ಮನಿ'ಯ ಕತೆಯನ್ನು ಹೇಳುವದರ ಜೊತೆಗೇ ತನ್ನ ದೀರ್ಘಜೀವನದ ಇತಿಹಾಸವನ್ನೂ ನಿರೂಪಿಸುತ್ತಾನೆ. ಅದನ್ನು ಕೇಳುತ್ತ ಕೂಡುವ ಹಣ್ಣುಮಾರುವವಳು ಕೂಡ ತನ್ನ ಬದುಕಿನ ವ್ಯಥೆಯನ್ನು ಆಗಾಗ ವಿವರಿಸದೆ ಬಿಡುವದಿಲ್ಲ. ಹುಡುಗರು ಆಡುವ ಆಟ,

ಅವರ ಮಾತುಕತೆಗಳು, ಅವರವರ ಮನೆಯು, ಅವರವರ ಸಂಸ್ಕಾರಗಳ ಕತೆಯನ್ನು ಹೇಳುತ್ತವೆ. ಮಕ್ಕಳು ಆಡುವ ಮದುವೆಯಾಟದ ವಿಷಯ ವಾಗಿಯೂ ಒಂದು ಮಾತು ಹೇಳಬೇಕೆಂದೆನಿಸುತ್ತದೆ. ಯಾವ ಹುಡುಗರೂ ಆ ಆಟವನ್ನು ಇಷ್ಟು ಸುಸಂಬದ್ಧವಾಗಿ, ಇಷ್ಟು ದೀರ್ಘಕಾಲದ ವರೆಗೆ ಆಡಲಾರರು. ಆದರೆ ಮಕ್ಕಳಲ್ಲಿರುವ ಅನುಕರಣ ಮತ್ತು ಅಭಿನಯ ಗುಣಗಳನ್ನೇ ಬಳಸಿಕೊಂಡು, ಸಾಂಕೇತಿಕವಾಗಿ ಕತೆ ಕಟ್ಟಲಾಗಿದೆ. ಇನ್ನು ಕೊನೆಯಲ್ಲಿ ಮೂಡುವ ಅದ್ಭುತರಮ್ಯತೆ ಅನಿವಾರ್ಯವೆಂದೇ ನನ್ನ ಅಭಿಪ್ರಾಯ. ಮಕ್ಕಳ ನಂಬಿಕೆಗಳಲ್ಲಿ ಹುದುಗಿರುವ ಕಲ್ಪನಾವಿಲಾಸ, 'ಆ ಮನಿ'ಯ ರಹಸ್ಯಮಯ ವಾತಾವರಣ, ಬೆಳೆಯಲೇಬೇಕಾದ ಜೀವ ವನ್ನು ಸಾವು ಮುಟ್ಟಲಾರದೆಂಬ ಭಾವನೆ, ಎಲ್ಲಕ್ಕೂ ಹೆಚ್ಚಾಗಿ, ಜೀವನದ ಆಳದಲ್ಲಿ, ಭವಿಷ್ಯದ ಕೊನೆಯಲ್ಲಿ ಮೂಡುವ ಅಗಮ್ಯತೆ ಈ ಅದ್ಭುತ ರಮ್ಯತೆಗೆ ಕಾರಣವಾಗಿವೆ. ಈ ವಿಚಾರ ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ದೆಯೋ ರಸಿಕವಿಮರ್ಶಕರು ಬೆಲೆ ಕಟ್ಟಬೇಕು. ಇದೇ ದಾರಿಯೇ ಯೋಗ್ಯ ಎಂದೇನೂ ನನ್ನ ಹಟವಿಲ್ಲ. ಆದರೆ ನನಗೆ ಕಂಡ ದಾರಿ ಅದೊಂದೇ.

ಇನ್ನು ನಾಟಕಪ್ರಯೋಗದ ವಿಷಯ. ಎರಡನೆಯ ದೃಶ್ಯದಲ್ಲಿಯ ರಂಗವ್ಯವಸ್ಥೆ ಕಠಿಣವಾಗಿದ್ದರೂ ಅಸಂಭವನೀಯವೇನೂ ಅಲ್ಲ. ನಮ್ಮಲ್ಲಿ ರಂಗವ್ಯವಸ್ಥೆ ಇನ್ನೂ ಒಂದು ಕಲೆಯಾಗಿ ಬೆಳೆದಿಲ್ಲ. ಸಾಮಾಜಿಕ ನಾಟಕ ಗಳಲ್ಲಿ ಕೂಡ ರಂಗವ್ಯವಸ್ಥೆ ಒಂದು ತಲೆಬೇನೆಯಾಗಿದೆ. ಅದಕ್ಕಿರುವ ಹಣದ ವಿಪರೀತ ವೆಚ್ಚದಿಂದ, ನಮ್ಮ ಅಭಿರುಚಿಗೆ ತಕ್ಕಂತೆ ದೃಶ್ಯಗಳನ್ನು ನಿಯೋಜಿಸುವ ಅವಕಾಶವೇ ನಮಗೆ ಸಿಕ್ಕಿಲ್ಲ. ನಾಟಕಕಂಪನಿಗಳು ಈ ಒಂದು ವಿಷಯದಲ್ಲಿ ಆಸ್ಥೆವಹಿಸುತ್ತಿದ್ದರೂ, ಅದಕ್ಕೆ ಪ್ರೇಕ್ಷಕರಿಂದ ಸಾಮಾಜಿಕರಿಂದ ಪ್ರೋತ್ಸಾಹ ದೊರೆಯುವದಿಲ್ಲ. ಈ ವಿಷಮ ವಾತಾ ವರಣ ಇನ್ನಾದರೂ ಹೋಗಬೇಕು. ಸರಿಯಾದ ಹಿನ್ನೆಲೆ ಕೊಡದಿದ್ದರೆ ನಾಟಕದ ಅರ್ಥ ಸೌಂದರ್ಯ ಇಲ್ಲದಂತಾಗುವದೆಂಬ ಪ್ರಜ್ಞೆ ಆಡುವವ ರಿಗೂ, ನೋಡುವವರಿಗೂ ಇರಬೇಕು.

ಅಭಿನಯದ ವಿಷಯದಲ್ಲಿಯೂ ಈ ನಾಟಕ ಸ್ವಲ್ಪ ತೊಂದರೆಯ ದೆನಿಸಬಹುದು. ಆಡುವವರು ಎಳೆಮಕ್ಕಳು. ದೊಡ್ಡವರಲ್ಲಿರುವ ಪ್ರತ್ಯು

ತ್ಪನ್ನಮತಿಯನ್ನು ಅವರಿಂದ ಅಪೇಕ್ಷಿಸಲಾಗದು. ಅದಕ್ಕಾಗಿ ಅವರಿಗೆ ಸರಿಯಾದ ಮಾರ್ಗದರ್ಶನ, ಅಭ್ಯಾಸ ಬೇಕು. ಮೊದಮೊದಲು ಸಹಜ ವಾಗಿ ಅಭಿನಯಿಸಿ, ಆಮೇಲೆ ಹಿರಿಯರ ಅನುಕರಣ ಮಾಡುವಾಗ ಬೇರೊಂದು ರೀತಿಯಲ್ಲಿ ಅಭಿನಯಿಸಬೇಕಾಗುತ್ತದೆ. ಈ ಮಾನಸಿಕ ಬದಲಾವಣೆ ಹಾಗೂ ಭಾವಾಂತರಗಳಿಗೆ ತಕ್ಕಂತೆ ವೇಷಭೂಷಣ ಹಾಗೂ ಅಭಿನಯದಲ್ಲಿ ಸೂಕ್ಷ್ಮ ವ್ಯತ್ಯಾಸವನ್ನು ತೋರಿಸಬೇಕು. ಅನುಕರಣ ಮಾಡುವಾಗ ಅರ್ಧ ಅಣಕ, ಅರ್ಧ ಗಾಂಭೀರ್ಯ ಬೆರಸಬೇಕು. ಮಕ್ಕ ಳಾಗಿ ಅಭಿನಯಿಸುವಾಗಿನ ತನ್ಮಯತೆ ಮಾಯವಾಗಿ, ಅಭಿನಯ ಎರಡು ಭಾವಗಳಿಗೂ ದಿಕ್ಸೂಚಿಯಾಗುವಂತೆ ಮಾಡಬೇಕು. ಆಟದ ನಡುನಡುವೆ ಮೊದಲಿನ ಸಹಜಸ್ಥಿತಿ, ಹುಡುಗರ ಸ್ವಭಾವಗುಣ ಒಮ್ಮೆಲೆ ವ್ಯಕ್ತವಾಗು ತ್ತವೆ. ಅವನ್ನೆಲ್ಲ ಲಕ್ಷ್ಯದಲ್ಲಿ ಇಡಬೇಕಾಗುತ್ತದೆ. ಇಷ್ಟೆಲ್ಲ ಮಾತುಗಳನ್ನು ನಾನು ನನ್ನ ಕೃತಿಯ ಮೇಲಿನ ಅಭಿಮಾನದಿಂದ ಮಾತ್ರ ಹೇಳಿದ್ದೇನೆ. ನುರಿತ ದಿಗ್ದರ್ಶಕನಿಗೆ ನಾನೇನೂ ಪಾಠ ಹೇಳಿಕೊಡಬೇಕಾಗಿಲ್ಲ. ಈ ನಾಟಕದ ಪ್ರಯೋಗದ ಭಾರವನ್ನುಧಾರವಾಡದ ಕಲೋಪಾಸಕ ಮಂಡಲ ದವರು ಈಗಾಗಲೆ ಹೊತ್ತಿದ್ದಾರೆ. ನಾಟಕದ ನಿಜವಾದ ಪ್ರಕಾಶನ ರಂಗದ ಮೇಲೆಯೆ ಆಗಬೇಕು. ಅಂದರೆ ಮಾತ್ರ ಈ ಬರವಣಿಗೆಗೆ ಸಫಲತೆ ಬರುತ್ತದೆ.

ಈ ನಾಟಕದಲ್ಲಿ ನಾನು ಉತ್ತರಕರ್ನಾಟಕದ ಬಳಕೆ-ಮಾತನ್ನೇ ಉಪಯೋಗಿಸಿದ್ದೇನೆ. ಬಳಕೆ-ಮಾತಿನ ಅನುಭವದ ತೀವ್ರತೆ, ಧ್ವನಿ ಸಾಮರ್ಥ್ಯ, ಸಹಜ ಲಯ, ನೆಲದ ಕಾವು ಗ್ರಂಥಸ್ಥ ಭಾಷೆಯಲ್ಲಿ ಮೂಡು ವದು ಕಠಿಣ. ಮೈಸೂರು ಹಾಗೂ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಜನರಿಗೆ ಅರ್ಥಮಾಡಿಕೊಳ್ಳುವದು ಸ್ವಲ್ಪ ಬಿಗಿಯಾಗಬಹುದು. ಅದಕ್ಕೆ ಭಾಷೆಯನ್ನು ಗ್ರಾಂಥಿಕಕ್ಕೆ ತಿರುಗಿಸಿಕೊಳ್ಳುವದಕ್ಕಿಂತ, ಬೇರೆಬೇರೆ ಪ್ರದೇಶಗಳ ಮಾತನ್ನು ಅರ್ಥಮಾಡಿಕೊಳ್ಳುವದನ್ನು ಕಲಿಯುವದೇ ಒಳ್ಳೆಯದು. ಪರಭಾಷೆಯನ್ನೇ ಕಲಿಯುವ ನಾವು, ನಮ್ಮ ಭಾಷೆಯನ್ನೇ ಸಮಗ್ರವಾಗಿ ಕಲಿಯದಿರುವದು ಯಾವ ನ್ಯಾಯ? ಶ್ರೀ. ಕೈಲಾಸಂರ ನಾಟಕಗಳು ಈಗ ನಮ್ಮ ಕಡೆಯ ಜನರಿಗೆ ಅರ್ಥವಾಗುತ್ತವೆ. ಪರಸ್ಪರ ಸಹವಾಸ ಸಂಬಂಧಗಳಿಂದ ಈ ತೊಡಕನ್ನು ನಾವು ಸುಲಭವಾಗಿ ಬಗೆ

ಪರಿಸಬಹುದು ವಾಗರ್ಥಗಳ ಅನ್ಯೋನ್ಯ ಸಾಮರಸ್ಯವೇ ಸಾಹಿತ್ಯದ ಗುರಿಯಾಗಿರುವಾಗ ಅರ್ಥ ವರಿಸಿದ ಮಾತನ್ನೇ ಉಪಯೋಗಿಸುವದು ಅನಿವಾರ್ಯ. ಮೇಲಾಗಿ ಸಾಮಾನ್ಯರೆಂದೆನಿಸಿಕೊಳ್ಳುವವರ ಮಾತಿನಲ್ಲಿಯೂ ಎಂಥ ನಾದಸಂಪತ್ತು, ಹದ, ಕಾವ್ಯದ ಬಣ್ಣ ಇರುವದೆಂಬುದನ್ನು ನಾವು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಬೇಕಾಗಿದೆ.

ಇಷ್ಟೆಲ್ಲ ಹೇಳಿದರೂ ಕೊನೆಯ ಮಾತು ನನ್ನ ಕೈಯಲ್ಲಿಲ್ಲ. ಯುದ್ಧಕ್ಕೆಂದು ಬಯಲಿಗೇ ಇಳಿದ ಮೇಲೆ ಕೋಟೆಯ ರಕ್ಷಣೆ ದೊರೆಯಲಾರದು. ಅದರಲ್ಲಿಯೂ ನಾಟಕವೆಂದರೆ ಸಾರ್ವಜನಿಕ ಕಲೆ. ನಟ-ದಿಗ್ದರ್ಶಕರ, ಪ್ರೇಕ್ಷಕ-ವಿಮರ್ಶಕರ ಸಹಕಾರ ಸಹಾನುಭೂತಿಗಳಿಂದ ಲೇಖಕನ ಕೃತಿ ಸಫಲವಾಗಬೇಕು. ನಾಟಕ ಕ್ಷಣಕ್ಷಣಕ್ಕೂ ಬೆಳೆದೋ, ಬದಲಾವಣೆ ಹೊಂದಿಯೋ ಪರಿಪೂರ್ಣವಾಗಬೇಕು. ರಸಿಕರ ಮಡಲಿಗೆ ಇದನ್ನು ಹಾಕಿದ್ದೇನೆ. ತಮಗೆ ಸರಿಗಂಡಂತೆ ಅವರು ಕೃತಿಯ ಬೆಲೆಕಟ್ಟಬಹುದು.

ಈ ನಾಟಕ ಹುಟ್ಟಿದ್ದು ಶ್ರೀ. ಜಿ. ಬಿ. ಜೋಶಿಯವರ ಪ್ರಚೋದನೆಯಿಂದಲೆ. ಅವರ ಸೂಚನೆ, ಉತ್ತೇಜನ, ಸಹಾಯ ಸಹಕಾರಗಳಿಲ್ಲದಿದ್ದರೆ ಈ ನಾಟಕಕ್ಕೆ ಈ ರೂಪ ಬರುತ್ತಿರಲಿಲ್ಲ. ಬರವಣಿಗೆಯ ಪ್ರಾರಂಭದಿಂದ ಹಿಡಿದು ಮುಕ್ತಾಯದ ವರೆಗೆ ಅವರು ಸರಿಯಾದ ಮಾರ್ಗದರ್ಶನ ಮಾಡಿದ್ದಾರೆ. ಇದರಲ್ಲಿ ಮೊದಲನೆಯ ದೃಶ್ಯದಲ್ಲಿಯ ಸಕ್ಕರೆಗಿಣಿಯ ಬಗ್ಗೆ ನಡೆಯುವ ಬಡಿದಾಟದ ಸನ್ನಿವೇಶ ಶ್ರೀ. ದ. ರಾ. ಬೇಂದ್ರೆಯವರ ಅಲಿಖಿತ ಸಣ್ಣಕತೆ ಎಂದು ಜೋಶಿಯವರೇ ಹೇಳಿದರು. ಈ ಎಲ್ಲ ಋಣಭಾರವನ್ನು ನಾನು ಒಪ್ಪಿಕೊಳ್ಳಲೇಬೇಕು.

ಕೊನೆಯದಾಗಿ ಈ ನಾಟಕವನ್ನು ತಮ್ಮ ಗ್ರಂಥಮಾಲೆಯಲ್ಲಿ ಪ್ರಕಟಿಸಲು ಒಪ್ಪಿದುದಕ್ಕಾಗಿ, ಗ್ರಂಥಮಾಲೆಯ ಸಂಪಾದಕರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

–ಕೀರ್ತಿನಾಥ

ಹಿನ್ನೆಲೆ

ಈ ನಾಟಕವನ್ನು ಬರೆಯಿಸಲು ನಾನೇ ಕಾರಣ ಎಂದು 'ಮೊದಲ ಮಾತಿ'ನಲ್ಲಿ ಶ್ರೀ. ಕೀರ್ತಿಯವರು ಹೇಳಿದ್ದರಿಂದ, ನಾನೇ ಹೇಗೆ ಕಾರಣನಾದೆ ಮತ್ತು ಎಷ್ಟರ ಮಟ್ಟಿಗೆ ಕಾರಣನಾದೆ ಎನ್ನುವ ಬಗ್ಗೆ ಅಷ್ಟೆ ಇಲ್ಲಿ ಹೇಳಿ ಅವರು ಹೊರಿಸಿದ ನನ್ನ ಮೇಲಿನ ತಲೆಭಾರವನ್ನಿಳುಹಿಕೊಳ್ಳಲು ಹವಣಿಸುತ್ತೇನೆ. ಸದ್ಯಕ್ಕೆ ಇದು ಅನಾವಶ್ಯಕ ಅನಗತ್ಯ ಎನಿಸುವಂತಿ ಉರೂ ಈ ಕೃತಿನಿರ್ಮಾಣದ ಹಿಂದುಮುಂದು ನೋಡಬಹುದಾದಾಗ ದ್ದಪಯೋಗವಾದೀತು ಎಂದುಕೊಂಡಿದ್ದೇನೆ.

೧೯೫೭ರ ಮಾರ್ಚಿ ತಿಂಗಳಲ್ಲಿ ಯಾವುದೋ ಕಾರಣದಿಂದ ಈ ನಾಟಕದ ಲೇಖಕರು ಗದುಗಿನಿಂದ ಬೆಳಗಾವಿಗೆ ಹೋಗುವಾಗ (ಆಗ ಇವರು ಅಲ್ಲಿಯ ಆರ್. ಪಿ. ಡಿ. ಕಾಲೇಜಿನಲ್ಲಿ ಇಂಗ್ಲಿಷ್ ಟ್ಯೂಟರ್ ಆಗಿದ್ದರು) ದಾರಿಯಲ್ಲಿ ಧಾರವಾಡಕ್ಕಿಳಿದರು. ಇಳಿದಾಗ ನನ್ನಲ್ಲಿಯೇ ತಂಗಿದರು. ಮರುದಿನ ಕಾಲೇಜಿನ ಹೊತ್ತಿಗೆ ಅವರು ಬೆಳಗಾವಿಗೆ ಹೋಗಬೇಕಾಗಿತ್ತು. ಹೋಗುವ ಹೊತ್ತಿನವರೆಗೂ ಎಷ್ಟೋ ಮಾತನಾಡಿದೆವಾದರೂ ನಾಟಕದ ವಿಷಯವೇನೂ ಹೊರಟಿರಲಿಲ್ಲ. ಅವರನ್ನು ಕಳಿಸಿಬರಲು ನಾನೂ ಮೋಟರ್ ಸ್ಟ್ಯಾಂಡಿನ ವರೆಗೆ ಜೊತೆಯಾಗಿ ಹೊರಟೆ. ದಾರಿಯಲ್ಲಿ ಏನೋ ಮಾತಿಗೆ ಮಾತು ಹೊರಟು ನನ್ನ ತಲೆಯಲ್ಲಿ ಆಗ ಬಹಳ ದಿನಗಳಿಂದ ಸುಳಿದಾಡುತ್ತಿದ್ದ “ ಆ ಮನೆ ”ಯ ಕತೆ ಅವರೆದುರಿಗೆ ಹೇಳಿದೆ. ಈಗ ಈ ನಾಟಕದಲ್ಲಿ ಇದ್ದಂತೆಯೆ ಇತ್ತೆಂದು ಯಾರೂ ಭಾವಿಸಬಾರದು. ನಾನು ಹೇಳಿದ್ದೇ ಬೇರೆ; ಇಲ್ಲಿ ಇದ್ದದ್ದೇ ಬೇರೆ. ಆ ಮನೆ ಮಾತ್ರ ಇಬ್ಬರಲ್ಲಿಯೂ ಒಂದೇ ಇದೆ. ಅವರಿಗೆ ನಾನು ಹೇಳಿದ್ದು ಹಿಡಿಸಿತು. “ ಇದು ಬರೆದರ ಉತ್ತಮ ನಾಟಕ ಆಗತದ ನೋಡ್ರಿ ” ಎಂದರು. “ ಹಂಗಾದರ ಬರೆದುಬಿಡ್ರೆಲ್ಲಾ. ” ಎಂದೆ. “ ನೋಡಬೇಕು ” ಎಂದರು. “ಅನುಮಾನ ಬ್ಯಾಡ, ಇದ್ದ ಬರೆದುಬಿಡ್ರಿ. ” ಎಂದು ಒತ್ತಾಯಮಾಡಿದೆ; ನಿಂತುಬಿಡಲು ಒಪ್ಪಿಸಿದೆ. ಇಬ್ಬರೂ ಹಾಗೇ ಅದೇ ಮಾರ್ಗವಾಗಿ ಪೋಸ್ಟಆಫೀಸಿಗೆ ಹೋಗಿ ಕಾಲೇಜಿಗೊಂದು ತಾರು ಮಾಡಿ ಹಿಂದಿರುಗಿ ಮನೆಗೆ ಬಂದೆವು. ನಾಟಕದ ವಿಷಯವನ್ನೆ ಮೆಲುಕಾಡಿಸಹತ್ತಿದರು ಅವರು. ದಾರಿಯುದ್ದಕ್ಕೂ ಎತ್ತೋ ನೋಡುತ್ತ ಏನೋ ಧೇನಿಸುತ್ತ ಮೌನವಾಗಿ ನಡೆದಿದ್ದ ಅವರು ಜೊತೆಗೆ ನಾನಿರದಿದ್ದರೆ ಸುಸೂತ್ರವಾಗಿ ಮನೆ ಸೇರುತ್ತಿದ್ದರೋ ಇಲ್ಲವೋ! ಅವರನ್ನು ನೋಡಿದರೆ ಗರಹೊಡೆದಂತಿದ್ದರು ಆಗ. ಊಟಕ್ಕೆ ಕುಳಿತಾಗ ಕೈಯಲ್ಲಿದ್ದ ತುತ್ತು ಬಾಯಿಗೆ ಬರಬೇಕಾದರೆ ಸಪ್ತಸಮುದ್ರ ದಾಟಿ ಬಂದಷ್ಟು ಪ್ರಯಾಸಪಡಬೇಕಾಗುತ್ತಿತ್ತು. ಒಂದು ನಿಮಿಷವೂ ಮಾತು ಬಿಟ್ಟಿರದ ಮನುಷ್ಯ, ಊಟ ಮುಗಿಯುವ ವರೆಗೂ ಪಿಟ್ಟೆನ್ನಲಿಲ್ಲ. ಎತ್ತೋ ಯಾವ ಶೂನ್ಯದಲ್ಲಿಯೋ ದೃಷ್ಟಿಯಿಟ್ಟು ಕಲ್ಪನೆಯ ಬೆನ್ನುಹತ್ತಿ ನಡೆದಿದ್ದ. ಇತ್ತ ಊಟದ ಕ್ರಿಯೆಯೂ ಯಾಂತ್ರಿಕವಾಗಿ ನಡೆದಿತ್ತು. ಆಗ ಅವರನ್ನು

ನಿರೀಕ್ಷಿಸಿದಾಗ–ಅಂತರಿಕ್ಷದಲ್ಲಿ ಅವರ ಕಣ್ಣ ನೇರಕ್ಕೆ ಯಾರೋ ಬಂದು ನಿಂತಿದ್ದಾರೆ, ಇವರು ಆ ಅದೃಷ್ಟ ವ್ಯಕ್ತಿಯೊಡನೆ ಮಾತು ನಡೆಸಿದ್ದಾರೆ ಎನಿಸುವಂತಿತ್ತು ಮುಖದ ಚಲನವಲನ. ಏನೇ ಆಗಲಿ, ಒಂದು ಕೃತಿ ಹೊರಕ್ಕೆ ಬರುತ್ತದಲ್ಲಾ ಎಂಬ ಕುತೂಹಲದಲ್ಲಿ ನಾನೂ ವಿಶೇಷ ಮಾತನಾಡಿಸದೆ ಸುಮ್ಮನೆ ನಿರೀಕ್ಷಿಸುತ್ತಿದ್ದೆ. ಊಟ ಮುಗಿಯಿತು. ಮಧ್ಯಾಹ್ನ ಹನ್ನೆರಡು ದಾಟಿತ್ತು. ಬಿಸಿಲೂ ಸಾಕಷ್ಟಿತ್ತು. ಇಬ್ಬರೂ ನನ್ನ ಕೋಣೆಯಲ್ಲಿ ಬಂದು ಕುಳಿತೆವು. ಊಟದ ಭಾರದಿಂದ ನಾನು ಸ್ವಲ್ಪ ವಿಶ್ರಾಂತಿಗೆಂದು ಮಗ್ಗುಲಾಗಿ ಅವರನ್ನು ಅವರಷ್ಟಕ್ಕೇ ಬಿಟ್ಟೆ. ಎಂದಿಲ್ಲದ ನಿದ್ದೆ ಬಂದು ಅಂದು ನನ್ನನ್ನು ಆವರಿಸಿತು.

ಎಚ್ಚರವಾದಾಗ ಐದು ಗಂಟೆಯಾಗಿತ್ತು! ಅವರು ಬಾಗಿ ಬರೆಯುವದರಲ್ಲಿ ತೊಡಗಿದವರು ಏನೋ ಒಂದು ಮುಗಿತಾಯಕ್ಕೆ ಬಂದವರಂತೆ ಕೈಯಲ್ಲಿಯ ಪೆನ್ನನ್ನು ಕೆಳಗಿಟ್ಟು ಕೈಯ ಬೊಟ್ಟು ಲಟಕ್ಕನಿಸಿಕೊಂಡರು. "ಎಲ್ಲಿಗೆ ಬಂತು ನಾಟಕ?" ಎಂದು ಕೇಳಿದೆ. "ಒಂದಂಕವಾಯಿತು." ಎಂದರು. ಆಗಲೇ ಓದಿ ನೋಡಬೇಕೆನಿಸಿದರೂ ಪೂರ್ಣವಾದಮೇಲೇ ಓದಿದರಾಯಿತೆಂದುಕೊಂಡು ಆ ವಿಷಯಕ್ಕೆ ಮಾತು ಮುಂದರಿಸದೆ ಚಹಾ ಮಾಡಲು ಮನೆಯವರಿಗೆ ಹೇಳಿದೆ. ಚಹಾ ಕುಡಿದು "ಒಂದಿಷ್ಟು ತಿರುಗಾಡಿ ಬರ್ಲೋಣ್ರಿ. ಯಾಕೋ ಬೇಸರ ಬಂತು" ಎಂದು ತೆರೆದಿದ್ದ ಪುಟಗಳನ್ನು ಮುಚ್ಚಿ ಅವರು ಹೇಳಿದರು. ಸ್ವಲ್ಪ ಹೊತ್ತಿನಲ್ಲಿ ಚಹಾ ಬಂತು. ಇಬ್ಬರೂ ಚಹಾ ಕುಡಿದು ಹೊರಹೊರಟೆವು. ಹೆಚ್ಚಾಗಿ ಮೌನವಾಗಿಯೆ ತಿರುಗಾಟವಾಯಿತು. ತಿರುಗಿ ಮನೆಗೆ ಬಂದು ಊಟ ಮಾಡಿ ಮತ್ತೆ ಬರೆಯಲು ಕುಳಿತವರು ಮಧ್ಯರಾತ್ರಿಗೇ ನಾಟಕ ಮುಗಿಸಿ ಮಲಗಿದ ನನ್ನನ್ನು ಎಬ್ಬಿಸಿದರು. "ಮುಗಿಯಿತೇ?" ಎಂದೆ. "ಓಹೋ" ಎಂದು ಎಲಡಿಕೆ ಹಾಕಲುದ್ಯುಕ್ತರಾದರು. ಓದಿದ ದೆವ್ವ ಬಿಟ್ಟಿತ್ತು. ಆದರೆ ದೆವ್ವ ಬಿಟ್ಟವರಂತೆ ಮುಖ ಹೀರಿಕೊಂಡಿತ್ತು. "ಓತ್ತೀರಾ?" ಎಂದೆ. "ಹುಂ" ಎಂದು ಪ್ರಾರಂಭಿಸಿದರು. ನಡುವೆ ಏನೂ ಮಾತಿಲ್ಲದೆ ನಾಟಕ ಓದಿಯಾಯಿತು. ರಾತ್ರಿ ಎರಡಾಗಿತ್ತು. ನಾಟಕದ ಬಗ್ಗೆ ಏನಾದರೂ ಮಾತನಾಡಬೇಕೆಂದರೆ ಮನಸ್ಸೇ ಮೂಕವಾಗಿತ್ತು; ಅನಿರ್ವಚನೀಯದಲ್ಲಿ ಅಡಗಿತ್ತು. ಮಧ್ಯಾಹ್ನ ಹನ್ನೆರಡರಿಂದ ರಾತ್ರಿ ಹನ್ನೆರಡರೊಳಗಾಗಿ ಯಾವ ಪೂರ್ವಕಲ್ಪನೆಯಿಲ್ಲದೆ

ಒಮ್ಮೆಂದೊಮ್ಮೆ ಇಂತಹ ನಾಟಕ ಹೊರಬಂದಿತಲ್ಲಾ ಎಂದು ನನಗೆ ನಾನೇ ಕೌತುಕಪಟ್ಟುಕೊಂಡೆ. ನಾಟಕ ಒಂದು "ಭಾವಗೀತ" ಹುಟ್ಟಿ ಬಂದಂತೆ ಬಂದಿತ್ತು. ಮಾಸಕಳೆದು ಬಂದ ಕೂಸು ಬಂದಂತೆ ನಿರ್ಮಲವಾಗಿ ಬಂದಿತ್ತು. ಅದನ್ನು ಕೇಳಿ ನಿಜವಾಗಿಯೂ ಆನಂದವಾಗಿತ್ತು. "ಎಂಥಾ ಕೃತಿ ಪಡೆದಿರಲ್ಲ ಇಷ್ಟು ಅಲ್ಪಾವಕಾಶದಲ್ಲಿ!" ಎಂದು ಮನಸ್ಸು ಬಿಚ್ಚಿ ಹೇಳಿದೆ. "ಪಡೆದವರೇ ಬಲ್ಲರು ಆ ವೇದನೆ" ಎಂದು ನಿಸ್ಸತ್ವ ಪಾಪವರಂತೆ ಕುಳಿತಲ್ಲಿಯೆ ಅವರು ಹೇಳಿದರು. "ಯಾಕೆ, ಕಷ್ಟವಾಯಿತೆ? ನೋಡುತ್ತಿದ್ದ ನನಗಂತೂ ಏನೂ ಆಯಾಸವಿಲ್ಲದ ಲೀಲೆಯಾಗಿ ಕಂಡಿತು ನೀವು ಬರೆಯುವುದು. ಹೀಗೆ ನೀವು ದಿನಕ್ಕೊಂದು ನಾಟಕ ಬರೆದರೆ ಅದ್ಭುತ ಆದೀತು." ಎಂದೆ. "ಇಷ್ಟು ಬರಬೇಕಾದರೆ ಹಿಂದಿನ ಸಂಚಯ ಎಷ್ಟು ಕಾಲದ್ದಿತ್ತೋ ಯಾರು ಬಲ್ಲರು? ಎಷ್ಟೆಷ್ಟು ಅವಸ್ಥಾಂತರ ಹೊಂದಿ, ಯಾವ ಯಾವ ರೂಪದಲ್ಲಿ ಹಾಯ್ದು ಬಂತೋ ಏನೋ!" ಎಂದು ನೀರು ಬೇಡಿದರು. ಹೋಗಿ ನೀರು ತಂದುಕೊಟ್ಟು ಕೇಳಿದೆ: "ಈ ನಾಟಕ ಬರೆಯುವಾಗಿನ ನಿಮ್ಮ ಅನುಭವ ಏನು?" ಅದಕ್ಕವರು ಮಲಗಿಕೊಂಡೇ ಹೇಳಿದರು: "ನಾಟಕ ಬರೆಯುವಾಗ ಹಿಂದೆ ಎಂದೂ ಇಲ್ಲದ ಮೈಮರೆತ ನನ್ನ ಮೇಲಿತ್ತು. ಪಾತ್ರಗಳೇ ಬಂದು ಮಾತಾಡಿ ನಾಟಕವನ್ನು ಮುಂದುವರಿಸುತ್ತಿದ್ದವು. ನನ್ನ ಕಣ್ಣೆದುರಿಗಿದ್ದ ಚಿತ್ರ ಒಂದೇ ಒಂದು. 'ಆ ಮನಿ'ಯಲ್ಲಿ ಮಕ್ಕಳು ಮಲಗಿಕೊಂಡದ್ದು. ಕಾಲಸಾಗರದಲ್ಲಿ ಚಿರವಾದ ಶೈಶವದ ದ್ವೀಪದ ಮೇಲೆ ಅವರು ಮಲಗಿಕೊಂಡಂತೆ ನನಗೆ ಕಾಣುತ್ತಿತ್ತು. ಈ ವಿಚಾರವೇ ನನ್ನ ಬರವಣಿಗೆಗೆ ವೇಗ ಕೊಟ್ಟಿತು. ನಾಟಕವನ್ನು ಹೇಗೆ ಕೊನೆಗೊಳಿಸಬೇಕೆಂಬುದೇ ನನಗೆ ತಿಳಿದಿರಲಿಲ್ಲ. ನಾಟಕ ತಾನೇ ಮುಂದುವರಿಯಿತು. ಮುಚ್ಚಿದ ಬಾಗಿಲು ತೆರೆದು "ತಾಯಿ" ಬಂದು ನಾಟಕವನ್ನು ಕೊನೆಗೊಳಿಸಿದಳು."

* * * *

ಹೀಗೆ ಈ ಕೃತಿನಿರ್ಮಾಣದ ಹೊತ್ತಿನಲ್ಲಿ ಸಾಕ್ಷಿಯಾಗಿದ್ದುದೇ ನಾನು ಇದಕ್ಕೆ ಕಾರಣ ಎಂದು ಅವರು ಹೇಳುವಂತೆ ಮಾಡಿದೆ. ಇದು ಅವರ ಉದಾರ ಮನಸ್ಸಿನ ಗುರುತು ಅಷ್ಟೆ.

* * * *

ಕನ್ನಡ ನಾಟಕಪ್ರಪಂಚದಲ್ಲಿ ಒಂದು ನಿರ್ದಿಷ್ಟವಾದ ಪ್ರಗತಿಯ ಹೆಜ್ಜೆಯನ್ನು ಗುರುತಿಸಿ ತೋರಿಸುವಂತಹ ಈ ನಾಟಕವನ್ನು ಗ್ರಂಥ ಮಾಲೆಯಲ್ಲಿ ಪ್ರಕಟಿಸಲು ಅನುಮತಿ ಕೊಟ್ಟು ಉಪಕಾರಮಾಡಿದ ಶ್ರೀ. ಕೀರ್ತಿನಾಥ ಕುರ್ತಕೋಟಿಯವರಿಗೆ ನಾನು ಅತ್ಯಂತ ಕೃತಜ್ಞ ನಾಗಿದ್ದೇನೆ.

—ಸಂಪಾದಕ

ಅರ್ಪಣ

ತಾಯಿ-ಮಕ್ಕಳಿಗೆ

ಕೃತಿ

ಭಾವ ಮಲಗಿತ್ತು ಮರೆವಿನೊಳು. ಈ ಬದುಕಿನೊಳು
ಸುತ್ತುಮುತ್ತೂ ಸಾವು ಹೊಂಚಿರಲು ಸುಖವೆಲ್ಲಿ ?
ಯಾರೊ ಹೇಳಿದ ಕತೆಯ ತಿರುಳನ್ನೆ ಸವಿದಾಗ
ಮಿಂಚಿತ್ತು ಉತ್ತರವು ಕನಸು ನನಸಾದಂತೆ.
ಭಾವವೊಡಮುರಿದೆದ್ದು ಕೃತಿಯಲ್ಲಿ ಸಫಲತೆಯ
ಕಾಣಬಯಸುತ್ತಿರಲು ಮೂಡಿಬಂದವು ಮಾತು.
ನೆರಳಿನಾಕೃತಿಯನ್ನೆ ಹಿಡಿದಿಟ್ಟು ಬಣ್ಣದಲಿ
ಮೂಡಿಸಿದಳೈ ಸ್ಮೃತಿಯ ಚಿತ್ರಲೇಖೆಯೆ ಒಲಿದು.
ಮನೆಮನೆಯ ಮಾತುಕತೆ ರಂಗಭೂಮಿಯ ಬೆಳಕಿ-
ನಲ್ಲಿ ಕಂಡರಿಸಿರಲು ಹೊಸ ಅರ್ಥ ಹೊಳೆದೀತು.
ಉಂಡ ನೋವುಗಳನ್ನೆ ಮತ್ತೊಮ್ಮೆ ಕಂಡುಂಡು
ರೂಪಿಸಿರಲೀ ಕೃತಿಯು, ರಸವನನುಭವಿಸುತ್ತ
ಕಣ್ಣ ಹನಿಯನು ಮಿಡಿಯೆ, ನೋವು ಸಾರ್ಥಕವಹುದು.
ಜೀವನವೆ ಕಲೆಯಾಗಿ ಬದುಕಬಯಸುತ್ತಿಹುದು.

ಆ ಮನಿ

. . . .

And with new joy and pride
The little Actor cons another part;
Filling from time to time his 'humorous Stage'
With all the Persons, down to palsied Age,
That Life brings with her in her equipage;
As if his whole vocation
Were endless imitation.

—Wordsworth

ಪಾತ್ರಗಳು

ಮುದುಕ (೯೦) . . . . ಸಾವನುಂಡು ಬದುಕಿದನು.
ಹಣ್ಣುಮಾರುವವಳು (೪೫) . . ಸಾವಿರದಲ್ಲಿ ಒಬ್ಬಳು.

ಮಕ್ಕಳು :

ಕಿಟ್ಟಿ (೧೦)	ಕಾಶಿ (೧೩)
ಶ್ಯಾಮು (೧೦)	ಗಂಗು (೯)
ರಾಮು (೧೧)	ಸುಮ್ಮಿ (೧೦)
ಭೀಮು (೧೨)	ದಮ್ಮಿ (೯)
ಹಣಮು (೧೩)	ತಾರಿ (೯)
ರಂಗ (೧೪)	....
ಗಣಪ್ಯಾ(೧೦)	....
ಕಲ್ಲ (೮)	....
ಭರಮು (೯)	....

ತಾಯಿ. . . . . . ಸತ್ತರೂ ಮಮತೆಯ ಜಾಡು ಹಿಡಿದು ಬಂದ ಜೀವ.
ಸಾಧುನ ಅಯ್ಯನವರು . . . ಕಂಡದ್ದನ್ನು ಸಾರುವವ.

ಅಂಕ : ೧ ದೃಶ್ಯ : ೧

ಆ ಮನೆಯ ದಾರಿಯಲ್ಲಿ

[ತೆರೆಯೆತ್ತಿದೊಡನೆ ಒಳತೆರೆ ಕೊಡುವ ದೃಶ್ಯಚಿತ್ರ ಇದು: ಒಂದು ಊರಿನ ...ದಾರಿಯ ಮೇಲಿದ್ದ ಆಲದಮರದ ನೆರಳಿನಲ್ಲಿ ಒಂದು ತುದಿಗೆ ಒಬ್ಬ ಹಣ್ಣುಹಣ್ಣು ...ಮುದುಕ ಒಂದು ಕೈಯಲ್ಲಿ ಸಕ್ಕರೆಗಿಣಿಯ ಕುಚ್ಚನ್ನು ಹಿಡಿದು, ತನ್ನ ಹೆಗಲನ್ನು ಅದಕ್ಕೆ ಆಧಾರವಾಗಿ ಕೊಟ್ಟು ಇನ್ನೊಂದು ಕೈಯನ್ನು ಚಂಚಿಯಿಂದ ಎಲಿ-ಅಡಿಕೆ ತೆಗೆದು ಸಿದ್ಧ ...ಪಡಿಸುವುದರಲ್ಲಿ ತೊಡಗಿಸಿದ್ದಾನೆ. ಇನ್ನೊಂದು ತುದಿಗೆ ಒಬ್ಬ ಹಣ್ಣು ಮಾರುವವಳು ...ತನ್ನ ಹಣ್ಣಿನ ಬುಟ್ಟಿಯನ್ನು ಎದುರಿಗಿಟ್ಟುಕೊಂಡು, ತಾನೂ ತನ್ನ ಚಂಚಿಯಿಂದ ಎಲಿ ಅಡಿಕೆ ಸಜ್ಜುಗೊಳಿಸುತ್ತಿದ್ದಾಳೆ. ಇದೇ ಅವರ ಏಕಾಂತದ ಬೇಸರವನ್ನು ಕಳೆದು ...ಕೊಳ್ಳುವ ಸಾಧನವಾಗಿದೆ. ಇವರಿಂದ ಮಾತಿಗೆ, ಮಾತಿನಿಂದ ಇದಕ್ಕೆ ಎಷ್ಟು ಸಲ ...ಹೊರುಗಾಡಿದ್ದಾರೋ ಏನೋ ! ಒಂದು ಬೇಸರ ಬಂದಾಗ ಇನ್ನೊಂದು. ಆಲದಮರದ ...ತಂಪುನೆರಳಿನಲ್ಲಿ ಒಬ್ಬರಿಗೊಬ್ಬರು ಜೀವನದಲ್ಲಿ ತಾವು ನಡೆದು ಬಂದ ದಾರಿಯ ನೆನಪು ...ಕೊಡುತ್ತಿದ್ದಾರೆ...

ಆಲದಮರದ ಹಿಂದೆಯೇ ಅನತಿದೂರದಲ್ಲಿ ಒಂದು ದೊಡ್ಡ ವಾಡೆಯಂಥ ಕಟ್ಟಡದ ಮಹಾದ್ವಾರವು ಕಾಣುತ್ತಿದೆ. ಊರಿಗೆ ಹೋಗುವ ದಾರಿ ಇದನ್ನು ಬಳಸಿಕೊಂಡು ಹೋಗುತ್ತದೆ. ಇದಕ್ಕೂ ಊರಿಗೂ ನಡುವೆ ಒಂದು ಕೊಳ್ಳವಿದೆ. ಊರ ಕೋಟೆಯ ಬುರುಜುಗಳು ಒಂದರ ಹಿಂದೊಂದು ತಲೆ ಹತ್ತಿ ನಿಂತವರಂತೆ ದೂರದಲ್ಲಿ ಕಾಣುತ್ತಿವೆ. ಊರು ಆ ಬುರುಜುಗಳ ಆಚೆ ಅಥವಾ ಒಳಗೆ ಇರಬೇಕು. ಆಲದ ಮರದ ಹಿಂದಿನ ವಾಡೆ ಹಾಳುಬಿದ್ದು ನಿರ್ಜನವಾಗಿದೆ. ಇವರಿಗೆ ಇಂಥಲ್ಲಿ ಗಿರಾಕಿ ಯಾರು ? ಇದ್ದಾರೆ. ವಾಡೆಯ ಹತ್ತಿರವೇ ಇದ್ದ ಸರಕಾರಿಶಾಲೆಯ ಹುಡುಗರು; ಅವರೇ ಇವರ ಗಿರಾಕಿ....

ಮುದುಕ ಸಕ್ಕರೆಗಿಣೆ ಮಾರುವುದಲ್ಲದೆ ಹಾಳುಬಿದ್ದ ವಾಡೆಯ ಕಾವಲುಗಾರನೂ ಆಗಿದ್ದಾನೆ. ನಿರ್ಜನವಾದ ವಾಡೆ ಮಕ್ಕಳಿಗೆ ಮಾಟದ ಮನೆಯಾಗಿದೆ, ನಂದನವನ ವಾಗಿದೆ. ಆದರೆ ಊರವರಿಗೆಲ್ಲ – ದೊಡ್ಡವರಿಗೆ – ಅದೇ ಭಯದ ತವರಾಗಿದೆ. ಹಗಲು ಕೂಡ ಹತ್ತಿರ ಹಾಯಲು ಹೆದರುತ್ತಾರೆ. ಇಂತಹ ನಿರ್ಜನವಾದ ವಾಡೆ ಮಕ್ಕಳನ್ನು ಹೇಗೆ ಮೋಹಗೊಳಿಸಿರಬೇಕು ? ಅಲ್ಲಿದ್ದ ತೂಗು-ಮಂಚ, ಬಾರಿಯ ಗಿಡ, ಕಪ್ಪಲಿ ಬಾವಿ, ಪೇರಲಕಾಯಿ, ಆಟದ ಸ್ವಾತಂತ್ರ್ಯ, ಎಲ್ಲಕ್ಕೂ ಹೆಚ್ಚು ಆ ಯಾರೂ ಇಲ್ಲದ ಮನೆ. ಇವೇ ದೊಡ್ಡವರಿಗೆ ಭಯ ಕೊಡುತ್ತವೆ; ಮಕ್ಕಳಿಗೆ ಮಾಟ ಮಾಡುತ್ತವೆ. ಮುದುಕ ಇರುವುದೂ ಆ ಹಾಳುಬಿದ್ದ ವಾಡೆಯ ಹತ್ತಿರವೇ....

ಹಣ್ಣುಮಾರುವವಳು ಈ ಸ್ಥಳಕ್ಕೆ ಇತ್ತೀಚೆಗೆ ಬಂದವಳು. ಅಪರಿಚಿತಳು...]

ಹಣ್ಣುಮಾರುವವಳು

(ಚಂಚಿಯಿಂದ ಅಡಿಕೆ ತೆಗೆದು ಬಾಯಲ್ಲಿ ಹಾಕಿಕೊಂಡು, ಎಲೆ ತೆಗೆದು ಕೈಯಲ್ಲಿ ಹಿಡಿದುಕೊಂಡು, ಸುಣ್ಣದ ಡಬ್ಬಿ ತೆಗೆದು ಮುಚ್ಚಳ ತೆರೆದು ನೋಡಿ ಸುಣ್ಣ ಇಲ್ಲದ್ದನ್ನು ಕಂಡು, ಮುದುಕನ ಕಡೆಗೆ ನೋಡದೆ)

ಯಜ್ಜಾ, ಒಂದೀಟು ಸುಣ್ಣದಕಾಯಿ ಇತ್ತಾಗ ಒಗೀತೀಯೇನು ? ಸುಣ್ಣಾನs ತೀರೇತಿ.

ಮುದುಕ

(ಚಂಚಿಯೊಳಗಿಂದ ಸುಣ್ಣದ ಡಬ್ಬಿ ಹೊರತೆಗೆದು ಅವಳ ಕಡೆಗೆ ಒಗೆದು)

ಒಂದು ಹೋಳು ಅಡಿಕಿ ಐತೇನು ? ಒಗಿ ಇತ್ತಾಗ.

ಹಣ್ಣುಮಾರುವವಳು

(ಅಡಿಕೆ ಹೋಳು ಒಗೆದು)

ಅಲ್ಲೋ ಯಜ್ಜಾ, ನಾನೂ ಇಲ್ಲಿ ಕುಂಡ್ರಾಕ ಹತ್ತಿ ಬಾಳ ದಿವಸಾದವು

ಆಗಾಳೆ. ನೋಡೇ ನೋಡ್ತೇನು, ಈಟೊಂದು ದೊಡ್ಡ ವಾಡೇವು ಐತಿ ಮಾರಾಯನಂಪಾಗ. ಯಾರೂ ಇರಾಕs ಬರವಲ್ರಲ್ಲ ! ಏನಿದ್ದೀತು ?

(ಗದ್ದಕ್ಕೆ ಕೈಹಚ್ಚಿ ಬಾಗಿ ಮುದುಕನ ಮುಖ ನೋಡುವಳು)

ಮುದುಕ

(ಹತ್ತಿರ ಬಿದ್ದ ಅಡಿಕೆ ಹೋಳು ಎತ್ತಿಕೊಂಡು ಬಾಯಲ್ಲಿ ಹಾಕಿಕೊಳ್ಳುತ್ತ)

ಏನ್ ಇರಾಕ ಬರತಾರ ತಂಗಿ ! ಗೊತ್ತಿಲ್ಲ ಆ ಮನೀದು ನಿನಗ. ಕೇಳಿದರ ಅದೊಂದು ದೊಡ್ಡ ಕತೀನs ಐತಿ.

(ಎಲೆಗೆ ಸುಣ್ಣ ಹಚ್ಚುತ್ತ)

ಗೊತ್ತಿದ್ದವರು ಯಾಕ ಬಂದಾರು, ಅಲ್ಲೆ ಜೀವಾ ಕೊಡಾಕ ? ಅಲ್ಲ ಮತ್ತ ಯಾರ್ರs ಇರಾಕ ಬಂದ್ರ ನಮ್ಮನ್ನ ಯಾರು ಕೇಳಾವರಿಲ್ಲೆ ?

(ಎಲೆಯನ್ನು ಬಾಯಲ್ಲಿ ಹಾಕಿಕೊಳ್ಳುತ್ತ)

ಪಾಪ, ದಿನಾ ಸಾಲೀ ಹುಡುಗೂರು ಆಡಾಕ ಬರತಾರ ಅಂತ ಯಾಡ್ ಬಿಲ್ಲೀ ಯಾಪಾರರೆ ಆಕ್ಕೈತಿ.

(ತಂಬಾಕು ಹಾಕಿಕೊಂಡು)

ಇಲ್ಲಿದ್ದರ ಏನೈತಿ ? ಏsನ್ ತಿಳಿದವರು ತಗೊಂಬೊ ಸಾವಾನs ಇವು ನಮ್ಮವು ?

(ಆಕೆಯ ಕಡೆಗೆ ನೋಡಿ ನಗುವನು)

ಹಣ್ಣು ಮಾರುವವಳು

(ಬಟ್ಟಿನಿಂದ ಸುಣ್ಣ ಬಾಯಲ್ಲಿ ಹಾಕಿಕೊಳ್ಳುತ್ತ)

ಯಾಕ, ನಮ್ಮ ಸಾಮಾನಕ್ಕ ಏನಾಗೈತಿ ? ನಾವೇನು ಹುಳುಕ-ಟೊಳಕ ಕೊಡತೀವೆ ?

(ಸೆರಗಿನಿಂದ ಮುಖದ ಬೆವರು ಒರಸಿಕೊಳ್ಳುತ್ತ)

ಉಶ್ಯ ! ಇಂತಾ ಗಿಡದ ನೆಳ್ಳಾಗ ಕುಂತರೂ ಬಿಸಲು ಮೈ ಕುದಸ್ತೈತಿ ನೋಡು ಯಜ್ಜಾ !

(ಕುತೂಹಲದಿಂದ)

ಅಲ್ಲ ಮುದಕಪ್ಪಾ, ಆ ಮನೀದೇನೊ ಕತಿ ಐತಿ ಅಂದೆಲ್ಲ, ಏನದು ?

(ಧ್ವನಿಯನ್ನು ಬೇಸರಕ್ಕೆ ತಿರುಗಿಸಿ)

ಮತ್ತ ಸಾಲಿ ಬಿಟ್ಟು ಹುಡುಗೂರು ಬರೋಮುಟ ಯಾಪಾರ ಇಲ್ಲ,ಟಾಪಾರ

ಇಲ್ಲ; ಆ ಕತಿಅರೆ ಹೇಳು. ನಾನೂ ಈ ಊರಾಕಿ ಅಲ್ಲ, ಏನು ಅಲ್ಲ.

(ಉಸಿರೆಳೆದು ದುಃಖದ ನೆನಪಿನಿಂದ)

ಹಿರ್‍ಯಾ ಹ್ವಾದ ವ್ಯಾಗ ಹೀಂಗs ಹೊಂಟಬಂದೀನು ಆತು, ಹೊಟ್ಟೀಹೊರ ಕೊಣ್ಣಾಕ ಈ ಊರಿಗೆ.

(ಒಂದು ಬದಿಗೆ ಉಗುಳುವಳು)

ಮುದುಕ

(ಮೀಸೆಯನ್ನು ತಿಕ್ಕುತ್ತ)

ಏನ್ ಕತೀ ತಗಿ, ಅದನೇನು ಹೇಳೋದು? ಕೇಳಿದರ ಪುಣ್ಯಾ ಬರೋ ಕತಿ ಅಲ್ಲ ಏನಲ್ಲ.

[ಒಂದು ಹಳೆಯ ದೊಡ್ಡಾಟದ ಹಾಡನ್ನು ಗುಣುಗುಣಿಸುವನು. ಒಮ್ಮೆಲೆ ಹಳೆಯ ನೆನಪು ಝುಗ್ಗನೆ ಎದುರಿಗೆ ಬಂದಂತಾಗಿ, ಬಾಲ್ಯದಲ್ಲಿ ತಾನು ಹಾಕಿದ ಸೋಗಿನ ದನಿಯಲ್ಲಿಯೇ "ಹಾs ಸೀತಾsss! ಹಾs ಲಕ್ಷ್ಮಣಾsss!" ಎಂದು ಸಾಭಿನಯವಾಗಿ ಕುಳಿತಲ್ಲಿಯೇ ಬಾಗುವನು. ಹಾಗೆಯೇ ಮುಂದೆ "ತೋಂ ಝುಣಕಝುಣಕ ತೋಂ ಥೈಥೈ" ಎಂದು ತಾಳವನ್ನುಬಾಯಲ್ಲಿಯೇ ನುಡಿದು ಕಳ್ಳದನಿಯಲ್ಲಿ ಒಂದು ದೊಡ್ಡಾಟದ ಹಾಡನ್ನು ಹೇಳಿಕೊಳ್ಳುವನು.]

ಹಣ್ಣುಮಾರುವವಳು

ಇದೇನ್ ಮುದಕಪ್ಪಾ, ಆಟದಾಗಿನ ಪದಾ ನೆಪ್ಪಾದವೇನು ಆ ಮನಿ ಕತಿ ಕೇಳಿದರ ?

ಮುದುಕ

ಏನ್ ಹೇಳ್ಲಿ ತಂಗಿ, ಮುಪ್ಪಿನಾಗ ನೆಪ್ಪs ಊರುಗೋಲು. ಅದನ್ನ ಬಿಟ್ಟರ ಏನೈತಿ ನಮಗ ಬದಕಲಾಕ? ಸಾವು ಆಗಾಲೆ ಬಂದು ಕೈಹಿಡಿದು ಎಳ್ಯಾಕ ಹತ್ತೈತಿ; ಹೊಂಟೇನ ಅದರ ಬೆನ್ನುಹತ್ತಿ....ಅಗಾ ನೋಡು ತಂಗಿ, ಸಾವು ಅನ್ನೊಟಿಗೇ ನೆಪ್ಪಾತು ನೋಡು. . . ಆ ಮನಿ ಕತಿ ಹೇಳ ಬೇಕು ಅಂದೆಲ್ಲs ? ಇದ್ನೋಡು, ಬಾsಳ ಹಳೇ ಮಾತೇನವಾ, ನೀ ಆಗೇನು ಹುಟ್ಟಿರಾಕಿಲ್ಲ. . . ಮೊದಲ್ ಚುಣೇಗೆ ಈ ಊರಿಗೆ ಗಂಟಿನ ಬ್ಯಾನಿ ಬಂತು...ಆಗಿನ್ನೂ ಹಿರೇಗೌಡರು ಇದ್ದರು...ನನಗಿನ್ನೂ ಐನ ಹರೆ ಆಗ....

(ಹಣ್ಣುಮಾರುವವಳು ಮುಖ ಕೈಗೆ ಒರಗಿಸಿ ತಲ್ಲೀನಳಾಗುವಳು)

ಗೊತ್ತೈತೇನು ತಂಗಿ ನಿನಗ ?

ಹಣ್ಣು ಮಾರುವವಳು

ಇಲ್ಲ ತಗಿ ಯಜ್ಜಾ. ನಮಗ ಗೊತ್ತಿದ್ದದ್ದು ನೋಡು ಗುದ್ದವ್ವನ ಬ್ಯಾನಿ. ಯಾಕಂದ್ರ ನಮ್ಮವ್ವ ಸತ್ತದ್ದು ಆ ಬ್ಯಾನಿ ಬಂದಽ ಅಂತ. ನನಗೇನ್ ತಿಳಿ ಬೇಕು ಆಗ? ನಾ ಇನ್ನೂ ಎಡ್ಡು ವರ್ಸದಾಕಿ ಇದ್ನೆಂತ. ನನಗ ಮೊಲಿ ಕೊಟಗೊಂತನಽ ಜೀಂವಾ ಬಿಟ್ಲಂತ ನಮ್ಮವ್ವ.

(ಉಸಿರ್ಗರೆಯುವಳು)

ಮುದುಕ

ನಾ ಹೇಳೋ ಬ್ಯಾನಿ ತಂಗಿ, ಇದರ ಅಪ್ಪ ಅದು. ಇದಕ್ಕೂ ಮೊದಲ ಕಟ್ಟಽ ಬಂದದ್ದು. ಬಂದು ಏನ್ ಹಾವಳಿ ಹಾಕಿತೆಂದೀ... ಛೀ...ಛೀ... ರಾವಣಾಸುರ ಬಾಣಾಸುರ ಕೂಡೇ ಬಂದ್ಹಾಂಗಾಗಿತ್ತು ನೋಡು...ಏನ್, ಸುಡಗಾಡಕ ಮನೀಗೆ ಎಡತಾಕೋದರಾಗ ಜನ ಗೋಳಿಟ್ಟಿತು. ಅದರಾಗ ನೋಡು, ಹಂತ್ಯಾಕ ಬಂದವರಿಗೆ ಬಡಕೊಂತಿತ್ತು ಆ ಬ್ಯಾನಿ. ಅಂದ ಮ್ಯಾಗ ಹೊರಾಕ ಬರವರು ಯಾರು? ಸತ್ತರೂ ಬರಲಿಲ್ಲ, ಇದ್ದರೂ ಬರಲಿಲ್ಲ. ಹೆಣಾ ಸುಡಗಾಡ ಕಾಣದ ಬಿದ್ದಲ್ಲೆ ಬಿದ್ದಿದ್ದವು ನೋಡು... ನಾನೂ ಬೇಕಾದಷ್ಟು ಮಂದಿಗೆ ಮಣ್ಣುಕೊಟ್ಟೆ, ಆದರೂ ನನ್ನ ಸಮೀಪ-ಪಕ್ಕ ಬರಬೇಕು ಆ ಬ್ಯಾನಿ? ಕೇಳಬ್ಯಾಡ... ಆದರ ನನ್ನ ಮನೀನಽ ನುಂಗಿತು, ಸುಡಗಾಡನುಂಗ. ಏಸು ಮಂದಿ ಅಣ್ಣತಮ್ಮಂದಿರು, ಏಸು ಮಂದಿ ಅಕ್ಕತಂಗೇರು, ಹಿರ್ಯಾ ಹಿರೇಳು...ಶಿವ ಶಿವ! ತುಂಬಿದ ಮನೀನಽ ಒಂದಽ ಏಟಿಗೆ ಬರೇದು ಮಾಡಿತು ನೋಡು. ನಾ ಒಬ್ಬನಽ ಎಲ್ಲಾರನ್ನೂ ಹೊತ್ತು ಹಾಕಿದೆ. ಏನ್ ಸನ್ನ ನಸೀಬೋ ಅಂತೀನಿ!...ಹಿರೇಗೌಡರ ಮನಿನೂ ಆಗ ತುಂಬಿತ್ತು...ಚೌರ ಬೀಸತ್ತಿದ್ದವು ಚೌರ,ಆಗ...ದೌಲತ್ತೂ ಅಂದರ ದೌಲತ್ತು ಅದು...ಇಕಾ,

(ತಲೆಯ ಮೇಲಿನ ಪಟಗ ತೆಗೆದು ತೋರಿಸಿ)

ಈ ಪಟಗಾ ಆ ಧಣೇರು ಕೊಟ್ಟದ್ದು... ಹಾಗಽ ಅಲ್ಲ ಮತ್ತ, ತಲೀ ಮ್ಯಾಗಿಂದ ತಗದು ಕೊಟ್ಟದ್ದು. ಯಾತಕ್ಕ ಗೊತ್ತೈತೇನು? ಒಮ್ಮೆ ಹೀಗ ಆತು ನೋಡು... ಹಿರೇಗೌಡರ ಬೀಗರು ಬಂದಿದ್ದರು. ಅವರ ಸಂಗಾಟ ಅವರ ಲವಾಜಮ್ಮೂ ಬಂದಿತ್ತು. ನಾಲ್ವತ್ತು ಮಂದಿ ಕುದುರಿ ಸವಾರರೂ ಇದ್ದರು; ಹೀಗಽ ಮಾತು ಹೊಂಟಿತು. ಬೀಗರ ಪೈಕಿ ಒಬ್ಬನ ಅಂದ:

“ನಿಮ್ಮೂರಾಗ ಈ ಕುದುರಿ ಹತ್ತೋ ಗಂಡಸರು ಯಾರಾರ ಇದ್ದಾರೇನು?” ಅಂತ. ಗೌಡರಿಗೆ ಮಾನ ಮುಕ್ಕಾದ್ಹಾಗ ಆತು. ನನ್ನ ಕಡೆ ನೋಡಿದರು. ದಣೀ ಪಾದ, ಅಂದೆ. ನನ್ನ ನೋಡಿ ಅತ್ತಾಗಿನವರೆಲ್ಲಾ ನಕ್ಕರು. ಕಳ್ಳು ಹಿಚಿಕಿದ್ಹಾಗ ಆತು. ಗೌಡರಿಗೆ ಗೊತ್ತು ನಂದು. ಹುಂ ಅಂತ ಕಣ್ಣು ಚಿವುಟಿದರು. ಕೇಳತೀಯಾ ಆವ್ಯಾಗ? ಆ ಕುದುರಿ ಹಂತ್ಯಾಕ ಹೋದೆ. ನೋಡಿದರ ಹೀsಗ ಸೊಳಕ್ಯಾ ಇತ್ತು ಕುದುರಿ. ಆದರ ಜಾತೀ ಕುದುರಿ ಆಂ! ಸವಾರ ನನ್ನ ಕೈಯಾಗ ಲಗಾಮ್ ಕೊಟ್ಟನೋ ಇಲ್ಲೋ ಅನ್ನೊಟಗೆ,– ನಾ ಎಂತಾ ಮಗ– ಅದರ ಬೆನ್ನಮ್ಯಾಗs ಇದ್ದೆ. ಕುದುರಿ ಒಂದು ಜೀಪುಕೊಟ್ಟು ಓಡಾಕಹತ್ತ್ಯನೋಡು...ಮಿಂಚಿನಂತಾ ಮಿಂಚು ಅದಕ ಹಿಂದಾಗಬೇಕು...ಗಾಳೀ ಕೂಡ(ಟ) ಜಿದ್ದುಕಟ್ಟಿ. ಏನ್ ಹೇಳ್ಲೀ ಎಲ್ಲಾರೂ ಗಾಬರೀನ ಆಗಿದ್ದರು. ನಂದು ಮುಗೀತ ಅಂತs ತಿಳಿದಿರ ಬೇಕು. ಮುಂದ ನೋಡು, ಒಂದು ತಾಸಿನಾಗ ತಿರಿವ್ಯಾಡಿಕೊಂಡು ತಿರಿಗಿ ಬಂದೆ. ದೂರ ಗೌಡರು ಹಾಗ ನಿಂತಿದ್ದರು, ನಾ ಇಲ್ಲೇ ಕುದುರಿ ಇಳಿದು ಲಗಾಮ್ ಅದರ ಮ್ಯಾಗs ಒಗದು ಮುಂದ ಹೊಂಟರ ನನ್ನ ಬೆನ್ನ ಹಿಂದಿಂದ ನಾಯಾಗಿ ಬಂತು ಕುದುರಿ, ಬುರುಗು ಸೋರಿಸಿಕೊಂತ. ಗೌಡರಿಗೆ ಸಂತೋಸ ತಡೆಯಾಣಾಗಲಿಲ್ಲ. ಹಂತ್ಯಾಕ ಕರಕೊಂಡು ಡುಬ್ಬಾ ಚಪ್ಪರಿಸಿ, ತಮ್ ತಲೀಮ್ಯಾಗಿನ ಜರದ ಪಟಗಾ ತಗದು ನನ್ನ ತಲೀಮ್ಯಾಗ ಇಟ್ಟರು.

(ಕೈ ಮುಂದೆ ಮಾಡಿ ಕೈಯಲ್ಲಿಯ ಕಡಗ ತೋರಿಸಿ)

ಮುಂದ ಪಿರೂತಿಯಿಂದ ಈ ಕೈಯಾಗ ಕಡಗ ತೊಡಿಸಿದರು.

(ಉಸಿರ್ಗರೆದು, ತನ್ನನ್ನೇ ಉದ್ದೇಶಿಸಿಕೊಂಡು)

ಇಂತಾ ದಣೇರ್ನ ಕಳಿಸಿ ಕುಂತೀದಿ ಮಗನ, ತಿಳಿಯಾಣಿಲ್ಲs ನಿನಗ ? ಏನ್ ಕಂಡೀದಿ ? ಏನ್ ಸುಕ ಐತಿ ಅಂತ ಇದ್ದೀದಿ ಮಗನ ? ಥೂ, ನಾಚಿಗ್ಗೇಡೆಲೆ ನೀನೂ...

(ಮುದುಕನ ಈ ಉದ್ದ ಮಾತು ನಡೆದಾಗೆಲ್ಲ ಹಣ್ಣುಮಾರುವವಳು ನಡು ನಡುವೆ ಸರಿ ಕಂಡ ಜಾಗಕ್ಕೆ ‘ಹುಂ ಹುಂ’ ಎಂದು ಆಶ್ಚರ್ಯ, ಕುತೂಹಲ, ಮೆಚ್ಚಿಗೆ ತೋರಿಸಿ ಹುರುಪುಗೊಡುವಳು.)

ಹಣ್ಣು ಮಾರುವವಳು

ಅಯ್ಯ ಯಜ್ಜಾ, ಇದೇನು ನಿಂದು ನೀನs ಮಾತಾಡಿಕೊಣ್ಣಾಕ ಹತ್ತಿದೆಲ್ಲ!

ಪಾಡೈತಿ ಹಗಾರ, ನಿನ್ನ ತೆಲೀಮ್ಯಾಗಿನ ಪಟಗಾಕ್ಕ ಈಟೆಲ್ಲಾ ಕತಿ ಐತ್ಯs? ಹಾಗಾರೇನು, ನಿನ್ನ ಹಂತ್ಯಾಕಿದ್ದ ಎಲ್ಲಾ ಸಾಮಾನಕ್ಕೂ ಹೀಂಗs ಏನಾರ ಒಂದು ಕತಿ ಇರಬೇಕು ತಗಿ. ಅಲ್ಲ ಯಜ್ಜಾ, ಆ ಮನಿ ಕತಿ ಹೇಳಂದ್ರ ನಿನ್ನ ಪಟಗಾದ ಕತಿ ಹೇಳತೀಯಲ್ಲ ಏನ್ ಅನಬೇಕು ನಿನಗ ? ಹೀಂಗ್ಯಾಕ ಆಕ್ಕಿದ್ದೀತು ಅಂತೀನಿ ?

ಮುದುಕ

(**ಸಕ್ಕರೆಗಿಣಿಯ ಕುಚ್ಚು ಹೆಗಲಮೇಲಿರುವಾಗಲೆ, ತೆಗೆದ ಪಟಗಾ ಸಾವಕಾಶ ವಾಗಿ ಸುತ್ತಿಕೊಳ್ಳುತ್ತ**)

ಹೀಂಗ್ಯಾಕಂತೀಯೇನು ತಂಗಿ ? ತೊಂಬತ್ತು ವರ್ಸದ ಬಾಳೀವು ಏನು ಸಣ್ಣದs ? ಒಂದರ ಬೆನ್ನುಹತ್ತಿ ಇನ್ನೊಂದು ನೆಪ್ಪು ಬರತೈತಿ. ಬರೇ ನೆಪ್ಪಿನಾಗs ಕಾಲಾ ಕಳೀಯೋದಿನ್ನ. ಈ ನೆಪ್ಪಂದರೇನು, ಕೊಳ್ಳೀದೆವ್ವ ಇದ್ದಾಂಗ ನೋಡು ತಂಗಿ. ಬರೇ ದಾರಿತಪ್ಪಸೊ ಕೆಲಸಾನ ಅವು ಮಾಡೋದು. ಹಂs ಹಿರೇಗೌಡರು ಅಂತ ಹೇಳಿದ್ನೆಲ್ಲ ಈಗ...

ಹಣ್ಣು ಮಾರುವವಳು

ಹೂಂ.

ಮುದುಕ

ಅವರು ನೋಡು ಈ ಮನಿ ಕಟ್ಟಿಸಿದ್ದು...

ಹಣ್ಣು ಮಾರುವವಳು

ಹೀಂಗs. ಊರು ಬಿಟ್ಟು ಈಟು ದೂರ ಯಾಕ ಕಟ್ಟಿಸಿದರು ?

ಮುದುಕ

ಹೇಳಿದ್ನೆಲ್ಲಾ ಊರಿಗೆ ಒಂದು ಪಿಡುಗು ಬಂತೂ ಅಂತ. ಅದರ ಕೈಯ್ಯಾಗಿಂದ ತಪ್ಪಿಸಿಕೊಣ್ಣಾಕ ಇಲ್ಲೆ ಈ ಮನಿ ಕಟ್ಟಿಸಿದರು ಹಿರೇ ಧಣೇರು. ಆದರ...

(ಉಸಿರ್ಗರೆಯುವನು)

ಹಣ್ಣು ಮಾರುವವಳು

ಉಶ್ಶ್ ಅಂತ ಕುಂತೆಲ್ಲೊ ಮುದಕಪ್ಪ! ಮನೀ ಸುದ್ದಿ ಕೇಳಿದರ ಬ್ಯಾನಿ

ಸುದ್ದಿ ಹೇಳತಿಯಲ್ಲಾ, ಏನಿದು ?

ಮುದುಕ

ಹೇಳತೀನಿ ತಡಿ ತಂಗಿ. ನಮ್ಮೂರ ಹಿರೇಗೌಡರು ಇದನ್ನ ಕಟ್ಟಿಸಿದರು ಅಂದ್ನೆಲ್ಲಾ, ಆಗೇನಿತ್ತಿಲ್ಲೆ? ಅಡಿವಿ. ಈಗ ಇನ್ನೂ ಸರಕಾರಿ ಸಾಲಿ ಆಗಿ, ಒಂದೀಟು ಊರು ಇಲ್ಲೀಮಟ ಬೆಳಕೊಂತ ಬಂದೈತಿ. ನಾ ನೋಡಿದ ಮಾತಿದು...ಇಲ್ಲೆ, ಇದಽ ಜೀರ್ರ್ರಕಳ್ಳ್ಯಾಗಽ ಅಲ್ಲೇನು, ನಮ್ಮೂರ ಹಿರೇ ಗೌಡರ ಹುಡುಗನ್ನ ಕಡದು ಕೊಂದರು ವರ್ಮದ ಮ್ಯಾಗ. ಆ ಹುಡುಗ ಚೀರಿದರ, ನಟ್ಟು ಕಡಿಯಾಕ ಹೊಂಟಾವ ನಾ, ಹಾಗಽ ಓಡಿಕೊಂತ ಬಂದು ನೋಡಿದರ ಏನೈತಿ ಅಲ್ಲೆ ! ಎಲ್ಲಾ ಕತೀನಽ ಮುಗದು ಹೋಗಿ ಬಿಟ್ಟಿತ್ತು. ದಡಾ ಬಿಟ್ಟು ರುಂಡ ಕುಣೀತಿತ್ತು, ಕಣ್ಣು ಪಿಳಿಪಿಳಿ ಬಿಡತಿತ್ತು. ಆ ಮುಕಾ ನೋಡಿದರ ಮರಮರಾ ಅಂತಿತ್ತು ಜೀವ ! ಕಡಿದವರೆಲ್ಲಾ ಆಗಾಲೆ ಫರಾರಿ ಆಗಿದ್ದರು.

(ಸ್ವಲ್ಪ ತಡೆಯುವನು)

ಹಣ್ಣು ಮಾರುವವಳು

(ಮೂಗೇರಿಸಿ ದೀನಧ್ವನಿಯಲ್ಲಿ)

ಅಯ್ಯ್ಯಽಽ ಪಾಪ...!

ಮುದುಕ

ಅದನೇನ್ಮಾಡ್ತೀ, ಇನ್ನೂ ಕೇಳು.ನಮ್ಮ ಹಿರೇಗೌಡರ ಮೊದಲನೇ ಮದಿವಿ ನಿಬ್ಬಣ ಈ ಹಾದ್ಯಾಗ ಹಾದು ಹೋಗಾಗಽ ಕಳ್ಳರು ಬಂದು ಮುಗಿ ಬಿದ್ದರು. ಏನ್ ಹೇಳ್ಲಿ ತಂಗಿ ! ಎಲ್ಲಾರ ಜೀಂವ ಬಾಯಾಗ ಬಂದಿದ್ದವು... ನೋಡು, ನಾ ಆಗಿನ್ನೂ ಹದಿನಾರು ವರ್ಸದಾವ ಇದ್ದೆ. ಮೆರವಣಿಗಿ ಕುದುರಿ ಹಿಡಕೊಂಡು ನಾನಽ ಹೊಂಟಿದ್ದೆ... ಇದಽ ಆಲದಮರದ ಹಂತ್ಯಾಕಽ ಇಬ್ಬರ ಜೀಂವಾ ಇದಽ ಬಡಿಗೀಲೆ....

(ಕೈಯಲ್ಲಿಯ ಬಡಿಗೆಯಿಂದ ನೆಲಕ್ಕೆ ಬಡಿಯುವನು)

ಹೊಡದು ತೊಗೊಂಡೆ...ಹೋದ ದಿವಸ ಬಾ ಅಂದರ ಬಂದಾವಽ?... ಅಂತಾವ ಹೀಗಾಗೀನಿ,...ಸಕ್ಕರಗಿಣಿ ಮಾರಿಕೊಂತ ಕುಂತೀನಿ, ಈಟೆಲ್ಲ ಸಾವು ಮನಸಿನ್ಯಾಗ ತುಂಬಿಕೊಂಡು. ಮನಿ-ಮಾರು, ವತನಾ-ವಾಡೆ ಯಾವದೂ ಉಳೂದುಲ್ಲ ತಂಗೀ....

ಹಣ್ಣು ಮಾರುವವಳು

(ಮುದುಕನ ಕಡೆಗೆ ಕೈ ತಿರಿವಿ)

ಹೊಗೋ ಯಜ್ಜಾ,...ನಿನಗ ಕ(ಖ)ರೇವಂದ್ರೂ ಅರವು-ಮರವು ಆಗೇತಿ ನೋಡು ! ಅಲ್ಲಾ ಈ ವಾಡೇದ್ದು ಏನಾತು ಹೇಳಂದ್ರ, ನಡನಡಕ ಮತ್ತೇ ನಾರ ತಕ್ಕೊಂಡು ಕುಂದರತೀಯಲ್ಲ? ಏನನಬೇಕು ನಿನಗ ಅಂತೀನಿ ! ಮತ್ಯಾರರs ಆಗಿದ್ದರ ಈ ನಿನ್ನ ಕತೀಗೆ ಎದಿ ಒಡಕೊಂಬೋ ಆಟ!... ನಾನೂ ಕಗ್ಗ ಹೆಣಮುಗಳು, ಅತ್ತಹಾದು, ಇತ್ತಹಾದು, ಎಲ್ಲಾ ದುಕ್ಕಾನು ಉಂಡಾಕಿ ಅಂತ ನೀ ಹೇಳಿದ್ದನ್ನೆಲ್ಲಾ ಕೇಳಿಕೊಂತ ಕುಂತೀನಿ... ಒಬ್ಬ ರಾದ ಮ್ಯಾಗ ಒಬ್ಬರಂತ ಮೂರು ಮಂದಿ ಗಂಡರ್ನ ನುಂಗಿ ನೀರು ಹಿಡ ದಾಕಿ ನಾ, ಸಾವಂದರ ಉಂಡು ತಿಂದ್ಹಾಂಗ ದಿನನಿತ್ಯದ ಮಾತಾಗೇತಿ ನನಗ; ನೀನರೆ ಸಾವು ಬಿಟ್ಟು ಮತ್ತೊಂದು ಹೇಳವಲ್ಲಿ...

ಮುದುಕ

ಹೌದ ತಂಗಿ, ಅದನ್ನ ಬಿಟ್ಟು ಮತ್ತೇನೈತಿ ಈ ಮುದುಕನ ಹಂತ್ಯಾಕ ? ಮತ್ತ ನೀನs ಹೇಳು, ಈ ಮರ್ತೇದಾಗರೆ ಹುಟ್ಟು ಸಾವು ಬಿಟ್ಟು ಮತ್ತೇ ನೈತಿ ಹೇಳಾಕ ?

ಹಣ್ಣು ಮಾರುವವಳು

ಇರ್ಲಿ ಹೇಳು ಮುಂದೇನಾತು ?

ಮುದುಕ

ಮುಂದ ನೋಡು, ಊರಿಗೆ ಬಂದ ಪಿಡುಗು ಎಲ್ಲಾ ಮನೀನೂ ಗೆಬರಾಡಿ ಬಿಟ್ಟಿತು... ಮನಿಮನಿಗೆ ಹೆಣ... ಹಾದಿಹಾದಿಗೆ ಹೆಣ... ಒಯ್ಯಾಕ ಮಂದಿಲ್ಲದ್ದಕ್ಕ ಒಂದೇಟಿಗೆ ನಾಲ್ಕು, ಆರು, ಒಂದs ಸಿದಿಗೀಮ್ಯಾಗ ಒಯ್ದರು... ಜನಾ ಗಾಬರಿ ಆಗಿ ಊರು ಬಿಡಾಕಹತ್ತಿದರು. ಊರು ಬಿಟ್ಟರೇನಾತು, ಸಾವು ಬಿಡತೈತೇ? ಚೇ... ಚೆಚೆ, ಇನ್ನೂ ನೆನಸಿದರ ಕಣ್ಮುಂದ ಬಂದ್ಹಾಂಗs ಆಕ್ಕೈತಿ... ಈ ಜೀಂವಾ ಯಾಕಾರ ಹುಟ್ಟಿ ದ್ದೀತೊ, ಯಾಕಾರ ಬಾಳ್ತೈತೋ ಅಂತ ಅನಸ್ತೈತಿ; ಏನು ಸುಕಾ ಕಾಣ ತ್ತೈತೋ, ಯಾಕ ದುಕ್ಕಬಡತೈತೋ ಒಂದೂ ಗೊತ್ತಾಗಾಣಿಲ್ಲ. ಆ ಮನೀದಂದೆಲ್ಲ, ಊರು ಬಿಟ್ಟು ಹೊರಗ ಮನಿ ಕಟ್ಟಿಸಿ, ಅಲ್ಲಿ ಬಂದಿದ್ದರ

ಪಿಡುಗು ಬೆನ್ನು ಬಿಡತ್ಯೆತಿ ಅಂತ ತಿಳಕೊಂಡು, ನೀರು ಸುರುಪಿದಂಪಾಗ ರೊಕ್ಕಾ ಕರ್ಚುಮಾಡಿ ಕಣ್ಣುಮುಚ್ಚಿ ಕಣ್ಣು ತಗೋದರಾಗs ಇದನ್ನಕಟ್ಟಿ ಸಿದರು ತಂಗಿ. ಊರಾಗಿನ ತಮ್ಮ ದೊಡ್ಡ ವಾಡೇವು ಬಿಟ್ಟು ಬಂದು ಇಲ್ಲೇ ಇರಾಕಹತ್ತಿದರು. ವರ್ಸ ತಿರಗಲಿಲ್ಲ ಮತ್ತ ಮರಕಳಿಸಿಬಂತು ನೋಡು ತಂಗಿ ಅದs ಪಿಡುಗು!... ಇಡೀ ಮನೀನs ಸುಂಗಿತು... ಒಬ್ಬ ರಾರೇ ಉಳೀಬೇಕು ಮನಿ ನಡಸಾಕ? ಹೊಂಚಿಟ್ಟು ಬಂದು, ಹದ್ದು ಎರಗಿದ್ಹಾಂಗ ಎರಗಿತು ನೋಡು!... ಮಿಂಚಿನಾಂಗ ಓಡೋ ಚಿಗರಿ, ಬ್ಯಾಟೆಗಾರನ್ನ ತಪ್ಪಸಾಕ ಆಗಾಣಿಲ್ಲಾ, ಇನ್ನ ನರಮನಸ್ಯಾ ಸಾವು ಏನ್ ತಪ್ಪಿಸ್ಯಾನು?... ಬೇರs ಕಿತ್ತಿಹೋತು... ಮನಿ ದೀಪಾ ಹಚ್ಚಾಕೂ ಒಬ್ಬರೂ ಉಳೀಲಿಲ್ಲ... ಸತ್ತವರ ನೆಪ್ಪೂ, ಸಾವಿನ ನೆಪ್ಪೂ, ಸಾಯೋ ನೆಪ್ಪೂ ಮನಸ್ಯಾಗ ಒಂದೀಟು ಉಳೀಲಿ ಅಂತ ಈ ಮನಿ ಕಟ್ಟಿಸಿದಾಂಗ ಆತು... ಅಂದಿಸಿಂದ ಇರಬೇಕೂ ಅನ್ನೋವರು ಯಾರೂ ಇತ್ತಾಕ ಸುಳೀ ಲಿಲ್ಲ... ಅಂದ ಮುಚ್ಚಿದ ಬಾಗಿಲ ಹಾಗs ಮುಚ್ಚೇ ಐತಿ... ತಗದು ನೋಡೋ ಧೈರ್ಯೇವು ಯಾರಿಗೆ?... ನನಗೊಂದು ಜಿಟ್ಟಿದ್ದಲ್ಲಾ, ಆ ಮನಿ ಅನ್ನಾ ಉಂಡೇನು ಅಂತ ಇಲ್ಲೇ ಬಿದ್ದುಕೊಂಡೇನು... ಈಟಾಗಿ ಸಾವs ನನ್ನ ಕೈಬಿಟ್ಟೈತಿ ಅಂದಮ್ಯಾಗೇನು...

(ಕೆಮ್ಮಿ ಉಗುಳುವನು)

ನಸೀಬದಾಟ ತಿಳ್ಯಾಣಿಲ್ಲs ತಂಗಿ! ಎಂತಾ ಮನಿ ನಸೀಬ ಏನಾತು ನೋಡು, ಸಾವಿನ ಮನಿ ಆಗಿ ಕುಂತ್ಯ...

(ಸೋತು ಎರಡೂ ಕೈಗಳಮೇಲೆ ಭಾರ ಹಾಕಿ ಹಿಂದಕ್ಕೊರಗುವನು)

ಹಣ್ಣುಮಾರುವವಳು

ಹೀಗ್ಯೆತೇನೂ! ಈ ಜಾಗಾ ಬಿರಸನ್ನು ಹಾಗಾರ? ನೀ ಇದರ ಹಂತ್ಯಾಕs ಇರತೀಯಾ?

ಮುದುಕ

ಏನು ಬಿರಸೋ, ಏನು ಮೆತ್ತಗೋ, ಒಂದೂ ತಿಳೀದ್ಹಾಂಗ ಐತಿ ತಂಗೀ! ಅಂದಿನಿಂದ ಇಂವಿನತನಕಾ ಒಬ್ಬರೂ ಇರಬೇಕನ್ನವರು ಮಾತ್ರ ಬಂದಿಲ್ಲ ನೋಡು...

(ಸೆಟೆದು ಕುಳಿತು)

ನಾನ ನನ್ನ ಕಣ್ಣಮುಟ್ಟs ನೋಡೇನಿ, ಏಸು ಹೆಣಾ ಇಲ್ಲೆ ಬೀಳೋದು? ಊರ ಮಂದೀ ಸಾವೆಲ್ಲ ಇಲ್ಲೇ ಆಗಬೇಕ್ಕೈತೋ ಏಸೋ! ಬಾವಿ ಬೀಳೋವು ಏಸೋ, ಉರಲು ಹಾಕ್ಕೊಳ್ಳೋವೇಸೋ, ಕಡದು ತಂದು ಹಾಕೋವೇಸೋ! ಏಸ ಮಂದೀ ಸಾವು,ಹೊಟ್ಟ್ಯಾಗ ಹಾಕ್ಕೊಂಡೈತೋ ಈ ಜಾಗಾ ಅಂತೀನಿ! ಮನ್ನೆಮನ್ನೆ ಇನ್ನೂ ನಮ್ಮೂರ ದೋಸರ ಸೊಸಿ... ನೋಡಿದರ ಗೌರಿಗೌರಿ ಆಗಿದ್ಲು... ಏನು ಜೀವದ ಮ್ಯಾಗ ಬ್ಯಾಸ ರಾತೋ, ಆ ಮನಿ ಹಿಂದಿನ ಪಂತರ ಬಾವ್ಯಾಗ ಬಂದು ಬಿದ್ದು ಸತ್ತ್ಳು... ನೀ ಅತ್ತಾಗ ಏನಾರ ಹೋಗಿ ನೋಡೀಯೇನು ತಂಗಿ?

(ಸುಣ್ಣದ ಡಬ್ಬಿಯ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವನು)

ಹಣ್ಣು ಮಾರುವವಳು

ನೋಡೇನು, ನೀರು ಕುಡ್ಯಾಕ ರಗ್ಗಡಬ್ಯಾರೆ ಆ ಬಾವಿಗೇ ಹೋಗೇನು.

(ಮುದುಕನನ್ನು ನೋಡಿ)

ಹರೆ ತಿರಿಗ್ತೇನೋ ಯಜ್ಜಾ, ಕನಡಿ.ಹಳ್ಳು ನೋಡಿಕೊಣ್ಣಾಕ ಹತ್ತಿದೆಲ್ಲ! ರತಿ ಕುಂತಾಳೇನಲ್ಲೆ ?

(ನಗುವಳು)

ಮುದುಕ

(ಕನ್ನಡಿಯಲ್ಲಿಯೇ ಲಕ್ಷ್ಯವಿಟ್ಟು)

ರತಿ ಒಬ್ಬಾಕೇ ಯಾಕ ತಂಗಿ, ಕಾಮಣ್ಣನೂ ಕುಂತಾನಲ್ಲೆ. ಏನು ಗೊತ್ತು ಗೇಣ್ಯಾಗ ಮುಂದ ಬರೋ ಸಾವು ?

(ತಾನೂ ನಗುವನು)

ಕನಡಿ.ಹಳ್ಳು ನೋಡಿಕೊಂಡದ್ದಕ್ಕ ನಕ್ಕೇನs ತಂಗಿ? ಹಾಗ ನೋಡಿ ಕೊಂತಿರಬೇಕು, ಅಂದ್ರs ಹ್ಯಾಗಿದ್ದ ಮಾರಿ ಹ್ಯಾಗಾಗೇತಿ ಅನ್ನೋದು ಗೊತ್ತಾಕ್ಕೈತಿ... ಹಂs, ಆ ಬಾವೀ ದಂಡೀಮ್ಯಾಗ ಒಂದು ಅಳ್ಳೀಮರ ಬೇರದರ್ಸಿಲೆ ಕಿತ್ತಿ ಬಿದ್ದೈತಿ ನೋಡಿದಿಲ್ಲೊ ?

ಹಣ್ಣು ಮಾರುವವಳು

ಹೌದು ಬಿದ್ದೈತಿ.

ಮುದುಕ

ಅದು ಯಾಕ ಬಿದ್ದೈತಿ ಅಂದ್ರ,- ಇದು ಬಾಳ ದಿನದ ಮಾತು, ಹಿರೇ ಗೌಡರ ಅಜ್ಜನ ಕಾಲದ್ದು - ಅವರs ಹೇಳ್ತಿದ್ದರು: ಅತ್ತಾಗ ಎತ್ತಾಗಿಂದೋ ನ್ಯಾಗಿಂದ ಒಂದು ಬ್ರಹ್ಮರಾಕ್ಷೇಸ ಬಂದು ಈ ಅಳ್ಳೀಮರ ಸೇರಿತಂತ... ಸೇರಿ, ಬಂದವರಿಗೆಲ್ಲ "ನಾ ಕೇಳಿದ್ದಕ್ಕ ಉತ್ತರಾ ಕೊಡಿರಿ" ಅಂತ ಗಂಟು ಬೀಳತಿತ್ತಂತ. ತಪ್ಪಿ ಉತ್ತರಾ ಕೊಡಾಕ ಸುರುವುಮಾಡಿದರ ತೀರ್ತ್ಯ್ಹ. ಹಾಗs ಒಂದರ ಬೆನ್ನನ್ಯಾಗ ಒಂದು ಪ್ರಶ್ನಿ ಬಾಣಾ ಬಿಟ್ಟ್ಯಾಂಗ ಬಿಟ್ಟು ಉತ್ತರಾ ಕೊಡದಂಪಾಗಾಗೋತ್ಲೆ ಅವರ್ನಪುರದು ತಿಂದುಬಿಡತಿತ್ತಂತ... ಸುಮ್ಮಾಕ ಹಾಗs ನಿಂತರ ಏನೂ ಮಾಡ್ತಿದ್ದಿಲ್ಲಂತ... ಒಮ್ಮೆ ಸುರುವು ಮಾಡಿದರ ಆತು ನೋಡು, ಮುಗೀತು ಅನ್ನೋದs. ಎಂತಾ ಶ್ಯಾಣ್ಯಾ ಇದ್ದರೂ ಚಟಕಿ ಹೊಡೋದರಾಗs ಬಾಯಿಕಟ್ಟಿಬಿಡತಿತ್ತಂತ... ಗುಂಡಭಟ್ಟ ಅನ್ನೋವ- ಬಲು ಜಂಭದಾವಂತ- 'ನಾ ಹೋಗಿ ಸೋಲಿಸಿ ಬರ್ತೇನಿ' ಅಂತ ಅದರಕೂಟ ಹಾಕ್ಯಾಡಾಕ ಹೋದವ ಅತ್ತಾಗs ಹೋದ್ನಂತ...ಆಗ ಈ ದೋಸರ ಪೈಕಿ ಶಂಕರಶಾಸ್ತ್ರಿ ಅನ್ನೋವರೊಬ್ಬರು ಹೋಗಿ, ಮೂರು ದಿನದಮಟ ಅದರಕೂಟ ಹಾಕ್ಯಾಡಿ ಕಡೀಕ ಅದನ್ನ ಸೋಲಿಸಿ ಬಂದರಂತ... ಸೋತದ್ದಕ್ಕ ಗುರ್ತ ಏನು ಅಂದರ 'ಈ ಅಳ್ಳೀ ಮರ ಬೇರದರ್ಸಿಲೆ ಕಿತ್ತಿಬಿದ್ದಿರತ್ತೈತಿ ಬೆಳಗಾಗೋದರಾಗ' ಅಂತಂತ. ಅಂದ ಹಾಗs ಕಿತ್ತಿಬಿದ್ದಿತ್ತು. ಆಗ ಬಿದ್ದ ಮರ ಇನ್ನೂ ಹಾಗs ಐತಿ... ಅಂತವರ ಮನಿ ಹೆಣ್ಣುಮಗಳು ಈ ದೋಸರ ಸೊಸಿ...

ಣ್ಣು ನೀರುವವಳು

ಸಾಕು ಬಿಡೋ ಯಜ್ಜಾ, ಯಾರರೆ ಎದಿ ಒಡಕೊಂಡು ಚಿಟ್ಟನೆ ಚೀರೋ ಆಟ! ಏನ್ ಹೇಳತಿ ತಗಿ; ಬರೇ ಸಾವಿನ ಕತೀನ ಹೇಳತಿ ಹೆದರಿಕಿ ಬರೋಹಾಗ. ಈಟೆಲ್ಲಾ ಗೊತ್ತಾದನ್ಯಾಗೂ ಇಲ್ಲೆ ಹ್ಯಾಗ ರಾತ್ರಿ ಕಾಲಾ ಕಳಿತೀಯೋ ಅಂತೀನಿ! ಹಗಲು ಐತಿ ಅಂತ ನಮ್ಮದೆಲ್ಲ ಪಾಡೈತಿ... ರಾತ್ರಿ ಆಗಿದ್ದರ ಜೀವ ಎರವs...

ಮುದುಕ

ನುತ್ತೇಸ್ಯೆತಿ ತಂಗಿ, ಸಾವು ಬಿಟ್ಟು ಹೇಳಾಕ? ನನಗ ಕಾಣೂದು

ಅದೊಂದs ನೋಡು. ಈ ಊರ ಜನ ನೋಡು, ಈ ಮನಿ ಮರತು ಬಾಳೇ ಮಾಡಬೇಕು ಅನ್ನೋಹಾಗ, ಇಟೆಲ್ಲ ಸಾವಿನ ನೆಪ್ಪು ಈ ಮನಸಿನ ಮನ್ಯಾಗ ತುಂಬಿಕೊಂಡು ಇನ್ನೂ ಇರಬೇಕೂ ಅಂತೈತೆಲ್ಲ ಈ ಜೀವ! ಒಲ್ತೆ ಅಡಮುಟ್ಟೈತಿ ಇದೂ! ನಾಚಿಕೆ ಇಲ್ಲದ್ದು... ಈ ನಿನ್ನ ಬಿರಸು ಜಾಗಾ ನನ್ನರೆ ನುಂಗತೈತೇನೋ ಅಂತ, ಇಲ್ಲೇ ಬಂದು ಬಿದ್ದರೂ, ಮುಟ್ಟವಲ್ಲದು ನನ್ನ. ಉಗುಳಿಬಿಟ್ಟೈತಿ... ಅದಕ್ಕೂ ಬ್ಯಾಡಾದೆಲೆ ನೀನು, ನಾಚಿಗ್ಗೇಡಿ ನೀನು, ನಾಚಿಗ್ಗೇಡಿ! ರಾತ್ರಿ ನೋಡು ತಂಗಿ, ನಿದ್ದೀನs ಇಲ್ಲ... ಒಮ್ಮೊಮ್ಮೆಂತೂ ಆ ಮನ್ಯಾಗ ಹಿರೇಗೌಡರು, ಅವರ ಮನಿ ಮಂದೆಲ್ಲ ರೇಜಿಟ್ನಾಂಗ ಕಾಣತೈತಿ... ದೀಪ ಝಗಝಗಾ ಉರಿತಿರತಾವು, ಸನಾದಿ ಸಪ್ಪಳ ಕೇಳತಿರತೈತಿ, ದೊಡ್ಡ ಮದವೀನs ನಡದಾಂಗಿರತೈತಿ, ಹಾಡೇನು, ನಾಚೇನು, ಮಂದ್ಯೇನು, ಮಕ್ಕಳೇನು, ಜಂಗೀ ರಂಗರಂಗ ನಡದಿರತೈತಿ. ಇದೇನು ಕರೇನೋ ಸುಳ್ಳೋ, ಏನ್ ನಂದs ಹಳವಂಡೋ ಅಂತ ಕಣ್ಣು ತಿಕ್ಕೊಂಡು ನೋಡೀನಿ... ಕರೇನs. ಒಮ್ಮೊಮ್ಮೆ ಆ ಮನ್ಯಾಗಿಂದ ಚೀರಾಟ, ಒದರಾಟ ಕೇಳತಾವು. ಬಡಬಡಕೊಂಡು ಅತ್ತಾಂಗ ಕೇಳತೈತಿ... ಒಮ್ಮೊಮ್ಮೆ ಆ ಬಾವ್ಯಾಗಿಂದ ಜೋಗುಳ ಹಾಡಿದ ದನಿ ಕೇಳತೈತಿ...ಬಗಲಾಗ ಕೂಸಿನ ಕರಕೊಂಡು, ಕೂದಲಾ ಹರವಿಕೊಂಡು, ಜೆಳ್ಳಾಗ ಯಾರೋ ಹೆಣ್ಣುಮಗಳು ಆ ಮನಿ ಬಾಕಲದಾಗ ನಿಂತಿದ್ದನ್ನ ಇದs ಕಣ್ಣು ಕಂಡೈತಿ... ದೋಸರ ಸೊಸೀನs ಇರಬೇಕು. ಪಾಪ, ಇನ್ನೂ ಇರಬೇಕು ಅಂತ ಆಸೇವು ಇತ್ತೋ ಏನೋ!

(ಸಾಲಿ ಬಿಟ್ಟ ಗಂಟೆಯಾಗುವದು)

ಹಣ್ಣು ಮಾರುವವಳು

ಅಕಾ ಯಜ್ಜಾ, ಸಾಲೀಜಿಟ್ಟ ಗಂಟಿ ಆತು ನೋಡು! ಈಗ ಬರತಾವಿನ್ನ ಮಕ್ಕಳು ಸಾಲಿ ಬಿಟ್ಟು.

(ಬುಟ್ಟಿಯ ಮೇಲಿನ ಅರಿವೆ ತೆಗೆದು ಹಣ್ಣುಗಳ ಮೇಲೆ ಕೈಯಾಡಿಸಿ, ಸರಿಯಾಗಿ ಹೊಂದಿಸಿಡುವಳು. ಸಮೀಪದಲ್ಲಿ ಮಕ್ಕಳು ಬರುತ್ತಿರುವದನ್ನು ನೋಡಿ)

ಹಣ್ಣು ಬಾರಬೇ ಹಣ್ಣೂss!

ಮುದುಕ

(ಕನಸಿನಿಂದ ಎಚ್ಚತ್ತವನಂತೆ)

ಹೌದs, ಹಾಗಾರ ಯಾಪಾರ ಸುರುಮಾಡಬೇಕಾತು ನಾ ಇನ್ನ. ಸಕ್ಕರ್

ಗಿಣಿ, ಸಕ್ಕರ್ ಗಿಣಿ ! ಬಿಲ್ಲಿಗೊಂದೊಂದು ಸಕ್ರಿಗಿಣಿ !

ಹಣ್ಣುಮಾರುವವಳು

'ಬಾಳೀಹಣ್ಣು, ಬಾರೀಹಣ್ಣು, ಪ್ಯಾರಲಹಣ್ಣು, ಕವಳೀಹಣ್ಣೂ ಹಣ್ಣು ತೊಗಳ್ಳಿರಿ ಹಣ್ಣೂss ...'

ಮುದುಕ

ಸಕ್ಕರಿಗಿಣಿ ಸಕ್ಕರಿಗಿಣಿ
ಕೈಯಾಗಿದ್ದರ ಮುತ್ತಿನ ತೆನಿ
ಬಾಯಾಗಿದ್ದರ ಜೇನಿನ ಹನಿ !
ಸಕ್ಕರಿಗಿಣಿ, ಸಕ್ಕರಿಗಿಣಿ...

[ಬಲಗಡೆಯಿಂದ ಸಮೀಪದಲ್ಲಿ ಸಾಲಿ ಬಿಟ್ಟ ಹುಡುಗರು ಬರುವ ಗುಜುಗುಜು ಶಬ್ದ ಕೇಳಿಬರುವದು. ಮೊದಮೊದಲು ಅಸ್ಪಷ್ಟವಾಗಿ ಹಿಂದುಗಡೆಯಿಂದ ಅದೇ ತೀವ್ರಯಾಗಿ, ಆ ಶಬ್ದದೊಳಗಿಂದ ಕೆಳಗಿನ ಮೂರು ವಾಕ್ಯಗಳು ಒಂದರ ಮೇಲೊಂದು, ಬೇರೆ ಬೇರೆ ದನಿಯಲ್ಲಿ ಕೇಳಬರುವವು:

೧ : "ಅಳತ್ತೈತಿ ಅಳತ್ತೈತಿ ರಂಡಿ
ಕೊಳ್ಳಾಗ ಬೇವಿನ ದಂಡಿ"

೨ : "ಹೆಂಡತಿಯು ಸೊಕ್ಕುವಳು ತನ್ನ
ಗಂಡ ಕುರುಡನಾದ ಮೇಲೆ
ತುಂಡು ಹೆಣ್ಣುಗಳಿಗೆ ಜೋಡು
ದಿಂಡೆ ಗಾಂಧಾರಿ"

೩ : "ಪೇಣಸೇಕs ನಾಗರಕಾಯಿ...."]

ಮುದುಕ

ಸಕ್ಕರಿಗಿಣೀ ಸಕ್ಕರಿಗಿಣೀ..........

[ಶ್ಯಾಮು ಒಬ್ಬನೇ ಬಂದು ಮುದುಕನ ಹತ್ತಿರ ಹೋಗಿ ನಿಲ್ಲುತ್ತಾನೆ. ಅವನ ಹಿಂದೆಯೇ ಕಿಟ್ಟ, ರಾಮು, ಭೀಮು, ಹಣಮು, ರಂಗೆ, ಭರಮು ಇವರೆಲ್ಲ ಗುಂಪುಕಟ್ಟಿಕೊಂಡು ಬಂದು ಮುದುಕನ ಹತ್ತಿರ ನಿಂತಿದ್ದ ಶ್ಯಾಮುನ ಸುತ್ತಲೂ ನಿಲ್ಲುತ್ತಾರೆ. ಕಿಟ್ಟಿ ಕೊನೆಗೆ ಬರುತ್ತಾನೆ. ಬಂದು ಶ್ಯಾಮುನನ್ನು ಉದ್ದೇಶಿಸಿ]

ಕಿಟ್ಟಿ

ವೈರಿ ಬಂದ್ವೈತಿ ಇದಿರಿಗೆ। ಕಡದು ಹಾಕೇನು ಮೂಲಿಗೆ।

(ಎಲ್ಲ ಹುಡುಗರೂ ಕಿಟ್ಟಿಯನ್ನು ಮೇಲುಗಟ್ಟಿ ನಗುವರು)

ಶ್ಯಾಮು

(ರೊಚ್ಚಿನಿಂದ, ಕಿಟ್ಟಿಗೆ ಎದುರಾಗಿ)

ಲೇ ಕಿಟ್ಟ್ಯಾ, ಇನ್ನೊಮ್ಮೆ ಅಂದ್ಯಂದ್ರ ಇಲ್ಲೇ ಕೊಂದುಹಾಕ್ತೇನಿ ನೋಡು

ಹುಡುಗರು

ಅಬಾಬ ಗಂಡಸs...

(ನಗುವರು)

ಕಿಟ್ಟಿ

(ನೆಟ್ಟಗೆ ಅವನೆದುರಿಗೆ ಹೋಗಿ ನಿಂತು)

ನಾ ಅನ್ನಾವ. ಕೊಲ್ಲs ಗಂಡಸ, ಕೊಲ್ಲು.

ಶ್ಯಾಮು

(ಕಿಟ್ಟಿ ತಡೆಯದಾಗಿ ಹೊಡೆಯಲು ಕೈಯೆತ್ತುವನು.)

ಕಿಟ್ಟಿ

(ಮಿಸುಕಾಡದೆ ಎದೆಸೆಟಸಿ ಅವನನ್ನೇ ನೋಡುತ್ತ ನಿಲ್ಲುವನು)

ಹುಡುಗರು

ಬಿಡಬಿಡಲೇ ಶ್ಯಾಮ್ಯಾ, ಸಾಕು ಬಿಡು ಮಸ್ತು.

(ನಡುವೆ ಬಂದು ತಡೆದು ನಿಲ್ಲಿಸುವರು)

ಮುದುಕ

ಏ ಹುಡುಗರಾ, ಯಾಕ ಬಡದಾಡತೀರೋ ತಮ್ಮಾ ?

(ತನ್ನಷ್ಟಕ್ಕೆ)

ಈ ಜಾಗಾಕ್ಕ ಬಂದಕೂಡ್ಲೆ ಏನಾಗ್ತಿದ್ದೀತಿವಕ್ಕ?

(ಹುಡುಗರಿಗೆ)

ಏ ತಮ್ಮಾ, ಬರ್‍ಯೋ ಇಲ್ಲೆ. ಸುಮ್ಮಾಕ ಸಕ್ಕರಿಗಿಣಿ ತಿಂದು ನಕೊಂತ ಹೋಗಲಾಸಲ್ಲs ? ಬರ್‍ರಿಲ್ಲೆ ಎಲ್ಲಾರು...

(ಹುಡುಗರು ಮತ್ತೆ ಅವನ ಹತ್ತಿರ ಹೋಗುವರು)

ಹೀಗ ನಿಲ್ಲಿರಿ. ಸಕ್ರಿಗಿಣಿ ಹಾಡು ಹೇಳ್ತೀನಿ ಕೇಳ್ರಿ:

ಸಕ್ಕರಿಗಿಣಿ ಸಕ್ಕರಿಗಿಣಿ
ಕೈಯಾಗಿದ್ದರ ಮುತ್ತಿನ ತೆನಿ
ಬಾಯಾಗಿದ್ದರ ಜೇನಿನ ಹನಿ
ಸಕ್ಕರಿಗಿಣಿ ಸಕ್ಕರಿಗಿಣಿ
ಬಾರ ನನ್ನ ಬಂಗಾರಮಣಿ
ಬಡದಾಡಿದ್ರು ಆಟ ಆಡಿ
ಹಾರಾಡುವ ಹಕ್ಕಿಜೋಡಿ
ಕೊಟ್ಟು ಹೋದ ಮುತ್ತಿನ ತೆನಿ
ಸಕ್ಕರಿಗಿಣಿ ಸಕ್ಕರಿಗಿಣಿ !

[ಹುಡುಗರೆಲ್ಲ ಖೊಳ್ಳನೆ ನಗುತ್ತಾರೆ. ಶ್ಯಾಮು ಕಿಟ್ಟು ತಮಗೆ ಅರಿಯದಂತೆಯೇ ಒಬ್ಬರ ಹೆಗಲಮೇಲೊಬ್ಬರು ಕೈಹಾಕಿದ್ದಾರೆ. ಮುದುಕ ಸಕ್ಕರಿಗಿಣಿಯೊಂದನ್ನು ಶ್ಯಾಮುನಿಗೆ ಕೊಡುತ್ತಾನೆ. ಉಳಿದ ಕೆಲ ಹುಡುಗರೂ ಸಕ್ಕರಿಗಿಣಿ ಕೊಂಡುಕೊಳ್ಳುತ್ತಾರೆ.]

ಕಿಟ್ಟು

(ಸಕ್ಕರಿಗಿಣಿ ಹಿಡಿದು ದೂರ ನಿಂತಿರುವ ರಾಮುನಿಗೆ)

ಲೇ ರಾಮ್ಯಾ, ರೊಕ್ಕಾ ಕೊಡತೀಯಾ ನಾನೂ ತೊಗೋತೀನಿ ?

ರಾಮು

(ಕಿಸೆಯಲ್ಲಿ ಕೈಹಾಕಿ ನೋಡಿ)

ಇಲ್ಲಲ್ಲಪಾ ನನ್ನ ಹತ್ತರ.

ಶ್ಯಾಮು

(ಕಿಟ್ಟೂನಿಗೆ ಕೈಯಲ್ಲಿಯ ಸಕ್ಕರಿಗಿಣಿ ತೋರಿಸಿ ಹಂಗಿಸುವ ದನಿಯಲ್ಲಿ)

ಚೀಪಲಿಕ್ಕೆ ಬೇಕಾದರ ಕೊಡತೀನಿ ನೋಡು ಕಿಟ್ಯ್ಯಾ, ಎರಡು ಪೇಣಿ ಕೊಟ್ಟರ.

(ಆಸೆ ತೋರಿಸುವ ಬೆರಳುಮಾಡಿ ನಗುವನು)

ಕಿಟ್ಟು

(ಸಿಟ್ಟು ಬಂದಿದ್ದರೂ ನುಂಗಿಕೊಂಡು, ರಾಮುನ ಹತ್ತಿರ ಸೆಟೆದು ಹೋಗಿ)

ಹೂಂನಪಾ ಕೊಡು.

ರಾಮು

ಬ್ಯಾಡ ಬಿಡೋ ಕಿಟ್ಟೀ, ಮತ್ತ ಅವನ ಸಂಗತಿ. ಮಹಾ ಅಳಬುರಕ ಅಂವಾ !

ಕಿಟ್ಟಿ

(ರಾಮುನಿಗೆ ಕಣ್ಣು ಚಿವುಟ)

ಅದರಾಗೆಲ್ಲಾ ಏನದನೋ. ಹೂನಪಾ ಶ್ಯಾಮಾ, ನಾ ಕೊಡತೀನಿ, ಕೊಡು.

(ಸಕ್ಕರಿಗಿಣಿ ಹಿಡಿದ ಕೈಕಡೆಗೆ 'ಆ' ಮಾಡುವನು)

ಶ್ಯಾಮು

(ಸರಕ್ಕನೆ ಕೈಹಿಂದೆ ಸರಿಸಿಕೊಂಡು)

ಒಮ್ಮೇ ಚೀಪಬೇಕು ಹಂಗಾರ ?

ಕಿಟ್ಟಿ

(ಗೋಣುಹಾಕಿ)

ಹೂನಪಾ.

ಶ್ಯಾಮು

ಬಿಡು ಅಂದಗಳಿಗ್ಗೆ ಬಿಡಬೇಕು ಆಂ ?

ಕಿಟ್ಟಿ

ಹುಂ, ಹುಂ.

ಶ್ಯಾಮು

ಕಡೀಬಾರದು ?

ಕಿಟ್ಟಿ

ಹೂಂ.

ಶ್ಯಾಮು

(ಎಡಗೈ ಮುಂದೆ ಮಾಡಿ)

ತಾ ಹಂಗಾರ ಪೇಣಿ.

ಕಿಟ್ಟಿ

(ಕಿಸೆಯಿಂದ ಎರಡು ಪೇಣಿ ತೆಗೆದು ಕೊಟ್ಟು)

ಹುಂ, ಚೀಪಿಸು.

ಶ್ಯಾಮು

'ಆ' ಮಾಡು.

ಕಿಟ್ಟಿ

(ಬಾಯಿ ತೆರೆಯುವನು)

ಶ್ಯಾಮು

(ಸಕ್ಕರಿಗಿಣಿಯನ್ನು ಬಾಯಲ್ಲಿಡುವನು. ಕಿಟ್ಟಿ ಬಾಯಿ ಮುಚ್ಚಿ ಚೀಪಹತ್ತುವನು.)

ಬಿಡೋ ಸಾಕು. ಒಮ್ಮೆ ಚೀಪಿದೆಲ್ಲ ಸಾಕಿನ್ನs...

ಕಿಟ್ಟಿ

(ಮಾತನಾಡದೆ ಬರಿ ನಾಲ್ಕು ಬೆರಳು ತೋರಿಸುವನು)

ಶ್ಯಾಮು

ಬಿಡತೀದೋ ಏನಂತೀದಿ ?

ಕಿಟ್ಟಿ

(ಸಕ್ಕರಿಗಿಣಿಯನ್ನು ಬಾಯಿಂದ ಹೊರಗೆ ಬಿಡದೆ)

ನಾಕು ಪೇಣಿ ಕೊಟ್ಟರ ಬಿಡತೀನಿ. ಇಲ್ಲಿದ್ರ ಕಡಿದುಬಿಡ್ತೀನಿ.

ಶ್ಯಾಮು

(ಸಿಟ್ಟು ಅಳುವು ತುಂಬಿದ ದನಿಯಿಂದ)

ಯಾಕಲೆ, ಮೊದಲ ಮಾತುಕೊಟ್ಟು ಈಗ ಹೀಂಗ ಅಂತೀಯಾ ? ಹೆದರಸ ತೀಯೇನು ? ಬಿಡತೀಯೋ ಇಲ್ಲೋ ? ಕೊಂದೇನು ನೋಡು ನಿನ್ನ!

[ಅಳುಮುಖ ಮಾಡುವನು. ಉಳಿದ ಹುಡುಗರು "ಬಿಡಬ್ಯಾಡಲೇ ಕಿಟ್ಯಾ, ಕಡದುಬಿಡು" ಎಂದು ಚಪ್ಪಾಳೆ ತಟ್ಟಿ ಜಿಗಿದಾಡಿ ನಗುವರು.]

ಕಿಟ್ಟಿ

ಕಡಿದೆ ನೋಡು, ಇಕಾ, ತಡಮಾಡಿದರ ನುಂಗಿಬಿಡತೇನಿ.

(ನುಂಗುವಂತೆ ಮುಖಮಾಡುವನು)

ಶ್ಯಾಮು

(ಗಾಬರಿಯಾಗಿ ದೈನಾಸದಿಂದ)

ಏss ನಿಂದ್ರೊ್ರೀ...

ಕಿಟ್ಟಿ

ತಗಿ ಹಂಗಾದರ ನಾಕು ಪೇಣಿ.

ಶ್ಯಾಮು

(ಸೋತವನಾಗಿ)

ತೊಗೊ ಮಹರಾಯಾ.

(ಕಿಸೆಯಿಂದ ತೆಗೆದು ನಾಲ್ಕು ಪೇಣಿ ಕೊಟ್ಟು)

ಈಗರೆ ಬಿಡು.

ಕಿಟ್ಟಿ

(ಬಾಯಿ ತೆರೆಯುತ್ತಾನೆ)

ಶ್ಯಾಮು

(ಸಕ್ಕರಿಗಿಣಿ ತೆಗೆದುಕೊಂಡು ಅಳುಮುಖ ಮಾಡಿ ಆದರೂ ಸಿಟ್ಟಿನ ಆವೇಶದಿಂದ ಒಂದು ತುದಿಗೆ ಹೋಗಿ ನಿಂತು, ತಿರುಗಿ ಕಿಟ್ಟಿಯನ್ನುದ್ದೇಶಿಸಿ)

ಹಾಯತೀಯಲ್ಲ ನಮ್ಮ ಓಣ್ಯಾಗ....ಆಗ ನೋಡು ಹ್ಯಾಂಗ ಮಾಡಸ್ತೀನಿ, ಅಪ್ಪಗ ಹೇಳಿ.

ಹುಡುಗರು

ಅಯ್ಯೈs ಗಂಡಸs...

(ಎಲ್ಲರೂ ನಗುವರು)

ಕಿಟ್ಟಿ

(ಶ್ಯಾಮುನ ಹತ್ತಿರ ಹೋಗಿ, ಸಮಾಧಾನಮಾಡುವ ದನಿಯಲ್ಲಿ)

ಅವರ್ನ ತಗೊಂಡು ಏನ್ಮಾಡತಿ ಬಾರಲೆ. ಚ್ಯಾಷ್ಟಿ ಮಾಡಬಾರದೇನಪಾ ?

ನೀ ಮಾಡಿದರ ಅಡ್ಡೀ ಇಲ್ಲ, ನಾವು ಮಾಡಿದರ ಹೀಂಗೇನೊ ?

ಶ್ಯಾಮ

(ಅಳುವು ತಡೆಯಲಾರದೆ)

ಅವರೆಲ್ಲಾರೂ ನಗಬೇಕ್ಯಾಕ ಮತ್ತ? ನನ್ನ ಒಬ್ಬವನ್ನs ಮಾಡಿ ಎಲ್ಲಾರೂ ಚ್ಯಾಷ್ಟಿ ಮಾಡತಾರ ಮಕ್ಕಳು !

(ಬಿಕ್ಕುವನು)

ಮುದುಕ

(ಕಿಟ್ಟಿಶ್ಯಾಮರನ್ನು ಕರೆದು)

ಏ ಹುಡುಗರ್‍ಯಾ, ಬರ್‍ರಿಲ್ಲೆ...

(ಹತ್ತಿರ ಹೋಗುವರು)

ಇಕಾ, ಈ ಸಕ್ಕರಿಗಿಣಿ ತೊಗೊಳ್ರಿ, ಇನಾಮು, ನಿಮ್ಮಿಬ್ಬರಿಗೂ ಇನಾಮು!

(ಸಕ್ಕರಿಗಿಣಿ ಇಬ್ಬರಿಗೂ ಕೊಟ್ಟು)

ಹುಡುಗರೂ ಅಂದ್ರ ಹೀಗಿರಬೇಕು ಹುಡುಗರು! ಬಪ್ಪರೆ ಹುಡುಗರು ನೀವು !

ಬಡಿದಾಡಿದ್ರು ಆಟಾ ಆಡಿ
ಹಾರಾಡುವ ಹಕ್ಕೀಜೋಡಿ
ಕೊಟ್ಟುಹೋದ ಮುತ್ತಿನ ತೆನಿ
ಸಕ್ಕರಿಗಿಣಿ, ಸಕ್ಕರಿಗಿಣಿ !

[ಹುಡುಗರು ನಗುತ್ತ ಎಲ್ಲರೂ ರಂಗದ ಆ ತುದಿಗೆ ಕೂಡಿಕೊಳ್ಳುವರು. ಎಲ್ಲರ ಕೈಯಲ್ಲಿಯೂ ಸಕ್ಕರಿಗಿಣಿ ಇವೆ. ಗಣಪ್ಪ ಒಬ್ಬನ ಕೈಯಲ್ಲಿಯೇ ಇಲ್ಲದ್ದನ್ನು ನೋಡಿ "ಗಣಪ್ಯಾ, ಹಿಡಿಯಲೆ ಇದನ್ನ. ಚೀಪಲಿಕ್ಕೆ ಇಲ್ಲ ಮಗನs. ಆತ್ಲಾಗs ತಗೊ" ಎಂದು ಮುದುಕ ಕೊಟ್ಟ ಸಕ್ಕರಿಗಿಣಿಯನ್ನು ಕಿಟ್ಟಿ ಅವನಿಗೆ ಕೊಡುವನು.]

ಕಿಟ್ಟಿ

(ಎಲ್ಲ ಹುಡುಗರಿಗೆ)

ಇವತ್ತ ಶನಿವಾರ. ಆಟಾ ಆಡ್ಲಿಕ್ಕೆ ಬರ್‍ತೀರೇನ್ರಲೆ ?

(ಶ್ಯಾಮನನ್ನು ಬಿಟ್ಟು ಎಲ್ಲರೂ 'ಹುಂ' ಎನ್ನುವರು)

ಯಾಕೋ ಶ್ಯಾಮಾ, ಬರ್‍ತಿಯಿಲ್ಲೋ ನೀನೂ ?

ಶ್ಯಾಮ

ಹೀಂಗಾದರ ನಾ ಒಲ್ಲೆಪಾ; ನಿಮ್ಮ ಸಂಗ್ತೀನೆ ಒಲ್ಲೆ.

ಕಿಟ್ಟಿ

(ಹೆಗಲಮೇಲೆ ಪ್ರೀತಿಯಿಂದ ಕೈಹಾಕಿ)

ಏಳs ಹುಚ್ಚs! ಸುಮ್ಮನ ಬಾ, ನಾ ಹೇಳ್ತೇನಿ. ಇನ್ನಮ್ಯಾಲ ನಿನಗ ಚ್ಯಾಷ್ಟಿ ಮಾಡೂದಿಲ್ಲಪಾ, ಆತಿಲ್ಲೋ?

(ಹುಡುಕುವಂತೆ ಎಲ್ಲಕಡೆಗೆ ನೋಡಿ)

ರಂಗ್ಯಾ ಬರಲಿಲ್ಲೇನ್ರೋ ನಮ್ಮ ಸಂಗ್ತೀಲೆ?

ಭೀಮ

ನಮ್ಮ ಸಂಗ್ತೀಲೆ ಬರ್ತಾನೇನಪಾ ಅಂವಾ. ಅಂವ ಬರೋದು ಹೆಣ್ಣು ಹುಡುಗರ ಹಿಂದಿಂದ.

(ಅಷ್ಟೊತ್ತಿಗೆ ಹೆಣ್ಣುಹುಡುಗರ ಗುಂಪೊಂದು ಬರುವದನ್ನು ನೋಡಿ)

ಅಕಾ, ಕಿಟ್ಟ್ಯಾ, ಹೆಣ್ಣುಹುಡುಗರು ಬಂದವು ನೋಡು ಅಲ್ಲೆ. ಅವರ ಹಿಂದ ರಂಗ್ಯಾ ಇರಬೇಕು ನೋಡು.

ಕಿಟ್ಟಿ

(ಅತ್ತಕಡೆ ನೋಡಿ)

ಮಜಾಮಾಡೋಣು ನಿಂದರ್ರಿಲೆ ಇವರಿಗೆ. ಎಲ್ಲಾರೂ ಅವರಿಗೆ ಹಾದೀ ಬಿಡದ್ಹಂಗ ಇಲ್ಲೇ ನಿಂದ್ರೋಣು, ಹ್ಯಾಂಗ ಹೋಗ್ತಾರ ಹೋಗಲಿ.

(ದಾರಿಕಟ್ಟುವಂತೆ ಎಲ್ಲರೂ ಸಕ್ಕರಿಗಿಣಿ ಚೀಪುತ್ತ ನಿಲ್ಲುವರು)

ಹಣ್ಣು ಮಾರುವವಳು

ಹಣ್ಣು ಬಾರಬೇ ಹಣ್ಣೂsss...

ಮುದುಕ

ಸಕ್ಕರಿಗಿಣಿ, ಸಕ್ಕರಿಗಿಣೀ....

[ಹೆಣ್ಣುಹುಡುಗರು ಬಂದು ಹಣ್ಣುಮಾರುವವಳ ಹತ್ತಿರ ನಿಂತುಕೊಳ್ಳುವರು. ಕೆಲವರು ಅವಳಲ್ಲಿದ್ದ ಹಣ್ಣುಗಳಲ್ಲಿ ತಮತಮಗೆ ಬೇಕಾದ ಹಣ್ಣುಗಳನ್ನು ಕೊಂಡು ಕೊಳ್ಳುತ್ತಾರೆ. ವ್ಯಾಪಾರವೆಲ್ಲ ಮುಗಿದು ಮನೆಗೆ ಹೋಗಬೇಕೆನ್ನುವಾಗ]

ಗಂಗು

(ಕಾಶಿಯ ಭುಜ ತಟ್ಟಿ)

ಅಲ್ಲs ಕಾಶಿ, ಅಲ್ಲೆಲ್ಲಾ ಗಂಡಹುಡುಗರು ನಿಂತುಬಿಟ್ಟಾರವಾ! ಮುಂದ ಹ್ಯಾಂಗ ಹೋಗಬೇಕs? ನನಗಂತೂ ಧೈರ್ಯ ಇಲ್ಲವಾ.

ಕಿಟ್ಟಿ

(ಇವರ ಮಾತನ್ನೇ ಕೇಳಿ, ಇನ್ನಷ್ಟು ದಾರಿಗೆ ಅಡ್ಡಾಗಿ ನಿಂತು)

ಬರ್ರಿ, ಬರ್ರಿ, ಮುಂದ ಹೋಗರೆಲ್ಲ.

ಕಾಶಿ

(ಜೊತೆಗಿದ್ದ ಹುಡುಗರಿಗೆ)

ಅಂವಗ್ಯಾಕ ಹೆದರತೀರಿ ಬರ್ರೀ! ಏನ್ಮಾಡತದ ಅದು? ಹುಲೀನs, ಕರಡೇ? ಏನು ತಿಂತಾನs?

ಕಿಟ್ಟಿ

ಯಾಕ ಕಾಶಿ, ಬಾಯಿ ಬೇಕಾದ್ಹಾಂಗ ಹರಿಬಿಡತೀಯೇನು? ಹ್ಯಾಂಗ ಕಾಣಸ್ತದ?

ಕಾಶಿ

ಯಾಕೋ ಹುಲ್ಯಾ, ನಿನಗ ಹ್ಯಾಂಗ ಕಾಣಸ್ತದ?

ಕಿಟ್ಟಿ

ಅಬಬಾ! ಎಲ್ಲಾರೂ ಅಂಬೋಹಾಂಗ ನೀ ಗಂಡರಾಣಿಯೂನs ಐತಿ ನೋಡು!

(ಗಂಡುಹುಡುಗರು ನಗುತ್ತಾರೆ; ಸಿಳ್ಳು ಹೊಡೆಯುತ್ತಾರೆ)

ಕಾಶಿ

(ಸಿಟ್ಟಿಗೆದ್ದು)

ಬರ್ರಿ ಎಲ್ಲಾರು, ಅವರ್ನ ಸರಿಸಿ ಹೋಗೋಣು. ಹೆಣ್ಣುಹುಡುಗರ ಮ್ಯಾಲೆ ಕೈಮಾಡ್ತಾನೇನೊ ನೋಡೋಣು.

(ಜೊತೆಯವರ ಕೈಹಿಡಿದು ಎಳೆದುಕೊಂಡು ಮುಂದೆ ಹೊರಡುವಳು)

ಹಣ್ಣುಮಾರುವವಳು

ಬ್ಯಾಡs ಯಪ್ಪಾ. ಯಾಕ ಸುಮ್ಮಾಕ ಜಪದಾಡತೀರಿ, ಬಿಡ್ರಿ.

ಗಂಗು

(ಕಾಶಿಯನ್ನು ತಡೆದು)

ಏ ಕಾಶೀ, ಸುಮ್ಮನಾಗs ನಮ್ಮವ್ವಾ. ಅವರು ಹೋಗಲಿ, ಒಂದಾಗಡೆ ನಾವು ಹೋಗೋಣು. ಇದು ಮನ್ಯಾಗ ತಿಳಿದರ ಅಪ್ಪ ಮೈಹುಳೇ ಹೊಡದು ಕೊಂದಾನು ನಮ್ಮವ್ವಾ!

ಕಿಟ್ಟಿ

ನಾವೂ ಹೋಗೂದಿಲ್ಲಾ. ಎಷ್ಟೊತ್ತು ನಿಂದರತಾರೋ ನಿಲ್ಲಲಿ.

ಕಾಶಿ

ನಿಂತಕೋವಲ್ಲವ್ಯಾಕ ಬಿಡು, ನಮ್ಮನ್ನೇನು ಮಾಡತಾವ.

(ಸ್ವಲ್ಪಹೊತ್ತು ತಡೆದು)

ಅಂದ್ಹಾಂಗ ಇವೊತ್ತು ಶನಿವಾರ. ಮಧ್ಯಾನ್ಹದಾಗ ಸಾಲೀನೂ ಇಲ್ಲ. ಕೂಡೋಣೇನ್ರಿ?

(ಕದ್ದು ಕಿಟ್ಟಿ ಮೊದಲಾದವರ ಕಡೆಗೆ ನೋಡುವಳು)

ಗಂಗು

ಎಲ್ಲ್ಹೆರೆ ಕೂಡಬೇಕು? ಎಲ್ಲಿ ಕೂತರೂ ಹೊರಗ ಹಾಕತಾರ, ಇಲ್ಲಾ ಕೆಲಸಾ ಹಚ್ಚತಾರ. ಒಂದು ಗಳಿಗಿ ಆರಾಮ ಕೂತೇನೂ ಅಂದ್ರ ಇಲ್ಲ. ಹೌದಲ್ಲs ಸುಮ್ಮಿ?

ಸುಮ್ಮಿ

ಹೌದವಾ. ಆದರ ನಾವೆಲ್ಲಾ ಕೂಡಿ ಆಡದ ಭಾಳ ದಿವಸಾತಲ್ಲs ಗಂಗೂ?

ದಮ್ಮಿ

ಅಲ್ಲs ಕಾಶಿ, ಹ್ಯಾಂಗೂ ಈ ಮನ್ಯಾಗ ಯಾರಿಲೂ ಇಲ್ಲ, ಇಲ್ಲ್ಯಾಕ ಬಂದು ಆಡಬಾರದು?

ಸುಮ್ಮಿ

ಹೌದ್ರೀಕೆ, ಯಾರೂ ಹೇಳವರಿಲ್ಲ, ಕೇಳವರಿಲ್ಲ; ಕೆಲಸ ಹಚ್ಚವರಿಲ್ಲ, ಹೊರಗ ಹಾಕವರಿಲ್ಲ.

ಗಂಗು

ನಾ ಒಲ್ಲೆವಾ ಈ ಮನೀಗೆ ಬರ್ಲಿಕ್ಕೆ. ಹೆದರಕೀನs ಬರ್ತದ ನಮ್ಮವ್ವಾ ನನಗ. ಇದs ಮನೀ ಬಾವ್ಯಾಗs ಅಲ್ಲೇನು ನಮ್ಮವ್ವ ಬಿದ್ದದ್ದು ?

ಕಾಶಿ

ನಿಮ್ಮವ್ವೇನು ಸತ್ತಾಕಿ ಎದ್ದು ಬರತಾಳೇನs ನಿನ್ನ ನುಂಗಲಿಕ್ಕೆ ? ಬಲು ಪುಕ್ಕಿವಾ ನೀನು ! ಏನಿಲ್ಲ, ಎಲ್ಲಾರು ಇಲ್ಲೇ ಕೂಡೋದು. ಏನಂತೀರೇ ?

(ಎಲ್ಲರೂ ಹುಂ ಹುಂ ಎನ್ನುವರು)

ಅವೂ ಬರತಾವೇನು ಕೇಳೋಣೇನs ? ಅಷ್ಟು ಕೆಲಸಾಪಲಸಾ ಮಾಡ ತಾವ.

(ಅವರ ಕಡೆಗೆ ತಿರುಗಿ)

ಏ ಕಿಟ್ಟ್ಯಾ, ಇವೊತ್ತ ಬರ್ತಿರೇನ್ರಲೇ ಆಟಕ್ಕ ?

ಕಿಟ್ಟಿ

ಎಲ್ಲೆ ? ಏನಾಟ ?

ಕಾಶಿ

ಇಲ್ಲೇ, ಇದs ಮನ್ಯಾಗ. ಯಾಕs ಧೈರ್ಯಾ ಇಲ್ಲ ಹೌದಲ್ಲೊ ?

ಕಿಟ್ಟಿ

(ಅಭಿಮಾನ ಕೆಣಕಿದವನಾಗಿ)

ಅದ್ಯಾಕ, ನಾವು ಬೇಕಾದಾಂಗ ಬರತೀವಿ. ನಿನಗs ಹೆದರದಿದ್ದವರು, ಇನ್ನ ಆ ದೆವ್ವಕ್ಕ ಹೆದರತೀವೆ ? ಯಾಕ್ರಲೇ ಬರತೀರಿಲ್ಲೊ ಎಲ್ಲಾರು ?

(ತಲೆಯಲ್ಲಾಡಿಸಿ ಒಪ್ಪಿಗೆ ಕೊಡುವರು)

ಇಕಾ ಕಾಶೀ, ನಾವು ಹಂಗs ಬರಾವ್ರು. ನೀವು ತಿನ್ನಲಿಕ್ಕೆ ತರತೀರಿಲ್ಲೊ?

ಕಾಶಿ

ತಿನ್ನಾಸಕ; ತರತದೇಳು.

(ಹೆಣ್ಣು ಹುಡುಗರಿಗೆ)

ಇಕಾ, ಮನ್ಯಾಗ ಎಲ್ಲಾರೂ ಆಡಲಿಕ್ಕೆ ಇಸಗೊಂಡು ಬರ್ರಿ. ನಿಮ್ಮ ನಿಮ್ಮ ಗೊಂಬಿ, ಆಟಿಗೀಸಾಮಾನ ಎಲ್ಲಾ ತಗೊಂಡು ಬರ್ರಿ ಮತ್ತ. ಏ ತಾರಿ, ಆಟಿಗೀಸಾಮಾನಿಲ್ಲಾ ಅಂತ ಸೊಟ್ಟಮಾರೀ ಮಾಡಿದಿಲ್ಲೊ ? ನಾಯೆಲ್ಲಾ ತರತೇನಿ. ನೀಯೇನೂ ತರಬ್ಯಾಡ.

(ಹುಡುಗರಿಗೆ)

ಹಂಗಾರ ನೀವೂ ಬರ್ರ್ಯೋ ಒಂಬತ್ತಾಸಿಗೆ.

[ಹುಡುಗರೆಲ್ಲ ' ಹೋಹೋ ' ಅನ್ನುತ್ತ "ಚ್ಯೆಂ–ನ್ಯೆಂ–ಚಂಗ್ಯಾ, ಚಟ್‌ಪಟ್– ಮಂಗ್ಯಾ ! ಬೂಟು ಟಪಿಗಿ ಹಕ್ಕೊ, ಮುಡ್ಡಮ್ಮನ ಕೈ ಹಿಡಕೊ ! ಟಪ್-ಟಪ್-ಟಪ್- ಟಪ್, ಟಪ-ಟಪಟಾ ಟಪ್-ಟಪ–ಟಾ ! " ಎಂಬ ಅರ್ಥಹೀನ ಒಂದು ಹಾಡಿಗೆ ನ್ಯೆಕ್ಯೆ ಕುಣಿಸುತ್ತ ಹುಡಿಗಿಯರನ್ನು ನೋಡುತ್ತ ನಗುತ್ತ ಹೋಗುವರು.]

ನೋಡs ಹ್ಯಾಂಗ ತಾವs ದಾರಿಬಿಟ್ಟವು ? ಅವಕ್ಕೆಷ್ಟು ಬೇಕು, ಮಾರಿ ಮ್ಯಾಲ ಒಂದಿಷ್ಟು ಕೈ ಎಳೆದರ ಸಾಕು, ಕುಣಕೋತ ಹೋಗತಾವ. ಇನ್ನ ನಡೀರಿ. ಲಗೂನ ಊಟಾಮಾಡಿ ಎಲ್ಲಾರು ನಮ್ಮ ಮನೀಗೆ ಅಂತ ಹೇಳಿಬರ್ರಿ ಮತ್ತ. ಆ ಮನಿಗೆ ಅಂತ ಹೇಳಿದರ ಬಿಡಲಿಕ್ಕಿಲ್ಲ. ಸುಮ್ಮನs ಗಪ್‌ಚಿಪ್ ಬರ್ರಿ.

ಗಂಗು

ನಾ ಒಲ್ಲೆವಾ ನಮ್ಮವ್ವಾ. ಆ ಮನಿ ಹತ್ರ ಹೋಗಲಿಕ್ಕೆ ಹೆದರಕೀನ ಬರತದ.

ಕಾಶಿ

ನಿಂದೂ ಒಂದು. ನಮಗ್ಯಾಕ ಹೆದರಿಕಿ. ಅವೆಲ್ಲಾ ಗಂಡು ಯಾತಕ್ಕ ಬರ ತಾವಂದೀ ?

ಸುಮ್ಮಿ

ಗೊತ್ತದೇಳs ಯವ್ವಾ. ಆ ಗಂಡು ತಗೊಂಡು ಏನ್ಮಾಡ್ತೀ, ಅವು ನೀ ಇದ್ದೀದಿ ಅಂತ ಬರಲಿಕ್ಕೆ ಒಪ್ಪಿಗೊಂಡಾವ. ನೀ ಏನ್ ಹೆದರಬ್ಯಾಡ ಗಂಗೂ, ಲಗೂನ ಹೊತ್ತು ಮುಳುಗೂದರಾಗ ಮನೀಗೆ ಬಂದುಬಿಡೂಣು.

ಇವೊತ್ತೇನು ಹುಣ್ಣಿವಿ ಅದ. ಬೆಳದಿಂಗಳಿರತದ. ಕೋಲು ಹಕ್ಕೋತ ಬರೂಣು. ಕೋಲೂ ತೊಗೊಂಡುಬರ್ರಿಲಂ.

ಕಾಶಿ

ನಿನ್ನ ಬೆನ್ನಮ್ಯಾಲೆ ಹಾಕಲಿಕ್ಕೇನು ? ಕೋಲು ತೊಗೊಂಡು ಏನು ಮಾಡತೀರಿ ? ಸುಮ್ಮನ ಚಿಣಿಫಣಿ ಆಡೋಣು.

ಸುಮ್ಮಿ

ಹೂಗs, ಗಂಡಸರಾಟ. ಅದನೇನು ಆಡತೀ. ಸುಮ್ಮನ ನಮ್ಮ ನಮ್ಮ ಆಟಾ ನಾವು ಆಡೂಣಂತ. ಹೋಗೋಣ ನಡ್ರೆವಾ ಇನ್ನs, ಹೊತ್ತಾತು.

(ಹೊರಡುವರು)

ಗಂಗು

(ಹೋಗುತ್ತಿರುವಾಗ ಕಾಶಿಯನ್ನು ತಡೆದು)

ರಂಗ್ಯಾನೂ ಬರತಾನೇನs ಕಾಶಿ?

ಕಾಶಿ

ಬಂದರ ಬರವಲ್ಲನ್ಯಾಕ. ನಿನ್ನೇನ್ ಸುಂಗತಾನೇನು ? ಎಷ್ಟು ಹೆದರತೀದೆ ನಮ್ಮವ್ವಾ ?

ಗಂಗು

ಅಂವ ಬಲು ಪುಂಗ್ಯಾ ಇದ್ದಾನs.

ಕಾಶಿ

ಇದ್ದರ ಇರವಲ್ಲನ್ಯಾಕ, ನಿನ್ನೇನ್ ಮಾಡತಾನ ನಡಿ.

(ಎಲ್ಲರೂ ಹೋಗುವರು)

ರಂಗ

[ಹಿಂದಿನಿಂದ ಬಾಯಲ್ಲಿ ಸಾರಂಗಿಯನ್ನಿಟ್ಟುಕೊಂಡು ಅದನ್ನು ಊದುತ್ತ ಅದಕ್ಕೆ ಸರಿಯಾಗಿ ಕುಣಿಯುತ್ತ ಅವಸರದಿಂದ ಅವರ ಹಿಂದೆಯೇ ಹೋಗುವನು.]

ಮುದುಕ

(ರಂಗ ಹೋಗುವ ರೀತಿಯನ್ನು ನೋಡಿ)

ನೋಡಿದ್ಯಾ ತಂಗಿ, ಹುಡುಗರಾಟಾ? ಎಲ್ಲಾ ಹಿರೇರಂಪಾಗs ಮಾಡತಾವು!

ಹಣ್ಣು ಮಾರುವವಳು

ಏಸು ಯಾಪಾರಾತು ಮುದಕಪ್ಪಾ ನಿಂದು ? ಇನ್ನ ಹೋಗೋಣs ?

ಮುದುಕ

ಏನು ಯಾಪಾರ ?...ಅದs ಹುಡ್ರು, ಅದs ಯಾಪಾರ....ಇದs ನಡದೈತಿ ನೋಡು ತಂಗಿ. ಹುಡ್ರು ಬರತಾವು, ಬಡದಾಡತಾವು, ಯಾಪಾರ ಮಾಡ ತಾವು, ಆಟಾ ಆಡತಾವು; ಎಲ್ಲಾ ಮುಗದಮ್ಯಾಗ ತಮ್ಮತಮ್ಮ ಮನೀಗೆ ಹೊಕ್ಕಾವು. ಬಾಳೇವೂ ಹೀಂಗs ನೋಡು ತಂಗಿ; ಹೌದಲ್ಲೋ?

ಹಣ್ಣು ಮಾರುವವಳು

ಕರೇವು ಯಜ್ಜಾ. ಆಡೋ ಮಕ್ಕಳನ್ನ ನೋಡಿದರ ಮರ್ತೇವs ಮರತು ಹೋಕ್ಕೈತಿ.

ಮುದುಕ

ಮಕ್ಕಳೂ ಅಂದ್ರ, ಸಾಯೋ ನಮಗ ಮುಂದಿನ ಆಸರ ಅವು ತಂಗೀ... ಮುಂದಿನ ಆಸರ.

ಹಣ್ಣು ಮಾರುವವಳು

ಈಟೊತ್ತನ ನೀ ಹೇಳಿದ ಈ ಮನೀ ಕತಿ ಕೇಳಿದರ, ಯಾಕಾರs ಆ ಹಸು ಗುಸುಗೋಳು ಅಲ್ಲೆ ಆಡಾಕ ಹೋಕ್ಕಿದ್ದಾವೂ ಅಂತ ಜೀವ ತಗಬಗಿ ಆಕ್ಕೈತಿ ನೋಡು !

ಮುದುಕ

ಅದಕ್ಕೇನಾಗತೈತಿ, ನೀನೂ ಒಂದು. ಸಣ್ಣಮಕ್ಕಳಿಗೆಲ್ಲಾ ಯಾತರ ಹೆದ ರಿಕಿ? ಮತ್ತ ಅವಕ್ಕೇನು ತಿಳೀತೈತಿ ? ದೆವ್ವನ ಹೆದರಿಕಿ ನಮಗ ನಿಮಗ, ಸಾವಿಗೆ ಅಂಜವರಿಗೆ. ಮಕ್ಕಳಿಗೆ ದೆವ್ವ ಏನೂ ಮಾಡೂದಿಲ್ಲ ನೋಡು... ಆ ಬಾವ್ಯಾಗ ಒಂದು ರಾತ್ರಿ ಏಳುಮಕ್ಕಳತಾಯಿ...

ಹಣ್ಣು ಮಾರುವವಳು

(ನಡುವೆಯೇ ತಡೆದು)

ಮತ್ತ ಬಂದೇನು ನಿನ್ನ ದಾರಿಗೆ ? ಅದೆಲ್ಲಾ ಏನು ಮಾತಡತೀ ನಡಿ. ಬಿಸ.

ಲೇರತ ಬಂತು...ಊರಾಗೀಟು ಹಾದುಬರೋಣ...ಮತ್ತ ಐತೆಲ್ಲ ಕುಂತು ಕೇಳೂದು ನಾಳೆ...

(ಎದ್ದುನಿಂತು ಅರಿವೆಯನ್ನು ಸಿಂಬಿಮಾಡಿ ತಲೆಯಮೇಲಿಟ್ಟುಕೊಂಡು)

ಯಜ್ಜಾ, ಒಂದೀಟು ಬುಟ್ಟಿ ಹಿಡಿತೀಯೇನು ?

ಮುದುಕ

ಆತು ನಡಿ ತಂಗಿ, ಬಂದ ದಾರಿಗೆ ತಿರಿಗಿ ಹೋಗೋಣ...

[ಬಡಿಗಿ ಊರಿ ಎದ್ದುನಿಂತು, ಕಾಲ್ಮರಿ ಮೆಟ್ಟಿ ಆಕೆಗೆ ಬುಟ್ಟಿ ಹೊರಿಸುವನು. ಹಣ್ಣುಮಾರುವವಳು ಬುಟ್ಟಿ ಹೊತ್ತುಕೊಂಡು ಮುಂದೆಮುಂದೆ ಹೋಗುವಳು. ಮುದುಕ ಕೋಲೂರುತ್ತ ಸಕ್ಕರಿಗಿಣಿಯ ಕುಚ್ಚನ್ನು ಹೆಗಲಿಗೆ ಆನಿಸಿಕೊಂಡು, ತನಗೆ ತಾನೇ ಒಂದು ಅನುಭವದ ಪದವನ್ನು:

“ ಬಾಲೆಯೊಬ್ಬಳು ನೀರಿಗೆ ಹೋಗಿ ।
ಕಾಲು ಜಾರಿತು । ಕೊಡಾ ಒಡೆಯಿತು । ಕೇಳೋ ಮನುಜಾ ।
ಬಯಲಿಗೆ ಬಯಲಾಯಿತು ನಿರ್ಬಯಲು ” ॥

ಎಂದು ಹೇಳಿಕೊಳ್ಳುತ್ತ ಸಾವಕಾಶವಾಗಿ ಹೋಗುವನು.]

ಅಂಕ : ೧ ದೃಶ್ಯ : ೨

ಆ ಮನೆಯ ಮುಖಮಂಟಪದಲ್ಲಿ

[ತೆರೆಯೇಳುವದು. ಹಿಂದಿನ ದೃಶ್ಯದಲ್ಲಿ ವರ್ಣಿಸಿದ ಆ ಮನೆಯ ಒಳಂಗಳ. ಸಾಕಷ್ಟು ವಿಶಾಲವಾಗಿದೆ. ಅಂಗಳದಲ್ಲಿ ನಾಲ್ಕು ದುಂಡನ್ನ ಗಚ್ಚಿನ ಕಂಭಗಳು ನಾಲ್ಕು ದಿಕ್ಕಿಗಿವೆ. ಬರಿ ಕಂಭಗಳು ಮಾತ್ರ ನಿಂತಿವೆ, ಐಶ್ವರ್ಯ ಕಳೆದುಕೊಂಡ ಶ್ರೀಮಂತನಂತೆ. ಅವುಗಳ ತಲೆಯ ಮೇಲೆ ಆಚ್ಛಾದನವೇನೂ ಇಲ್ಲ. ಕಾಡುಬಳ್ಳಿಗಳು ಮಲ್ಲಿಗೆ ಬಳ್ಳಿಗಳನ್ನು ಸರಿಸಿ ಕಂಭಗಳನ್ನು ಆಕ್ರಮಿಸಿವೆ. ಕಂಭಗಳ ಆಚೆ ರಂಗದ ಎದರಿಗೆ ಎತ್ತರವಾದ ದ್ವಾರವೊಂದಿದೆ. ಮುಚ್ಚಿದೆ. ಅದರ ಎಡಕ್ಕೂ ಬಲಕ್ಕೂ ದೊಡ್ಡ ಕಿಡಿಕಿಗಳಿವೆ. ಅವೂ ಮುಚ್ಚಿವೆ. ಬಾಗಿಲಿಗೆ ಕಟ್ಟಿದ ತೋರಣದ ಎಲೆಗಳೆಲ್ಲ ಉದುರಿ ಹೋಗಿ, ಅವಕ್ಕೆ ಆಧಾರವಾಗಿದ್ದ ದಾರ ಮಾತ್ರ ಎಲೆಗಳ ದೇಟುಗಳೊಡನೆ ತೂಗಾಡುತ್ತಿದೆ. ಮುಳ್ಳು-ಬಳ್ಳಿಗಳು ಈ ಬಾಗಿಲಿಗೂ ತಮ್ಮ ನಾಲಿಗೆ ಚಾಚಿವೆ. ಅಲ್ಲಿ ಇಲ್ಲಿ ಅಸ್ತವ್ಯಸ್ತವಾಗಿ ಬಿದ್ದ ಎದ್ದ ಹೂಬಳ್ಳಿಗಳ ಕುಂಡಗಳು ಒಂದು ಕಾಲದ ತಮ್ಮ ಸುಸ್ಥಿತಿಯನ್ನು ಸೂಚಿಸುತ್ತವೆ. ಸುಂದರವಾದ ಕುಂಡವು ಇದ್ದಲ್ಲಿ ಒಳಗೆ ಯಾವ ಹೂಬಳ್ಳಿಯೂ ಇಲ್ಲದೆ

ಬರಿದಾಗಿದೆ. ಒಡೆದು ಹೋದ ಕುಂಡಗಳಲ್ಲಿ ಗುಲಾಬಿಕಂಟಿಯೊಂದು ಒಣಕಲಾಗಿ ನೀರು ಕಾಣದೆ ಜೀವ ಹಿಡಿದುಕೊಂಡಿದೆ. ಒಂದು ಕಡೆಗೆ ಈ ಮುಖಮಂಟಪದ ಎರಡು ಕಂಭಗಳ ನಡುವೆ ಒಂದು ತುಳಸಿವೃಂದಾವನವಿದೆ. ಎತ್ತರವಾಗಿದೆ. ಅದರಲ್ಲಿ ತುಳಸಿಗಿಡ ಮಾತ್ರ ಇಲ್ಲ. ವೃಂದಾವನವೂ ನೋಡಿಕೊಳ್ಳುವವರಿಲ್ಲದೆ ಬಿರುಕುಬಿಟ್ಟಿದೆ. ಬಿರುಕಿನ ಸಂದಿಯಲ್ಲೆಲ್ಲ ಹುಲ್ಲು ಬೆಳೆದಿದೆ. ಮಹಾದ್ವಾರಕ್ಕೆ ಹೊಂದಿಕೊಂಡು ಮುಖ ಮಂಟಪದ ವರೆಗೆ ಬಳ್ಳಿಗಳನ್ನು ಹಬ್ಬಿಸಲು ಹಾಕಿದ ಕಬ್ಬಿಣಪಟ್ಟಿಯ ಹಂದರ. ಬರಲಾಗಿ ನಿಂತಿದೆ ವಿಧವೆಯಂತೆ. ತುಳಸಿಕಟ್ಟೆಯ ಮೇಲೆ ವೃಂದಾವನಕ್ಕೆ ಹೊಂದಿಕೊಂಡು ಒಂದು ನಾಗರಕಲ್ಲು, ಇನ್ನೊಂದು ಮಾಸ್ತಿಕಲ್ಲು ಯಾರ ಹಸ್ತಕ್ಷೇಪದಿಂದಲೋ ತಲೆ ಕೆಳಗಾಗಿ ನಿಂತಿವೆ. ಮುಖಮಂಟಪದ ನಾಲ್ಕು ಕಂಭಗಳಲ್ಲಿ ಎರಡರ ತಲೆಯ ಮೇಲೆ ಅಡ್ಡ ಬಿದ್ದ ಒಂದು ತೊಲೆಗೆ ಕಬ್ಬಿಣದ ಸಲಾಕಿಗಳಿಂದ ತೂಗುಮಣೆಯೊಂದು ಜೋತು ಬಿದ್ದಿದೆ. ಅವಕ್ಕಿದ್ದ ನಾಲ್ಕು ಸಲಾಕಿಗಳಲ್ಲಿ ಎರಡೇ ಈಗ ಅದರ ಭಾರ ಹೊತ್ತಿವೆ. ಇನ್ನೆರಡು ಹಾಗೇ ಆಡಿನ ಮೊಲೆಯಂತೆ ಜೋತಾಡುತ್ತಿವೆ. ತೂಗುಮಣೆಯೂ ಮುರಿದು ಹೋಗಿ ಆ ಎರಡು ಸಲಾಕಿಗಳ ಮಟ್ಟಿಗೆ ಒಂದು ಹಲಗೆ ಮಾತ್ರ ಉಳಿದುಕೊಂಡಿದೆ. ಮಕ್ಕಳನ್ನು ಆಕರ್ಷಿಸಲು ಈ ತೂಗುಮಣೆಯೊಂದೇ ಸಾಧನವಾಗಿದೆ. ಹಾಗೆಂದರೆ ಇನ್ನೂ ಇವೆ: ಕಪ್ಪಲಿಬಾವಿ ಇದೆ ಆ ಮನೆಯ ಹಿಮ್ಮಗ್ಗಲು. ಬಾರಿ ಇದೆ; ಪೇರಲ ಇದೆ; ಸೀತಾಪೇರಲ ಇದೆ; ಅಪರೂಪಕ್ಕೆ ಕೋರಿ ಇದೆ; ಮುಳ್ಳುಕಂಟಿಗಳಿಂದ ಇವು ಎಷ್ಟೇ ಆತ್ಮರಕ್ಷಣೆ ಮಾಡಿಕೊಳ್ಳುತ್ತಿದ್ದರೂ ಹುಡುಗರ ಸಾಹಸಕ್ಕೆ ಎಡೆಗೊಟ್ಟಿವೆ.

ಸಾಯಂಕಾಲ ನಾಲ್ಕು ಗಂಟೆಯಾಗಿದ್ದರೂ ಬಿಸಿಲಿನ ಕಾವು ಇನ್ನೂ ಇದೆ. ತುಳಸಿಕಟ್ಟೆಯ ಮೇಲೆ ಮಾತ್ರ ಒಂದು ಬದಿಯಿಂದ ಬಿಸಿಲು ಬಂದು ಹಾಸಿದಂತೆ ಬಿದ್ದಿದೆ.

ತೆರೆಯೇಳುತ್ತಿರುವಾಗಲೆ ಒಳಗಿನಿಂದ ದೊಡ್ಡ ದನಿಯಲ್ಲಿ "ಗುಡಮಾಗುಡಂ ಚೋರ್" ಎಂಬದು ಕೇಳಿಸುತ್ತದೆ. ಕಿಟ್ಟಿ, ಶ್ಯಾಮು, ಹಣಮು, ಭೀಮು, ಕಲ್ಲ ಇವರು ತುಳಸಿಕಟ್ಟೆಯಿಂದ ಅತ್ತ, ಇತ್ತ ಎಲ್ಲ ಕಡೆಗೂ ಹುಡುಕಲು ಬುದಿಬುದಿ ಓಡಿ ಹೋಗುವರು. ಗಣಪ್ಪ ಒಬ್ಬನೇ ಪಾಜೆಗಟ್ಟಿ ಕಾಯುತ್ತ ಕುಳಿತಿರುವನು. ಕೆಲ ಕ್ಷಣಗಳಲ್ಲಿಯೇ ಪಾಜೆಗಟ್ಟಿ ಮುಟ್ಟಲು ರಂಗ ಕದ್ದು ಓಡಿಬರುವನು. ಗಣಪ್ಪ ಮುನ್ನೋಡಿ ಕುಳಿತಿದ್ದಾನೆ. ರಂಗ ಬಂದಿದ್ದು ಅವನಿಗೆ ತಿಳಿಯುವದಿಲ್ಲ. ಆದರೆ ರಂಗನ ಹಿಂದೆಯೇ ಅವನಿಗೂ ತಿಳಿಯದಂತೆ ಕಿಟ್ಟಿ ಬೆನ್ನುಹತ್ತಿದ್ದಾನೆ. ಇನ್ನು ಪಾಜೆಗಟ್ಟಿ ಮುಟ್ಟುವವನು ರಂಗ. ಅಷ್ಟರಲ್ಲಿ ಉಳಿದವರೂ ಒಬ್ಬರಿಗೊಬ್ಬರು ಬೆನ್ನುಹತ್ತಿ ಓಡಿಬರುವರು. ಪಾಜೆಗಟ್ಟಿ ಮುಟ್ಟಲಾರದೆ ರಂಗ ಸಿಕ್ಕಿದ್ದರಿಂದ ಅವನಿಗೆ ಸೋಲಾಗುತ್ತದೆ. "ನಾವು ಗೆದ್ದೆವಲೇ" ಎಂದು ಕಿಟ್ಟಿಯ ಕಡೆಯ ಹುಡುಗರು ಒದರುವರು. ಎಲ್ಲರೂ ಬಂದು ತುಳಸಿಕಟ್ಟೆಯ ಮೇಲೆ ದಣಿದವರಾಗಿ ಕುಳಿತುಕೊಳ್ಳುತ್ತಾರೆ. ರಂಗ ಮಾತ್ರ

ಅವಮಾನಿತನಾದಂತಾಗಿ ಅವರಲ್ಲಿ ಕುಳಿತುಕೊಳ್ಳದೆ ತೂಗುಮಣೆಯ ಕಡೆಗೆ ಹೋಗಿ, ಅದರ ಮೇಲೆ ಅರ್ಧ ಕಾಲಿಟ್ಟುಕೊಂಡು ನಿಲ್ಲುತ್ತಾನೆ. "ನಮ್ಮ ಆಟಾ ಕೊಟ್ಟು ಹೋಗು ಬಾ" ಎಂದು ಕಲ್ಲ ರಂಗನಿಗೆ ಒದರುತ್ತಾನೆ. "ನಮಗಿನ್ನ ಆಟ ಸಾಕಪಾ. ನಾವು ಒಲ್ಲೆವು" ಎಂದು ಅತ್ತ ಮುಖ ತಿರುವುತ್ತಾನೆ ರಂಗ.]

ಕಿಟ್ಟಿ

(ಕುಳಿತವ ಎದ್ದು ಹುಡುಗರ ಕಡೆಗೆ ಮುಖಮಾಡಿ ನಿಂತು)

ಬಿಟ್ಟರ ಬಿಡವಲ್ಲನ್ಯಾಕ ಬಿಡ್ರಲೆ. ಅಂವ ಹಾಂಗs ಅಂವ. ಇನ್ನೂ ಬರಲಿಲ್ಲ ಲ್ಲಲೇ ಇವರು? ನಮಗ ಮಾತ್ರ ಲಗೂ ಬಾ ಅಂತ ಹೇಳಿ ತಾವು ಇನ್ನೂ ಬಂದಿಲ್ಲ.

ಶ್ಯಾಮ

ಆಕಿ ಕಾಕಿಲೇ, ಮತ್ಯಾರೂ ಅಲ್ಲ. ನಿಮ್ಮನ್ನ ಫಜೀತಿ ಮಾಡ್ಲಿಕ್ಕೆ ಹೀಂಗ ಮಾಡಿರಬೇಕು ನೋಡು.

ರಾಮ

ಹಾಂಗೇನಿಲ್ಲೊ. ನಾ ಬರೋವಾಗ ಹಾsಂಗ ತಯಾರಿ ನಡಿಸಿದ್ದರೋ.

ರಂಗ

ಮತ್ತ ಯಾಕ ಬರಲಿಲ್ಲಪಾ ಮಗನ ಇಷ್ಟೊತ್ತಾದರೂ?

ಕಿಟ್ಟಿ

ಬರತಾರೇಳೋ ಈಗ. ಸುಮ್ಮನ ಕೂತೇನು ಮಾಡೋದು? ಇನ್ನೊಂದು ಆಟಾ ಆಡೋಣ ಬರ್‍ರಿ.

ಭೀಮ

ಈ ಆಟ ಬ್ಯಾಡಪಾ. ಇನ್ನೊಂದು ಆಡೋಣು. ಬ್ಯಾಸರ ಬಂತಿದು.

ಕಿಟ್ಟಿ

ನೀನs ಹೇಳು, ಯಾವದನ್ನ ಆಡೋಣ?

ರಂಗ

ಗಿಡಮಂಗ್ಯಾನಾಟ ಆಡೋಣೇನು ?

ಕಲ್ಲ

ಬ್ಯಾಡಲೇಪ್ಪಾ. ನನ್ನ ಕಾಲs ನೋವಾಗೇತಿ. ಆಗಾಳೆ ಬಾರೀಹಣ್ಣು ಹರಿ. ಯಾಕ ಹೋಗಿ ಗಿಡದ ಮ್ಯಾಗಿಂದ ಬಿದ್ದೇನು. ಈಟರಾಗ ಹಾಗs ಕುಂತಲ್ಲೆ ಏನಾರ ಆಡೋಣ ಬೇಕಾರ.

ಹಣಮ

ಕುಂಟಮುಟ್ಟ್ಯಾಟ ?

ಕಿಟ್ಟ

ಹಂಗಾದರ ಕಲ್ಲ್ಯಾ ಕಡೆತನಕ ಕುಂಟಬೇಕಾಗತದ ನೋಡು.

ಭೀಮ

ಫಣಿಚಂಡು ?

ಭರಮ

ಸುಮ್ಮಕ ಹಾಗಾರ ಗುಂಡಾ ಆಡೋಣು.

ಕಿಟ್ಟ

ಎಲ್ಲಾರಿಗೂ ಬೇಕಲ್ಲಲೆ ಗುಂಡ ?

ರಾಮ

ನೀನs ಒಂದಾಟ ಹೇಳು ಮಹರಾಯಾ.

ಕಿಟ್ಟ

ಹೇಳ್ತೇನಿ, ಎಲ್ಲಾರೂ ಹುಂ ಅನಬೇಕು ಹಂಗಾರ.

ಎಲ್ಲರೂ

ಹುಂ, ಹುಂ, ಹುಂ, ಹುಂ.

ಕಿಟ್ಟ

ರಂಗ್ಯಾ, ನಿನಗ ಬೇಕಾದ ಹುದ್ದರಿ ನೀ ಆರಿಸಿಕೊ.

ರಂಗ

ಯಾವ ಆಟ ಹೇಳು ?

ಕಿಟ್ಟಿ

ಕಣ್ಣುಕಟ್ಟ್ಯಾಟ. ನಿನ್ನ ಮಂದಿ ನೀ ತಗೊ. ಎಲ್ಲಾರೂ ಕಣ್ಣು ಕಟ್ಟಿಗೋ ಬೇಕು. ಕಣ್ಣುಕಟ್ಟಿಗೊಂಡು ನಮ್ಮನ್ನ ಮುಟ್ಟಬೇಕು. ಕಟ್ಟಿಗೊಳ್ಳದಿದ್ದ ವರು ಈ ನಾಲ್ಕೂ ಕಂಭದ ಹೊರಗ ಹೋಗೋ ಹಾಂಗಿಲ್ಲ. ಹೋದ ವರು ಸತ್ತಾಂಗ. ನೀವು ಮೊದಲ ಕಣ್ಣು ಕಟ್ಟಿಗೋತೀರೋ, ಏನ್ ನಾವು ಕಟ್ಟಿಗೊಂಬೋಣೊ ? ಹಿರೇ ಹುದ್ದರಿ ನೀ ಹೇಳು. ಹುಂ, ಆರಿಸಿಕೊ.

ರಂಗ

(ಹುದ್ದರಿಗಳನ್ನು ಆರಿಸಿಕೊಳ್ಳುತ್ತ)

ನೀವs ಮೊದಲ ಕಣ್ಣು ಕಟ್ಟಿಗೋಬೇಕು.

(ತನ್ನ ಜನರನ್ನು ಬೇರೆ ಒಯ್ಯುವನು)

[ಕಿಟ್ಟಿ ತನ್ನ ಜನರ ಕಣ್ಣುಕಟ್ಟಿ, ತಾನು ಕೊನೆಗೆ ಕಟ್ಟಿಕೊಳ್ಳುವನು. ಆಟ ಪ್ರಾರಂಭವಾಗುವ ಮೊದಲು ರಂಗ ಬಂದು ಕಿಟ್ಟಿಯನ್ನು ಪರೀಕ್ಷಿಸಿ ನೋಡಿ, ತನ್ನ ಜನರಲ್ಲಿ ಹೋಗಿ ನಿಂತು " ಬಿಟ್ಟೇಬಿಟ್ಟೇ ಬೆಳಗಾಯಿತು, ತಟ್ಟೇಮನಿ ಹಾಳಾಯಿತು, ಹಾಳುಗೋಡ್ಯಾಗಿನ ದೆವ್ವ ಬಂದು ಬಡೀತು " ಎಂದು ಹೇಳುವನು. ಹುಡುಕಾಟ ಪ್ರಾರಂಭವಾಗುವದು. ಕೆಲ ನಿಮಿಷಗಳಲ್ಲಿಯೇ ಕಿಟ್ಟಿ ಓಡಿಹೋಗಿ ರಂಗನನ್ನು ಹಿಡಿದು " ಬೋಲ್ ಭಯ್ಯಾ ಬೋಲ್ " ಎನ್ನುವನು. ರಂಗ ಅನುಮಾನಿಸಿ ಕೊನೆಗೆ ಧ್ವನಿ ಬದಲಿಸಿ ಮಾತನಾಡುವನು. ಕಿಟ್ಟಿ ಗುರುತು ಹಿಡಿದು " ರಂಗ್ಯಾ " ಎಂದು ಕೂಗು ವನು. ಕಣ್ಣು ಕಟ್ಟಿಕೊಂಡವರು " ಹೋ " ಎಂದು ಕೂಗಿ ಕಣ್ಣು ಬಿಚ್ಚಿಕೊಳ್ಳುವರು. ಕಿಟ್ಟಿಯೂ ಕಣ್ಣುಬಿಚ್ಚಿ " ಸಿಕ್ಕೆಲ್ಲೊ ಮಗನ. ಬಾ ಇನ್ನ ಕಣ್ಣು ಕಟ್ಟಿಗೊ." ಎಂದು ಕೈ ಜಗ್ಗುವನು.]

ರಂಗ

ನೀ ಬರೋಬ್ಬರಿ ಕಣ್ಣುಕಟ್ಟಿಗೊಂಡಿದ್ದಿಲ್ಲ. ನಾವೇನು ಇನ್ನ ಕಣ್ಣುಕಟ್ಟಿ ಗೊಂಬವರಲ್ಲ.

ಕಿಟ್ಟಿ

ರಂಗ್ಯಾ, ನೀ ಹಿಂಗsಲೆ, ಸೋತಪ್ಯಾಲ ಏನಾರ ಒಂದು ತೊಂಟ ನ್ಯಾಯಾ ತಗೀತಿದಿ. ಅಳದಕ್ಕಿ ನೋಡಲೆ.

ಭರಮು

ಅಳತೈತಿ ಅಳತೈತಿ ರಂಡಿ, ಕೊಳ್ಳಾಗ ಬೇವಿನ ದಂಡಿ.

ರಂಗ

(ಭರಮುನ ಮೈಮೇಲೆ ಏರಿಹೋಗಿ)

ಎಲೇ ಭರಮ್ಯಾ, ಹ್ಯಾಂಗ ಕಾಣಸ್ತೈತೆಲೆ ? ಬಾಯಾಗಿನ ಹಲ್ಲು ಮುರಿಸಿ ಕೊಂಡೀ ಹಲ್ಲು !

ಭರಮು

(ಎದುರಿಸಿ, ಸೆಟೆದು ನಿಂತು)

ಯಾಕ್ಕs, ನಮ್ಮ ಆಟಾ ಕೊಟ್ಟು ಹೋಗು ಹಾಗಾರ. ಹಲ್ಲು ಮುರಿಸಿ ಕೊಣ್ಣಾಕ ಅವ್ವಚ್ಚಿ ಅಲ್ಲ ಹೋಗು.

ರಂಗ

ಎಲೇ...

(ಏರಿ ಹೋಗುವನು)

ಕಿಟ್ಟಿ

(ಬಂದು ತಡೆದು)

ಏ ರಂಗ್ಯಾ, ಬಿಡೋ ಮಗನ. ಇಲ್ಲದ ತೊಂಟನ್ಯಾಯ ಹೂಡಬ್ಯಾಡ.

ರಾಮು

ಏ ಕಿಟ್ಟ್ಯಾ, ಇನ್ನ ಆಟಾನs ಸಾಕುಮಾಡಪಾ. ಏನೇನೂ ಬ್ಯಾಡ ಇನ್ನ. ಇನ್ನೊಂದು ಸ್ವಲ್ಪಹೊತ್ತು ನೋಡೋಣು; ಅವರು ಬಂದರೂ ಛಲೋ ಆತು. ಇಲ್ಲದಿದ್ದರ ಹೋಗಿಬಿಡೋಣ.

ಎಲ್ಲರು

ಹಾಂಗs ಮಾಡೋಣ.

(ತುಳಸಿಕಟ್ಟಿಯ ಮೇಲೆ ಸಾಲಾಗಿ ಕುಳಿತುಕೊಳ್ಳುವರು. ಕಿಟ್ಟಿ ಎಲ್ಲರ ಮಧ್ಯದಲ್ಲಿ; ರಂಗ, ಭರಮು ಅವನ ಎಡಬಲಕ್ಕೆ.)

ಕಿಟ್ಟಿ

(ಎದ್ದು, ಮಹಾದ್ವಾರದ ಕಡೆಗೆ ನೋಡಿ)

ಅಲ್ಲೋ ರಂಗ್ಯಾ, ಈ ಮನೀ ಬಾಗಿಲರೆ ಮುಚ್ಚೇದ. ಒಳಗೇನಿದ್ದೀತಪಾ? ಯಾರರೆ ಹೋಗಿ ನೋಡೀರೇನ್ರಲೆ ?

ಎಲ್ಲರು

ಇಲ್ಲ, ಇಲ್ಲ.

ಕಿಟ್ಟಿ

ರಂಗ್ಯಾ, ಬಾಗಿಲು ತಗದ ನೋಡೋಣs?

ಕಲ್ಲ

ಬ್ಯಾಡಲೇಪ್ಪಾ. ಒಳಗ ಒಂದು ದೆವ್ವ ಕುಂತೈತಿ ಅಂತ ! ನಮ್ಮಪ್ಪ ಒಮ್ಮೆ ಈ ಬಾಕಲಾ ಕಿತಿಗೊಂಡು ಹೋಗಬೇಕೂ ಅಂತ ಬಂದಾಗ ಅಂವಗ ಕಂಡಿತ್ತಂತ ! ಕಿತಿಗೊಳ್ಳೂ ಮುಂದ ಕೈ ಹಿಡಿದು ಜಗ್ಗಿತಂತಲೇ ! ಮುಂದ ನೋಡು, ನಮ್ಮಪ್ಪಾ ಜರಾ ಬಂದು ಎಂಟು ದಿನಾ ಮಲಗಿದ್ನಂತ! ಬ್ಯಾಡಲೇಪ್ಪಾ...

ಕಿಟ್ಟಿ

ಹೋಗಲೇ, ನಿಮ್ಮಪ್ಪೇನು ಬರತಾನು ಇಲ್ಲೆ, ಗೂರಪ್ಪ ! ಅಲ್ರೆಪಾ, ಆ ಖಿಡಿಕಿ ಅವಲ್ಲ, ಅಲ್ಲಿಂದ ಒಳಗ ಯಾಕ ನೋಡಬಾರದು ? ಬಾಗಲಾ ತಗೆಯೋದು ಬ್ಯಾಡಾಗಿದ್ದರು ಹಣಿಕಿಹಾಕಿ ಯಾಕ ನೋಡಬಾರದು ? ನಾ ಅಂತೂ ಹೋಗಾಂವ; ನೀವು ಬೇಕಾದರ ಬರ್ರಿ, ಸಾಕಾದರ ಬಿಡ್ರಿ.

(ಹೊರಡುವನು)

ಎಲ್ಲರು

ನಾವೂ ಬರ್ತೀವಿ, ನಾವೂ ಬರ್ತೀವಿ.

[ಎಲ್ಲರೂ ಹೊರಡುವರು. ಬಾಗಿಲ ಸಂದಿಯೊಳಗಿಂದ ಕೆಲವರು, ಎರಡೂ ಬದಿಗಿರುವ ಕಿಡಿಕಿಗಳೊಳಗಿಂದ ಕೆಲವರು, ಒಬ್ಬರಾದಮೇಲೊಬ್ಬರು, ಒಬ್ಬರ ಬೆನ್ನಮೇಲೇರಿ ಒಬ್ಬರು ನೋಡುತ್ತಾರೆ. ಹಣಮ ಮಾತ್ರ ಇವರೆಲ್ಲರನ್ನೂ ಬಿಟ್ಟು ಮನೆಯ ಹಿಂದೆ ಹೋಗುತ್ತಾನೆ. ಗಣಪ್ಪ ಎಲ್ಲಿಯೂ ಹೋಗದೆ ತುಳಸಿಕಟ್ಟೆಯ ಮೇಲೆ ಒಬ್ಬನೇ ಕಾಲಾಡಿ

ಸುತ್ತ ನಿರಂಬಳಭಾವದಿಂದ ಕುಳಿತಿರುತ್ತಾನೆ. ಸ್ವಲ್ಪ ಹೊತ್ತಿನ ನಂತರ ಒಬ್ಬೊಬ್ಬರಾಗಿ ಮರಳಿ ಬಂದು ತುಳಸಿಕಟ್ಟೆಯಮೇಲೆ ಸಾಲಾಗಿ ಕುಳಿತುಕೊಳ್ಳುತ್ತಾರೆ.]

ಕಿಟ್ಟಿ

ಹುಂ, ಹೇಳ್ರಿಪಾ ಎಲ್ಲಾರೂ, ನಿಮಗೇನೇನು ಕಾಣಿಸಿತು ಒಳಗ ?

ರಂಗ

ನೀ ಹೇಳು ಮೊದಲ.

ಕಿಟ್ಟಿ

ಎಲ್ಲಾರದೂ ಆದಮ್ಯಾಲ ನಾ ಹೇಳತೀನಿ. ನೀವು ಹೇಳಿದ್ದರ ಮ್ಯಾಲ ಒಂದ್ಹೆಚ್ಚು ಹೇಳಾಂವ. ಭೀಮ್ಯಾ, ನೀ ಸುರುವುಮಾಡೆಲೆ.

ಭೀಮ

ನೋಡಪಾ, ಒಳಗ ನೋಡಿದರ ಒಂದು ಯೇಳು ಹೆಡಿ ಸರ್ಪ ಕಂಡಿತು ನೋಡು ನನಗ ! ಖಟ್‌ಖರೆ ಮತ್ತ. ನಮ್ಮೂರ ಗೌಡರು ಆ ಕ್ವಾಣ್ಯಾಗ ಯೇಳು ಕೊಪ್ಪರಿಗಿ ಹೊನ್ನು ಹುಗದಾರಂತಪಾ ! ಅದನ್ನ ಕಾಯಲಿಕ್ಕೇ ಆ ಸರ್ಪ ಇರತದಂತ ! ಏನ್ ಇತ್ತಂದೀ ಅದೂ ! ಅಬಬ ! ನೋಡಿದರ ಮೈ ಜುಮ್‌ಅಂತಿತ್ತು. ಅದರ ಮೈಮ್ಯಾಲ ನೋಡು, ಗೇಣಗೇಣುದ್ದಾ ಕೂದಲ ಏನಪಾ ! ಸ್ವಲ್ಪ ನೋಡಿದವನs ಮುಂದ ನೋಡಲಾರದ ಕಣ್ಣs ಮುಚ್ಚಿದೆ ! ದೇವರಾಣಿ, ಸುಳ್ಳು ಹೇಳಿದರ.

ರಂಗ

ನಮಗೇನು ಅದು ಕಾಣಸಲಿಲ್ಲ ತಗಿ. ದೈವಾನಪಾ ನೀನು !

ಕಿಟ್ಟಿ

ನೀಯೇನು ನೋಡಿದ್ಯೋ ರಾಮ್ಯಾ ?

ರಾಮು

ನಾ ಮಾತ್ರ ದೆವ್ವನ್ನ ನೋಡಿದ್ನೆಪಾ !

ಕಿಟ್ಟಿ

ಹ್ಯಾಂಗಿತ್ತಲೆ ದೆವ್ವಾ ?

ರಾಮು

ಹ್ಯಾಂಗಂದರ, ದೆವ್ವ ಇದ್ದ್ಹಾಂಗಿತ್ತು.

ಕಿಟ್ಟಿ

ಹೌದಲೆ, ಹ್ಯಾಂಗ ಕಾಣಸತಿತ್ತು ? ಮನಸೇರ್‍ಹಾಂಗೋ, ದನದ್ಹಾಂಗೋ? ಕಣ್ಣು ಇದ್ದವೇನಲೆ ?

ರಾಮು

ಅದನ್ನ ಮಾತ್ರ ನೋಡಲಿಲ್ಲಪಾ ನಾನು. ಯಾಕಂದರ ನೋಡನೋಡ್ತ ನನ್ನ ಕಣ್ಣs ಮುಚ್ಚಿಬಿಟ್ಟಿದ್ದವು.

ಕಿಟ್ಟಿ

ಇಂವಾ ಹಂಗಾದರ ಕಣ್ಣುಮುಚ್ಚೇ ನೋಡ್ಯಾನ್ರೆಪೊ.

(ಕೆಲರು ನಗುವರು)

ನೀನಲೆ ಕಲ್ಲ್ಯಾ?

ಕಲ್ಲ

ನನಗ ಏನೂ ಕಾಣಲಿಲ್ಲ ತಗಿ. ಎತ್ತ ನೋಡಿದರೂ ಬರಿ ಕತ್ತಲೆಪಾ. ಇವರಿಗೆಲ್ಲಾ ಈಟು ಹ್ಯಾಗ ಕಂಡಿತೋ ಏನೋ !

ಕಿಟ್ಟಿ

ಕಣ್ಣು ಮುಚ್ಚಿದ್ದಿಲ್ಲ ಹೌದಲ್ಲೊ ?

ಕಲ್ಲ

ನಾಯೇನು ಅಂಜಬುರಕ ರಾಮ್ಯಾ ಏನು?

ಕಿಟ್ಟಿ

ಏ ಶ್ಯಾಮಾ,ನೀ ಏನು ನೋಡಿದ್ಯೊ ?

ಶ್ಯಾಮು

ಯಾರೋ ಒಳಗ ಅಡ್ಡಾಡಿದ್ಹಾಂಗ ಕಾಣಿಸಿತಪಾ. ಬೆಳ್ಳಗಂದು ಉಟ್ಟಿದ್ದರು. ನಾ ಹಣಿಕಿಹಾಕಿದ ಕಡೆಗೇ ಬಂದ್ಹಾಂಗ ಆತು. ಅಯ್ಯಯ್ಯಪ್ಪಾ ಅಂದು ಜಿಗಿದು ಬಂದೆ ನೋಡು...

ರಂಗ

ಹೋಗಲೆ, ಸುಳ್ಳು ಹೇಳತಿ.

ಶ್ಯಾಮ

ಸುಳ್ಳಾದರ ಬಿಡು. ನನಗ ಕಂಡದ್ದು ನಾ ಹೇಳಿದ್ನೆಪಾ.

ಕಿಟ್ಟಿ

ನಿನಗೇನು ಕಂಡಿತು ಹೇಳು ಮಗನ ರಂಗ್ಯಾ, ಹಂಗಾದರ ?

ರಂಗ

ಎಲ್ಲೀದನೋ ಯಾರೋ ಹಾಡಿದ ದನಿ ಕೇಳಿಸಿತಪಾ ನನಗ. ನೋಡ ಬೇಕು ಎತ್ತಲಾಗಿಂದ ಬರತದ ಅಂದ್ರ, ಕತ್ತಲಿ ಬ್ಯಾರೆ ಇತ್ತು.

ಕಿಟ್ಟಿ

ಹಣಮ್ಯಾ ಇನ್ನೂ ಬಂದಿಲ್ಲೇನ್ರೊ ?

ಭೀಮ

ಅಕಾ, ಪ್ಯಾರಲಕಾಯಿ ತಿನಕೋತ ಬರತಾನ ನೋಡು ಅಲ್ಲೆ.

[ಹಣಮ ಬಲಗೈಯಿಂದ ಪೇರಲಕಾಯಿ ತಿನ್ನುತ್ತ ಬಂದು ಎಡಗೈಯಲ್ಲಿಯ ಒಂದು ಕಾಯನ್ನು ಕಿಟ್ಟಿಗೆ ಒಗೆಯುವನು. ಕಿಟ್ಟಿ ಅದನ್ನು ಹಿಡಿಯುವನು.]

ಕಿಟ್ಟಿ

ಯಾಕಲೇ ಹಣಮ್ಯಾ, ನೀ ನೋಡಲಿಲ್ಲೇನು ?

ಹಣಮ

(ಪೇರಲಕಾಯಿ ತಿನ್ನುತ್ತ)

ಓಹೋ, ಮ್ಯಾಲ ಹತ್ತಿ ಬೆಳಕಿಂಡ್ಯಾಗಿಂದ ನೋಡಿ ಬಂದೀನಿ.

ಕಿಟ್ಟಿ

ಹೇಳಿಕೇಳಿ ನಿನ್ನ ಹೆಸರs ಮಂಗ್ಯಾನಪ; ಅಲ್ಲ ಹಣಮಪ್ಪ. ಅಲ್ಲ್ಯೇನು ಸೀತಾ ಇದ್ದಾಳ ಅಂತ ತಿಳಕೊಂಡು ಮ್ಯಾಲಿನಿಂದ ಹೋಗಿ ಉಂಗರಾ ಕೊಡಲಿಕ್ಕೆ ಹೋಗಿದ್ದೇನು ಮಗನ? ಏನು ಕಾಣಿಸ್ತೆಪಾ ?

ಹಣಮ

ನನಗ, ನೋಡಪಾ, ಒಳಗ ಬರೇ ಸಮುದ್ರದಂಗ ಕಂಡಿತು. ನಾ ನಡುವ ಕೆಮ್ಮಿದೆ, ನನ್ನ ದನಿ ನನಗs ಹ್ಯಾಂಗ ಕೇಳಿಸಿತಂದೀ? ಭಾಳ ಮಜಾ ಕೇಳಿಸಿತೆಪಾ. ಮುಂದ ನೋಡು, ಅದರ ತೆಳಗ ಪಾತಾಳ ಅದಂತ. ಅದರೊಳಗ ಮುತ್ತುರತ್ನಾನs ಇಷ್ಟು ಅವಂತ, ರಾಶಿರಾಶಿ ಗುಡ್ಡದ್ಹಾಂಗ ಬಿದ್ದಾವಂತ!

ಶ್ಯಾಮ

(ಹಣಮನನ್ನು ಚೇಷ್ಟೆ ಮಾಡುವದಕ್ಕಾಗಿ)

ಜಲಜಮಿತ್ರನು ಕಡಲಸಾರೆ ಸೀತೆಯನು।

(ಎಲ್ಲರೂ ನಗುವರು)

ಕಿಟ್ಟಿ

ಭಲಾ ಮಗನ! ಸಮುದ್ರ ಜಿಗೀಲಿಕ್ಕೆ ಹೋಗಿದ್ದೇನು ಅಲ್ಲೆ?

ರಂಗ

(ಕಿಟ್ಟಿಗೆ)

ಎಲ್ಲಾರದೂ ಆತು, ನಿಂದಿಷ್ಟು ಅಗಲಿನ್ನ; ಏನು ನೋಡಿದಿ ಹೇಳಿನ್ನ. ಎಲ್ಲಾರ ಮ್ಯಾಲ ಒಂದು ಹೆಚ್ಚು ಅಂತಿದ್ದೆಲ್ಲೊ, ಏನು ಹೆಚ್ಚು ಕಂಡೀ ಹೇಳೋ ಯಣ್ಣಾ?

ಕಿಟ್ಟಿ

ಯಾಕ, ಹೆದರತೀನೇನು ನಿನಗ? ಹೇಳ್ತೀನಿ ತಗೊ... ಏನೂ ಇಲ್ಲದ ಈ ಧೂಳು ತುಂಬಿದ ಕತ್ತಲಿಮನಿಯೊಳಗ ಈ ಭೀಮ್ಯಾಗ ಯೋಳು ಹೆಡಿ ಸರ್ಪ ಕಂಡಿತಂತ; ಈ ರಾಮ್ಯಾಗ ದೆವ್ವ ಕಂಡಿತಂತ; ಈ ರಂಗ್ಯಾಗ ಮಗ್ಗ, ಹಾಡೋದು ಕೇಳಿಸಿತಂತ; ಈ ಶ್ಯಾಮ್ಯಾಗ ಯಾರೋ ಅಡ್ಡಾಡಿ ದಂಗ ಕಾಣಿಸಿತಂತ; ಹಣಮ್ಯಾಗ ಮುಗ್ಗ, ಮನ್ಯಾಗ ಸಮುದ್ರ ಕಂಡಿತಂತೆ! ಏನೂ ನೋಡಿಲ್ಲಲೆ ನೀವು!

(ಗಂಭೀರನಾಗಿ ಹಿರಿತನದ ಥಾಟಿನಲ್ಲಿ)

ಈ ಮನಿ ನಮ್ಮೂರ ಹಿರಿಗೌಡರದು ಏನ್ರೆಪಾ. ಭಾಳ ಶ್ರೀಮಂತರಿದ್ದರು ಅವರು. ಈ ಮನ್ಯಾಗ ಮುನ್ನೂರು ಖಂಬ ಅವ; ಇನ್ನೂರು ನೆಲಮನಿ

ಅವ; ಪ್ರತಿಯೊಂದು ಖಂಬದೊಳಗೂ ಏಳು ಖಂಬ ಅವ; ಪ್ರತಿಯೊಂದು ನೆಲಮನಿಗೂ ಏಳು ಬಾಗಿಲ ಅವ; ಬಾಗಿಲಕ್ಕ ಏಳು ಚಿಲಕ ಅವ; ಚಿಲಕಕ್ಕ ಏಳು ಕೊಂಡಿ ಅವ; ಒಂದು ನೆಲಮನಿಅನಕಾ, ಆ ಸುಡಗಾಡಗಟ್ಟೀ ಹತ್ತರ ಈಶ್ವರನ ಗುಡಿ ಇಲ್ಲs, ಅಲ್ಲೀತನಕ ಹೋಗೇದ...

ರಂಗ

(ನಡುವೇ ತಡೆದು, ಅಣಕದ ದನಿಯಲ್ಲಿ)

ಒಂದs ಕಿಡಿಕ್ಯಾಗಿಂದ ನೀ ಹ್ಯಾಂಗ ನೋಡಿದೆಪಾ ಮಗನs ಇಷ್ಟೆಲ್ಲಾ ?

(ಎಲ್ಲರೂ ನಗುವರು)

ಕಿಟ್ಟಿ

ಅಷ್ಟೂ ನೋಡತಾರೇನೋ ಮಳ್ಳs. ಕಂಡದ್ದರ ಮ್ಯಾಲಿಂದ ತಿಳಕೋಬೇಕಪಾ ಅವನ್ನೆಲ್ಲಾ.

(ಹತ್ತಿರದಲ್ಲಿಯೆ ಕೋಲುಹಾಕುವ ಸಪ್ಪಳ ಕೇಳುವದು)

ಏನೋ ಕೋಲುಹಾಕಿದ ಸಪ್ಪಳ ಕೇಳಸ್ತದಲ್ರೋ ? ಬಂದರೇನು ?

(ಎಲ್ಲರೂ ಅತ್ತಕಡೆ ನೋಡುತ್ತ ನಿಲ್ಲುವರು)

ಹೆಣ್ಣು ಹುಡುಗರು

"ಆಡಲ್ಹೋಗೋಣು ಬಾರೊ ರಂಗ। ಕೂಡಿ ಯಮುನಾತೀರದಲ್ಲಿ ॥ಪ॥

ಕುಂಡಿನವು ನಗರವಂತೆ। ಭೀಷ್ಮಕರಾಜನ ಕುವರಿಯಂತೆ
ಶಿಶುಪಾಲನ ಒಲ್ಲಳಂತೆ। ನಿನಗೆ ಓಲೆ ಬರೆದಳಂತೆ ॥ "
ಆಡಲ್ಹೋಗೋಣು ಬಾರೋ ರಂಗ...

(ಈ ಹಾಡಿನೊಂದಿಗೆ ಕೋಲುಹಾಕುತ್ತಿರುವದು ಸ್ಪಷ್ಟವಾಗಿ ಕೇಳಿಬರುತ್ತದೆ)

ಹುಡುಗರು

ಓ ಬಂದರೆಲೆ ಬಂದರು !

(ಹೆಣ್ಣುಹುಡುಗರು ರಂಗದ ಮೇಲೆ ಬರುತ್ತಲೆ ಕೋಲುಹಾಕುವದನ್ನು ನಿಲ್ಲಿಸುವರು)

ಕಿಟ್ಟಿ

(ಹೆಣ್ಣುಹುಡುಗರನ್ನು ಎದುರಿಸಿ)

ಯಾಕs ಕಾಶಿ, ನಮಗೆಲ್ಲಾ ಲಗೂ ಬಾ ಅಂತ ಹೇಳಿ, ನಿವು ಆರಾಮ ಕೋಲುಹಕ್ಕೋತ ಚಕ್ಕಂದ ಹೊಡಕೋತ ನೀವs ತಡಮಾಡಿದಿರೆಲ್ಲ ?

ಕಾಶಿ

(ತಂದ ಸಾಮಾನು ಒತ್ತಟ್ಟಿಗಿಡಲು ಹೇಳಿ)
ನಾವೇನು ಗಂಡಸರೇನು, ಬಿಟ್ಟ ಕೆಲಸಾ ಬಿಟ್ಟು ಬರಲಿಕ್ಕೆ ?

ಸುಮ್ಮಿ

(ಮುಂದೆ ಬಂದು ಹಾವಭಾವದಿಂದ)
ನಾವೆಲ್ಲ ಲಗೂ ಬಂದಿದ್ದೆವಪಾ ಕಾಶೀ ಮನಿಗೆ. ಅವರವ್ವನs 'ಅಷ್ಟು ಉಪಗಾರಣಿ ತಿಕ್ಕಿ ಹೋಗ್ರೇ' ಅಂತ ಹೇಳಿದರು. ಅದಕ್ಕಿಷ್ಟು ತಡಾ ಆತು.

ಕಾಶಿ

(ಸುಮ್ಮಿಯ ಭುಜ ಹಿಡಿದು ಸ್ವಲ್ಪ ದಬ್ಬಿದಂತೆ ಮಾಡಿ)
ಮಳ್ಳೀ, ಮತ್ತ ಮ್ಯಾಲೆ ಪಡಿ ಅವಲಕ್ಕಿ ಮುಕ್ಕಿದಿರೆಲ್ಲ, ಅದನ್ನ ಹೇಳೋ ಹಾಂಗಿಲ್ಲೇನೋ !

(ಕಿಟ್ಟಿಗೆ)
ಅಲ್ಲೋ ಕಿಟ್ಟ್ಯಾ, ನಾವು ಬರೋದರಾಗ ಅಷ್ಟು ಕಸಾ-ಗಿಸಾ ಉಡುಗಿದ್ದರ ಏನು ಧಾಡಿ ಆಗತಿತ್ತೇನು ? ಕೂತಾರ ಹಂಗs ಎಲ್ಲಾರೂ.

ಕಿಟ್ಟಿ

ನಮ್ಮನ್ನೇನು ಆಡಲಿಕ್ಕೆ ಬಾ ಅಂದಿದ್ಯೋ, ಏನು ಬರೇ ಆಳಿನ ಕೆಲಸ ಮಾಡಲಿಕ್ಕೆ ಬಾ ಅಂದಿದ್ಯೋ ? ಮತ್ತ ಮೊದಲs ಹಾಂಗ ಹೇಳಿದ್ದರ, ನಮ್ಮಾಳು ಕರ್‍ಯಾನ್ನs ಕರಕೊಂಡು ಬರತಿದ್ನೆಲ್ಲ.

ಕಾಶಿ

ಇಲ್ಲ್ಯಾ ಗೌಡ ಅಂತ ತಿಳಿದೀಯೇನು, ಎಲ್ಲಾ ನಿನ್ನ ದಂಡು-ದಾರ್ಬಲ ತೊಗೊಂಡು ಬರಲಿಕ್ಕೆ ? ಅಪ್ಪ, ಬಾಜೀರಾಯನ ಠೀವಿ ಇಟ್ಟಾನ.

ಕಿಟ್ಟಿ

ಇಕಾ ಮತ್ತ ಜಗಳಾ ಸುರುವು ಮಾಡಿದ್ಯಾ ನೀ, ಬಡದಾಡೂದಿಲ್ಲಾ ಅಂತ ಹೇಳಿ ?

ಕಾಶಿ

ನೀ ಹೇಳಿದಷ್ಟು ಕೆಲಸಾ ಮಾಡಿದ್ದರ ನಾ ಎಲ್ಲಿ ಬಡದಾಡತಿದ್ದೆ? ಹೋಗ್ರಿ ಹಂಗಾರ, ಗಿಡದ ಬರಲು ತಂದು ಕಸಬರಗಿ ಮಾಡಿ ಕಸಾ ಉಡಗರಿ ನೋಡೋಣು. ಏ ಭೀಮೂ, ನೀ ಅಷ್ಟು ಹೋಗಿ ಈ ತಂಬಿಗ್ಯಾಗ ನೀರು ತುಂಬಿಕೊಂಡು ಬಾ. ಕಸಾ ಉಡುಗಿದಮ್ಯಾಲೆ ಅಷ್ಟು ಥಳಿ ಹಾಕು. ಆಮ್ಯಾಲೆ ಆಟ ಸುರುವು.

[ಕಿಟ್ಟಿ ಬರ್ಲು ತರಲಿಕ್ಕೆ ಹೋಗುವನು. ಭೀಮು ತಂಬಿಗೆ ತೆಗೆದುಕೊಂಡು ನೀರು ತರಲಿಕ್ಕೆ ಹೋಗುವನು. ಕಿಟ್ಟಿ, ಕಾಶಿ ಇವರ ಮಾತು ನಡೆದಾಗ ಹೆಣ್ಣುಹುಡುಗರು ತಾವು ತಂದ ಸಾಮಾನುಗಳನ್ನು ಓರಣವಾಗಿ ಇಡಲು ಬೇರೆ ಕಡೆಗೆ ಮರೆಗೆ ಹೋಗಿರುವರು. ಕೆಲ ಗಂಡುಹುಡುಗರು ಇವರು ಬಂದ ನಂತರ ಅತ್ತಿತ್ತ ಅಡ್ಡಾಡುತ್ತಿರುವರು. ರಂಗ ಮಾತ್ರ ತೂಗುಮಣೆ ಬಿಟ್ಟು ಕದಲಲಿಲ್ಲ.]

(ಕಾಶಿ ಸುಮ್ಮಿಯನ್ನು ತನ್ನ ಕಡೆಗೆ ಕರೆದು)

ಇಕಾ ಸುಮ್ಮಿ, ಯಾವ ಆಟಾ ಅಂತ ಈಗs ಬಾಯಿಬಿಡಬ್ಯಾಡಾ. ನಿಂದು ಒಡಕಬಾಯಿ.

(ಹೆಣ್ಣುಹುಡುಗರಿಗೆಲ್ಲ)

ಏನ್ರೆ, ನೀವೆಲ್ಲಾರೂ ಹೋಗಿ ಹೂ ಆರಿಸಿಕೊಂಡು ಬರ್ರಿ. ಆಮ್ಯಾಲ ಮಾಲೀ ಕಟ್ಟೀರಂತ.

ರಂಗ

(ತೂಗುಮಣೆಯಿಂದ ಹತ್ತಿರ ಬಂದು)

ಮಾಲಿ ಯಾಕs ಕಾಶಿ? ನೀವೆಲ್ಲಾರು ಹಕ್ಕೊಂಡು ಮೆರದಾಡವ್ರೋ ಏನು? ಮಾಲಿ ಹಕ್ಕೊಂಡ್ರ ಗಂಗು ಒಬ್ಬಾಕಿ ಹಾಕಿಕೊಳ್ಳಲಿ. ಆಕಿ ಒಬ್ಬಾಕಿ ಛಂದ ಕಾಣಸ್ತಾಳ.

ಗಂಗು

(ನಾಚಿ, ಮೆಲ್ಲಗೆ ಕಾಶಿಯು ಹತ್ತಿರ ಸರಿದು ಅವಳ ಕಿವಿಯಲ್ಲಿ)

ಈ ರಂಗ್ಯಾ ಯಾಕೋ ಬೆನ್ನs ಬಿಡವಲ್ಲ ನಮ್ಮವ್ವಾ! ನೀನರೆ ಅವಗ ಹೇಳs ಕಾಶಿ.

ಕಾಶಿ

(ರಂಗನಿಗೆ)

ನಿನಗ್ಯಾಕೋ ಅದೆಲ್ಲಾ, ಹೆಣ್ಣಮಕ್ಕಳ ಕಾರಭಾರ? ನಾವು ಬೇಕಾದ್ದು

ಮಾಡತೀವಿ. ನೀ ಹೋಗು ನಿನ್ನ ಕೆಲಸಕ್ಕ. ಇಲ್ಲ್ಯಾಕ ಸುತ್ತಾಡತೀ ಹೆಣ್ಣುಹುಡುಗರಾಗ ?

(ರಂಗ ದುರುಗುಟ್ಟಿ ನೋಡುತ್ತ ಹೊರಟುಹೋಗುತ್ತಾನೆ. ಕಿಟ್ಟಿ ಭೀಮು ಮೊದಲಾದವರು ಬಂದು ಕಸಗೂಡಿಸಿ ಥಳಿ ಹಾಕುತ್ತಾರೆ.)

ಕಿಟ್ಟಿ

(ಕಾಶಿಗೆ)

ಇನ್ನೇನು ಮಾಡೋದು ? ಊಟ ಹೌದಲ್ಲೋ ?

ಕಾಶಿ

(ಸಾಮಾನುಗಳನ್ನು ಸಜ್ಜುಗೊಳಿಸುತ್ತ)

ಊಟಂತ, ಊಟ. ಆಟ ಮೊದಲ, ಆಮ್ಯಾಲೆ ಊಟ.

ಕಿಟ್ಟಿ

ಉಶ್ಶ್ ಮಾರಾಯಳs ! ಆಟ ಮೊದಲs ? ಯಾವ ಆಟ ಅದನ್ನರೆ ಹೇಳಲಾ? ಎಷ್ಟೊತ್ತಾತು ನಾವು ಬಂದು ಕೂತು, ಬ್ಯಾಸತ್ತುಹೋಗೀವಿ.

ಕಾಶಿ

ಹೇಳತದ ತಡಿಯಲಾ; ಅಷ್ಟ್ಯಾಕ ದೆಸೆಬಾಯಿ ಬಿಡತೀದಿ ? ಇಕಾ, ಎಲ್ಲಾರು ಕೇಳ್ರಿಲ್ಲೆ. ನಾವಿವೊತ್ತು ಆಡೋದು ಹಿರೇರ ಆಟ.

ಕಿಟ್ಟಿ

ಇದೆಲ್ಲೀ ಆಟs ಕಾಶಿ ? ಹ್ಯಾಂಗ ಆಡೋದು ಅದನ್ನ ?

ಕಾಶಿ

ಹೇಳತೀನಿ ತಡಿಯಲಾ. ಎಲ್ಲೀ ಆಟಾ ಅಂದ್ರ, ಎಲ್ಲಾರ ಮನಿ ಆಟಪಾ. ದೊಡ್ಡವರು ಮಾಡಿದ್ಹಾಂಗ ಮಾಡಿದರಾಯಿತು. ಅದs ನಮ್ಮ ಆಟ.

ಕಿಟ್ಟಿ

ಅಂದರ ಏನು ಮಾಡಬೇಕು ನಾವೆಲ್ಲಾ ?

ಕಾಶಿ

ನಾ ಹೇಳಿದ್ಹಾಂಗ ಕೇಳ್ತೀನಿ ಅಂದರ ಹೇಳತೀನಿ. ಇಲ್ಲದಿದ್ರ ಇಲ್ಲ.

ಕಿಟ್ಟಿ

ಕೇಳತೀವಿ, ಆಟ ಆದಮ್ಯಾಲ ತಿನ್ನಲಿಕ್ಕೆ ಕೊಟ್ಟರ.

ಕಾಶಿ

ಕೊಡತದೇಳೋ, ಸುಮ್ಮಗ ಹುಂ ಅನ್ನು.

ಕಿಟ್ಟಿ

ಹೂಂ.

ಕಾಶಿ

ಬರ್ರಿಲ್ಲೆ ಎಲ್ಲಾರು.

(ಎಲ್ಲರೂ ಕಾಶಿಯ ಸುತ್ತಲೂ ಬಂದು ನಿಲ್ಲುವರು)

ಮೊದಲ ಯಾರ್‍ಯಾರು ಏನೇನು ಮಾಡಬೇಕಂಬೋದನ್ನ ಹೇಳತೀನಿ. ಸುವ್ಮ್ಯಾ, ನಾ ಹೇಳಿದ್ದೆಲ್ಲಾ ತಂದೀಯಲ್ಲಾ ?

ಸುವ್ಮ್ಯಾ

(ತಂದಿರುವದಾಗಿ ಗೋಣು ಹಾಕಿ ತಿಳಿಸುವಳು)

ಕಾಶಿ

ಇಕಾ, ಮೊದಲ ಮದಿವೀಮಾಡೋಣು.

ರಂಗ

ಥತ್, ಗೊಂಬೀಮದಿವಿ ಹೌದಲ್ಲೋ ? ನಾಯೇನು ಒಲ್ಲೆ. ನೀವs ಆಡಿಕೋಳ್ರಿ.

(ಸಾಲು ಬಿಟ್ಟು ಹೊರಟುನಿಲ್ಲುವನು)

ಕಾಶಿ

ಏ ರಂಗ್ಯಾ, ನೀ ಏನಾsರ ರೊಳ್ಳೀ ತಗೀಬ್ಯಾಡ ಮೊದಲs. ಗೊಂಬೀ ಮದಿವಿ ಅಲ್ಲ, ಆತಿಲ್ಲೋ ? ಇಕಾ ರಂಗ್ಯಾ ನಿನಗ ಮೊದಲs ನಾ ಹೇಳಿರ ತೇನಿ, – ಆಟಕ್ಕ ಒಮ್ಮೆ ಹೂಂ ಅಂದಮ್ಯಾಲ ಒಲ್ಲೆ ಅಂಬೋಹಾಂಗಿಲ್ಲ, ಆಂ ?

ರಂಗ

ಗೊಂಬೀದಲ್ಲಿದ್ರ ಕಬೂಲ್. ಕನ್ಯಾ-ವರಾ ಯಾರು ಆಗವರು ?

ಕಾಶಿ

ಯಾರ್‍ರs ಆದಾರು, ನಿನ್ನ ಬಿಟ್ಟು.

ರಂಗ

ನಾ ಆಗಲಿಕ್ಕೆ ಕೇಳಿದ್ನೇನು ?

ಕಾಶಿ

ಬಿಡು ಹಂಗಾರ. ನಮ್ಮೊಳಗs ಇಬ್ಬರನ್ನ ಆರಿಸಿದರಾಯಿತು. ಮೊದಲ ಕನ್ಯಾ ಯಾರಾಗಬೇಕು ? ನೀವೆಲ್ಲಾರೂ ಕೂಡಿಕೊಂಡು ಹೆಳ್ರಿ; ಅಂದರ ನಾವು ಹೇಳತೀವಿ ವರಾ ಯಾರು ಆಗಬೇಕೂ ಅಂತ.

ರಂಗ

(ಯಾರನ್ನೂ ಕೇಳದೆ ಧಡಕ್ಕನೆ)

ಹಂಗಾರ ಗಂಗೂ ಕನ್ಯಾ ಆಗಲಿ.

(ತಾನೇ ವರನಾಗುವೆನೆಂಬ ಅಭಿಮಾನದಿಂದ ಎದೆ ಸೆಟಿಸಿ ಗಂಗೂನನ್ನು ನೋಡುವನು)

ಗಂಗು

ನಾ ಒಲ್ಲೆವಾ ! ನನಗ ಯಾಕೋ ಹೆದರಿಕಿ ಬರತದ. ನಾ ಗೊಂಬೀ ಆಟೇನೋ ಅಂತ ಮಾಡಿ ಹೂಂ ಅಂದೆ.

ಕಾಶಿ

ಮದಿವಿ ಅಂದರ ಹೆದರತಾರೇನs ? ನಾ ಆಗಿದ್ದರ ಮಾಡಿಕೊಂಡುಬಿಡ. ತಿದ್ದೆ ನೋಡು.

ಕಿಟ್ಟಿ

ಈಗಾರೆ ಏನಾತು, ನೀನs ಆಗಲ್ಲ ?

ಕಾಶಿ

ಒಲ್ಲೆ ಮಹರಾಯಾ ! ನನ್ನ ಮಾಡಿಕೊಂಡವರು ಏನು ಉಣತಾರ. ಗಂಗೂನs ಆಗಲಿ. ನಮ್ಮೆಲ್ಲಾರೊಳಗ ನಕ್ಷತ್ರ ಇದ್ದಾಂಗ ಇದ್ದಾಳ. ಆಕಿನ್ನ ಮಾಡಿಕೊಳ್ಳಲಿಕ್ಕೆ ಪುಣ್ಯಾ ಬೇಕು. ಹೂಂ ಅನ್ನs ಗಂಗೂ ಸುಮ್ಮನ. ಇನ್ನ ನಾ ಹೇಳತೀನಿ ವರಾ ಯಾರು ಆಗಬೇಕೂ ಅಂಬೋದನ್ನ...

ಕಿಟ್ಟಿ

(ನಡುವೆಯೇ ತಡೆದು)

ಕಾಶಿ, ಹೀಂಗ ಬ್ಯಾಡಾ, ಕನ್ಯಾ-ವರಾ ಆರಿಸೋದು.

(ಗಂಗೂನನ್ನು ನೋಡಿ)

ನಾ ಹೇಳ್ತೀನಿ ಹಾಂಗ ಮಾಡೋಣು.

ಕಾಶಿ

ಹುಂ, ಹೇಳಪ್ಪ.

ಕಿಟ್ಟಿ

ನೀವೆಲ್ಲಾರೂ ಅತ್ತಲಾಗ ಸಾಲಾಗಿ ನಿಲ್ಲಿರಿ. ನಾವೆಲ್ಲಾರೂ ಇತ್ತಲಾಗ ಸಾಲಾಗಿ ನಿಲ್ಲತೇವಿ. ನಿಮ್ಮ ಪೈಕಿ ಒಬ್ಬರ ಕಣ್ಣುಕಟ್ಟಿ ಬಿಡೋಣು. ನಮ್ಮ ಪೈಕಿ ಯಾರನ್ನ ಮುಟ್ಟತಾಳೋ ಅವರು ವರ. ಅಲ್ಲಿಂದ ನಮ್ಮ ಪೈಕಿ ಒಬ್ಬರ ಕಣ್ಣುಕಟ್ಟಿ ಬಿಡೋಣು, ಅವರು ಯಾರನ್ನ ಮುಟ್ಟತಾರೋ ಅವರು ಕನ್ಯಾ. ಹೂಂನಃ ?

ಎಲ್ಲರೂ

ಹುಂ, ಹುಂ, ಹುಂ.

ಕಿಟ್ಟಿ

ನಿಮ್ಮ ಪೈಕಿ ನೀ ಕಣ್ಣುಕಟ್ಟಿಗೋ ಕಾಶಿ. ನಮ್ಮ ಪೈಕಿ ರಂಗ್ಯಾ ಕಣ್ಣು ಕಟ್ಟಿಗೊಳ್ಳಲಿ. ಹುಂ, ನಿಂದರ್ರಿ ಸಾಲಾಗಿ ಅತ್ತಲಾಗ ಇತ್ತಲಾಗ.

ಕಾಶಿ

(ಸಾಲಿನಲ್ಲಿ ನಿಂತು)

ಯಾರು ಮೊದಲ ?

ಕಿಟ್ಟಿ

ರಂಗ್ಯಾ ಮೊದಲ. ಹುಂ, ರಂಗ್ಯಾ ಕಣ್ಣು ಕಟ್ಟಿಗೊಂಡಿಲ್ಲೊ ? ಹಣಮ್ಯಾ, ಅವನ್ನ ತಿರಿಗಿಸಿಬಿಡಲೇ...

[ಹಣಮ ಹಾಗೆ ಮಾಡುವನು. ರಂಗ ಕಣ್ಣು ಕಟ್ಟಿಗೊಂಡು ಮೊದಲು ವಿರುದ್ಧ ದಿಶೆಗೆ ಹೋಗಿ, ಎಲ್ಲರೂ ನಕ್ಕದ್ದನ್ನು ಕೇಳಿ ಅಲ್ಲಿಂದ ತಿರುಗಿಕೊಂಡು, ಎದುರಿಗೆ ಹೋಗಿ ಗಂಗೂನನ್ನು ಹಾಯುವನು. ಎಲ್ಲರೂ "ಹೋ!" ಎಂದು ಚಪ್ಪಾಳೆ ಹೊಡೆಯುವರು. ಗಂಗೂ ಮತ್ತೆ ವಧುವಾದಳು. ಅಲ್ಲಿಂದ ಕಾಶಿ ಕಣ್ಣು ಕಟ್ಟಿಗೊಂಡು ಹೊರಡುವಳು. ಅವಳು ಮನಸ್ಸಿನಲ್ಲಿ ಕಿಟ್ಟೂನನ್ನೇ ಆರಿಸಬೇಕೆಂದು ಗೊತ್ತುಮಾಡಿಕೊಂಡು ಅವನು ನಿಂತಿದ್ದ ಜಾಗವನ್ನು ನೋಡಿಕೊಳ್ಳುವಳು. ಆದರೆ ಸುಮ್ಮಿ ಬಂದು ಅವಳು ಹೊರಡುವ ಪೂರ್ವದಲ್ಲಿ ಅವಳನ್ನು ಗಿಮಿಗಿಮಿ ತಿರುಗಿಸಿ ಕೈಬಿಡುವಳು. ಇದರಿಂದ ಕಿಟ್ಟಿ ನಿಂತ ಜಾಗ ತಪ್ಪಿಹೋಗುವದು.ಆದರೆ ರಂಗ ಕಿಟ್ಟಿ ಸುಮ್ಮನೆ ಯಾವದೊ ಕಾರಣಕ್ಕಾಗಿ ತಾವು ನಿಂತ ಸ್ಥಳಗಳನ್ನು ಕಾಶಿ ಮುಟ್ಟಲು ಹೊರಡುವ ಮೊದಲೇ ಅದಲು ಬದಲು ಮಾಡುವರು. ಕಾಶಿ ದಿಕ್ಕು ತಪ್ಪಿದರೂ ಸರಿಯಾಗಿ ಕಿಟ್ಟಿಯನ್ನೇ ಬಂದು ಹಿಡಿಯುವಳು. ಹೆಣ್ಣುಹುಡುಗರೆಲ್ಲ ಚಪ್ಪಾಳೆ ಹೊಡೆದು ಕುಣಿದಾಡುವರು. ಕಿಟ್ಟಿ ವರನಾದ.]

ಸುಮ್ಮಿ

ನೋಡs ಗಂಗೂ, ನಿನ್ನ ಮನಸ್ಸಿನ ತಕ್ಕ ವರಾ ಸಿಕ್ಕ.

ಗಂಗು

ಸುಮ್ಮೀ, ನೀ ಹಾಂಗೆಲ್ಲಾ ಅನಬ್ಯಾಡವಾ. ನನಗ ಯಾಕೋ ಹೆದರಿಕಿ ಆಗಲಿಕ್ಕೆ ಹತ್ತ್ಯೇದ.

ಕಾಶಿ

ಅದರಾಗೇನದನs? ಹೇಳಿಕೇಳಿ ಆಟವಾ ಇದು.

ಗಂಗು

ಈ ಸುಮ್ಮಿನ್ನ ಮಾಡಬಾರದs ಕಾಶಿ? ನಾ ಒಲ್ಲೆ.

ಸುಮ್ಮಿ

ಹ್ಯಾಂಗ ಬಿಡತದs ಯವ್ವಾ. ಇದು ಆಟ ಅದ ಆಟ.

ಕಿಟ್ಟಿ

(ಗಂಗೂನ ಗೋಳನ್ನು ನೋಡಿ)

ಏ ಕಾಶಿ, ನಾ ಮದವೀನs ಮಾಡಿಕೊಳ್ಳೂದಿಲ್ಲs. ನನ್ನ ಬಿಟ್ಟುಬಿಡಲ್ಲ.

ಯಾರು ಹೂಂ ಅಂತಾರ ಅವರನ್ನ ಮಾಡಲ್ಲ.

ಕಾಶಿ

ಅದು ಒಲ್ಲೆಂದರ ಹ್ಯಾಂಗ ಬಿಟ್ಟೀತಪಾ? ಅದು ಮದಿವಿ. ಆಟಕ್ಕ ಬಂದೀದಿ ಅಂದಮ್ಯಾಲ ಒಲ್ಲೆಂದರ ಹ್ಯಾಂಗ ನಡೀತದ? ಇದಿಲ್ಲಾ, ಇನ್ನೊಂದಾಗ ಬೇಕು.

ರಂಗ

ಅವನs ಅಂಬೋದೇನು? ಅಂವ ಒಲ್ಲೆಂದರ ಅವನ್ನ ಬಿಟ್ಟು ಇನ್ನೊಬ್ಬನ್ನ ಮಾಡಬೇಕು?

ಕಾಶಿ

ಅದು ಹ್ಯಾಂಗ ಆಗತದ ಅದು? ಒಮ್ಮೆ ಗೊತ್ತಾದಮ್ಯಾಲ ತೀರಿಹೋತು. ತಪ್ಪಿಸಲಿಕ್ಕೆ ಬರೋಹಾಂಗಿಲ್ಲ. ಇಲ್ಲದ ಡೋಕಾರಿತನ ತಗೀಬ್ಯಾಡ್ರಿನ್ನ ಎಲ್ಲಾ ಆದಮ್ಯಾಲ. ರಂಗ್ಯಾ, ನೀ ಬಂದು ಗಂಗೂನ್ನ ಮುಟ್ಟಿದಾಗ ಗಂಗೂ ಒಲ್ಲೆಂದಳೇನು? ನಾವು ಬ್ಯಾಡಾ ಅಂದಿವೇನು? ಅದರಾಗ ನಾವು ಬಾಯಿಹಾಕಿದಿವೇನು? ಇಷ್ಟಾಗಿ ಕಣ್ಣುಕಟ್ಟಿಗೊಂಡು ಗೊತ್ತಾದದ್ದು ಇದು. ಹ್ಯಾಂಗ ಒಲ್ಲೆ ಅನ್ನಲಿಕ್ಕೆ ಬರ್ತದ? ಹುಂ, ಅದೇನಿಲ್ಲ ತಯಾರಾಗರಿನ್ನ. ಏ ಸುಮ್ಮಿ, ನೀ ಹೆಣ್ಣಿನ ಕಡೆ ಬೀಗಿತ್ತಿ ಆಗು. ಹ್ಯಾಂಗೂ ಗಂಗೂಗ ತಾಯಿಲ್ಲ, ನೀ ಆಗು. ನಾ ಗಂಡಿನ ಕಡೆ ಬೀಗಿತ್ತಿ ಆಗತೇನಿ. ರಾಮು ಗಂಗೂನ ತಂದಿ ಆಗಲಿ; ಭೀಮು ವರನ ತಂದಿ ಆಗಲಿ.

ಭೀಮು

ನಾ ಒಲ್ಲೆ; ನೀ ನನ್ನ ಹೇಣ್ತಿ ಆಗತೀದಿ.

ಕಾಶಿ

ಆಟದಾಗೇನದನೋ? ಸುಮ್ಮನs ಜಗಳಾಡಬ್ಯಾಡ. ಏನು ನಮ್ಮದs ಈ ಮದಿವಿ? ನಮ್ಮದೆಂದೋ ಆಗಿಹೋಗೇದ. ಈಗ ಒಲ್ಲೆಂದರೂ ಬಿಡೋಹಾಂಗಿಲ್ಲ. ಹುಂ, ಆತಲ್ಲs? ಇನ್ನ ಹಣಮು ಹ್ಯಾಂಗಾದರೂ ಪುರೋಹಿತರ ಮಗಾ, ಅವನs ಲಗ್ನಾ ಮಾಡಸೋವ ಆಗಲಿ. ಇಬ್ಬರ ಮನಿ ಪುರೋಹಿತನೂ ಅವನs. ಶ್ಯಾಮು ವರನ ಸೋವರಮಾವ ಆಗಲಿ. ರಂಗ ತ್ವಾಳ

ಆಗಿ ಬರಲಿ. ಏ ದಮ್ಮಿ, ನೀ ಸೋದರತ್ತೆ ಆಗು. ಯಾಕಽ ನಾರಿ ಯಾಕ ಸೊಟ್ಟಮೂಡಿದಿ ? ಅಂವೇನು ಖರೇ ಗಂಡನಽ ಆಗತಾನೇನು ? ಏ ತಾರಿ, ನೀನು ಕಳಸಗಿತ್ತಿ ಆಗು. ಉಳಿದ ಮಂದೆಲ್ಲ ಅತ್ಲಾಗಿಷ್ಟು ಇತ್ಲಾಗಿಷ್ಟು ಬೀಗರಾಗಿರಿ. ಹಂ, ನಡ್ರಿ ಇನ್ನ. ಎಲ್ಲಾರೂ ಕೆಲಸಕ್ಕ ಹತ್ತರಿ. ಅಕಾ, ಆ ಖಂಬದ ಮೂಲಿ ನಿಮ್ಮ ಮನಿ. ಈ ತುಳಸಿಕಟ್ಟೀ ಇತ್ತಲಾಗಿನ ಖಂಬದ ಮೂಲಿ ನಮ್ಮ ಮನಿ. ರಾಮ್ಯಾ, ಸುಮ್ಮಿ, ಹುಂ ಹೋಗ್ರಿನ್ನ ನಿಮ್ಮ ಮನಿಗೆ, ಮಗಳನ್ನ ಕರಕೊಂಡು ಬಂದು ವರಗ ತೋರಸಲಿಕ್ಕೆ. ನಾವೆಲ್ಲಾ ಈ ಖಂಬದ ಮರೆಗೆ ಹೋಗಿ ತಯಾರಾಗತೇವಿನ್ನ. ಅತ್ಲಾ ಕಡೆ ಮಂದೆಲ್ಲಾ ಅತ್ಲಾಗ ಹೋಗರಿನ್ನ.

[ರಾಮು, ರಂಗ, ಹಣಮು, ಸುಮ್ಮಿ, ಗಂಗು, ಭರಮು ಇಷ್ಟು ಹುಡುಗರದೊಂದು ಗುಂಪು ಒಂದು ಮೂಲೆಯ ಕಂಭದ ಮರೆಗೆ ಹೋಗುವದು. ಭೀಮು, ಕಿಟ್ಟಿ, ತಾರಿ, ದಮ್ಮಿ, ಕಾಶಿ, ಗಣಪ್ಪ ಇಷ್ಟು ಹುಡುಗರ ಇನ್ನೊಂದು ಗುಂಪು ಇನ್ನೊಂದು ಮೂಲೆಯ ಕಂಭದ ಮರೆಗೆ ಹೋಗುವದು.]

ತೆರೆ

ಮೊದಲ ಅಂಕ ಮುಗಿದುದು

ಅಂಕ : ೨ ದೃಶ್ಯ : ೧

ಆ ಮನೆಯಲ್ಲಿ ಮದುವೆ

[ತೆರೆಯೆದ್ದಾಗ ಕಾಣುವ ದೃಶ್ಯ ಇದು: ಯಾರೊಬ್ಬರ ಗತಿಯಲ್ಲಿಯೂ ಅವಸರ ಗಡಿಬಿಡಿ ಇದೆ. ರಂಗದ ಒಂದು ಮೂಲೆಯ ಕಂಭದ ಹತ್ತಿರ ಗಂಗೂನ ಗುಂಪಿನವರು ಹೊರಡುವ ತಯಾರಿಯಲ್ಲಿದ್ದಾರೆ. ವೇಷಭೂಷಣ ಹಿರಿಯರ ಮಾದರಿಯಲ್ಲಿ ಮಾಡಿದ್ದಾರೆ. ಸುಮ್ಮಿ ಹಿರಿಮುತ್ತೈದೆಯಂತೆ ಕಚ್ಚೆಹಾಕಿ ಸೀರೆ ಉಟ್ಟಿದ್ದಾಳೆ. ನಡುತಲೆ ಬೈತಲ ತೆಗೆದು ಥಾಳಾದ ಉದ್ದ ಕುಂಕುಮ ಹಚ್ಚಿದ್ದಾಳೆ. ಹಳೆಯ ರೀತಿಯಲ್ಲಿ ಉದ್ದ ಹೆಳಲಿನ ಮುಡಿ ಕಟ್ಟಿದ್ದಾಳೆ. ಗಂಗೂ ಕನ್ಯೆಯಂತೆ ಸೀರೆ ಉಟ್ಟಿದ್ದಾಳೆ. ರಾಮು ತಂದೆಯಂತೆ ರುಮಾಲು ಸುತ್ತಿ ಧೋತರ ಹೊದ್ದಿದ್ದಾನೆ. ಪುರೋಹಿತ ಪುರೋಹಿತನೇ ಆಗಿದ್ದಾನೆ. ಇತ್ತ ಕಾಶಿಯ ಮನೆಯಲ್ಲಿಯೂ ತಯಾರಿ ನಡೆದಿದೆ. ಕಾಶಿ ಹಿರಿಮುತ್ತೈದೆಯಂತೆ ಸೀರೆ ಉಟ್ಟು ಒಳಗೆ ಹೊರಗೆ ಓಡಾಡುತ್ತಿದ್ದಾಳೆ. ಕಿಟ್ಟಿಗೆ ವರನಂತೆ ಛಂದಾಗಿ ವೇಷಮಾಡಿಕೊಳ್ಳಲು ಹೇಳುತ್ತಿದ್ದಾಳೆ. ಕನ್ನೆ ತೋರಿಸಲು ಬರುವವರಿಗಾಗಿ ಸಿದ್ಧತೆ ನಡೆಸಿದ್ದಾಳೆ. ಭೀಮ ಅತ್ತ ಇತ್ತ ಸುಮ್ಮನೆ ಬಾಲ ಸುಟ್ಟ ಬೆಕ್ಕಿನಂತೆ ಓಡಾಡುತ್ತಿದ್ದಾನೆ.]

ಕಾಶಿ

(ಜಮಖಾನೆ ಹಾಸಿ, ತಯಾರಾದ ಮೇಲೆ ಮನೆಯ ಹೊರಕ್ಕೆ ಬಂದಂತೆ ನಟಿಸಿ, ಸುಮ್ಮಿಯ ಮನೆಯ ಕಡೆಗೆ ಮುಖಮಾಡಿ ಎತ್ತರದ ದನಿಯಲ್ಲಿ)
ಬರ್‍ರೀ ನಮ್ಮವ್ವಾ, ಎಷ್ಟೊತ್ತದು? ಎಲ್ಲಾ ತಯಾರುಮಾಡಿಕೊಂಡು ಕೂತೀವಿ. ಹುಡಿಗಿನ್ನ ಬ್ಯಾಗನ ಕರಕೊಂಡು ಬರ್‍ರಿ.

(ಎಂದು ಒದರಿ ತಿರುಗಿ ಮನೆಯೊಳಕ್ಕೆ ಬಂದು, ಬೆನ್ನಹಿಂದೆ ಕೈಹಿಡಿದುಕೊಂಡು ಶತಪಥ ಹಾಕುತ್ತಿದ್ದ ಭೀಮನಿಗೆ)
ನೀನು ಹೀಂಗ ಬರೆ ಲಾಳಿ ಓಡಾಡಿದ್ಹಾಂಗ ಅತ್ಲಾಗ ಇತ್ಲಾಗ ಓಡಾಡಿದರ, ಬೆನ್ನಹಿಂದ ಕೈಹಿಡಕೊಂಡು? ಕನ್ಯಾದ ಕಡೆಯವರು ಬರ್‍ಲಿಕ್ಕೆ ಹತ್ಯಾರ. ಅವರನ್ನ ಕರಕೊಂಡು ಬರ್‍ರಿ ಹೋಗ್ರಿ.

ಭೀಮ

(ಹೊರಗೆ ಹೋದಂತೆ ಮಾಡಿ ಎದುರಿಗೆ ಬರುತ್ತಿರುವ ರಾಮ, ರಂಗ, ಹಣಮ ಮೊದಲಾದವರನ್ನು ನೋಡಿ)
ಬರ್‍ರಿ ಬರ್‍ರಿ ಬರ್‍ರಿ.

(ಕರೆದುಕೊಂಡು ಬಂದು ಹಾಸಿದ ಜಮಖಾನೆಯ ಮೇಲೆ ಕುಳ್ಳಿರಿಸಿ, ತಾನೂ ಕುಳಿತುಕೊಳ್ಳುವನು. ಸುಮ್ಮಿ, ಗಂಗು ಇವರನ್ನು ಕಾಶಿ ಒಳಗೆ ಕರೆದುಕೊಂಡು ಹೋಗುವಳು. ಕೆಲ ನಿಮಿಷ ರಾಮ, ಭೀಮ, ಹಣಮ ಇವರ ನಡುವೆ ಔಪಚಾರಿಕವಾಗಿ ಹಿರಿಯರ ಧಾಟಿಯಲ್ಲಿಯೆ ಮಾತುಗಳು ನಡೆಯುವವು.)

ಹಣಮ

(ಹೊದ್ದ ಧೋತರವನ್ನು ಹಿರಿಯರಂತೆ ಕಾಲಿಗೆ ಸುತ್ತಿಕೊಂಡು)
ನೋಡ್ರಿ ರಾಯರ, ನಮ್ಮ ರಾಮರಾಯರೂ ಅಂದ್ರ, ಬಹಾಳ ಸಜ್ಜನರು. ಅವರ ಮನಿಯವರಂತೂ ಲಕ್ಷ್ಮೀ ಇದ್ಧಾಂಗ ಇದ್ದಾರ. ಇಂಥವರ ಮಗಳು ಅಂದಮ್ಯಾಲ ಕೇಳೋದೇನದ? ಕುಂಡಲಿ ನೋಡೇದ. ಎಲ್ಲಾ ಕೂಡಿ ಬಂದsದ. ಮತ್ತ ನಮ್ಮ ಭೀಮರಾಯರೂ ಅಂದ್ರ ಏನಂತೀರಿ? ಅವರೂ ಸಾಮಾನ್ಯ ಅಲ್ಲ. ಅವರ ಕುಟುಂಬ ಕಾಶೀಬಾಯರು ಇದ್ದಾರಲ್ಲ ಬಲ್ತೆ ಹುರುಪಿನವರು. ಅನ್ನ ಇದ್ದ ಮನಿ ಹೊಗಸಬೇಕೂ ಅಂತಿದ್ರೆಲ್ಲ,– ಇಲ್ಲಿ ಅನ್ನ ಅದ, ವಸ್ತ್ರ ಅದ, ಬೇಕಾದ್ದು ಅದ. ಇವರ ಮಕ್ಕಳು ಕೃಷ್ಣರಾಯರು ಆಗಳೆ ಕೆಲಸದಾಗ ಇದ್ದಾರ ಏನ್ರೆಪಾ; ಯಾಕ ಹೇಳ್ತೀನಿ

ಅಂದ್ರ ಎರಡೂ ಮನಿ ಪುರೋಹಿತ ನಾನು, ಎರಡೂ ಮನಿಗೂ ಕಲ್ಯಾಣ ಆಗಿರಬೇಕು...

ಕಾಶಿ

(ಹೊರಗೆ ಬಂದು)

ಹುಡಿಗಿನ್ನ ಕಳಸಲೇನು ಹೊರಗ ?

ಭೀಮು

(ಗಂಭೀರನಾಗಿ)

ಹುಂ, ಬರಲೆಲ್ಲಾ.

ಕಾಶಿ

(ಅಲ್ಲಿಯೇ ನಿಂತುಕೊಂಡು)

ಹೋಗವಾ. ಎಲ್ಲಾ ಗಂಡಸರಿಗೆ ನಮಸ್ಕಾರ ಮಾಡು. ಕೂಡು ಒಂದು ಕಡೆ.

(ಗಂಗೂ ಬಂದು ನಮಸ್ಕಾರಮಾಡಿ ಒಂದು ಕಡೆ ಮುದುಡಿಕೊಂಡು ಕನ್ನೆ ಕುಳಿತಂತೆ ಕೂಡುವಳು.)

ಭೀಮು

ನಿನ್ನ ಹೆಸರೇನವಾ ?

ಗಂಗು

ಗಂಗು.

ಭೀಮು

ಏನೇನು ಕಲತೀಯೆವಾ ?

ಗಂಗು

ಕನ್ನಡ ನಾಲ್ಕನೇ ಯತ್ತಾ.

ಭೀಮು

ಹಾಡಲಿಕ್ಕೆ ಬರತವೇನು ತಂಗಿ ?

ಗಂಗು

(ಸುಮ್ಮನಿರುವಳು)

ಸುಮ್ಮಿ

ಹಾಡು ಗಂಗೂ, ಮೊನ್ನೆ ಹಾಡಿದ್ದೆಲ್ಲಾ ಅದನ್ನs ಹಾಡು.

ಗಂಗು

(ಜುಲುಮೆಯಿಂದ ಹಾಡುವಳು)

ಕೃಷ್ಣಾ ನೀ ಬೇಗನೆ ಬಾರೊ। ಮುಖವನು ತೋರೊ।
ಕಾಶಿ ಪೀತಾಂಬರ। ಕೈಯಲಿ ಕೊಳಲು।
ಪೂಸಿದ ಶ್ರೀಗಂಧ। ಮೈಯೊಳಗಮ್ಮ॥

(ಕಿಟ್ಟಿ ಮುಖ ಕೆಳಗೆ ಹಾಕುವನು)

ಭೀಮು

(ಹಾಡು ಮುಗಿದ ಮೇಲೆ)

ಇನ್ನ ಒಳಗ ಹೋಗವಾ ತಂಗಿ.

ರಂಗ

ಸ್ವಲ್ಪ ನಿಂದರು. ಕಿಟ್ಯಾ, ನೀಯೇನು ಕೇಳೋದಿಲ್ಲೇನು ?

ಕಿಟ್ಟಿ

(ಗಂಭೀರನಾಗಿ)

ಏನೂ ಇಲ್ಲ.

ಕಾಶಿ

(ಸುಮ್ಮಿಯ ಕಡೆ ತಿರುಗಿ)

ಈ ಸುಟ್ಟು ರಂಗ್ಯಾಂಡೊಂದು ಯಾವಾಗಲೂ ಹೀಂಗsನವಾ. ಮತ್ತೇನು ಮಾಡಿಡತಾನೋ ಏನೋ ! ಮಹಾ ಕುತಂತ್ರಿ!

(ಗಂಗೂನಿಗೆ)

ಇರ್ಲಿ ಗಂಗೂ, ನೀ ಬಾ ಒಳಗ.

ಹಣಮು

ನಿಲ್ರಿ, ನಿಲ್ರಿ. ಉಡಿ ತುಂಬಿ ಕಳಸ್ರಿ.

(ಕಾಶಿ ಬಂದು ಉಡಿ ತುಂಬಿದ ಮೇಲೆ ಗಂಗು ಒಳಗೆ ಹೊರಟುಹೋಗುವಳು.)

ಕಾಶಿ

(ರಾಮು-ಭೀಮರನ್ನುದ್ದೇಶಿಸಿ)

ಹಂಗಾರ ಎಲ್ಲಾ ಗೊತ್ತಾದ್ಹಾಂಗಾತs? ಏನಪಾ ಕಿಟ್ಟೂ, ನೀ ಏನಂತೀದಿ? ಹುಡಿಗೆ ಮನಸ್ಸಿಗೆ ಬಂದಳs? ನಿನಗೇನು ಗೊತ್ತಾಗತದ. ವರದಕ್ಷಿಣಿ ಎಷ್ಟು ಕೊಡತಾರ ಕೇಳ್ರಿ.

ಭೀಮು

ಅಂದ್ಹಾಂಗ ಪುರೋಹಿತರ, ಅದನ್ನಿಷ್ಟು ಮಾತಾಡಿಬಿಡ್ರಿ. ಮನೆತನಕ್ಕ ತಕ್ಕಂಗ ಮರ್ಯಾದಿ ಆದರಾಯ್ತು.

(ರಾಮು, ಪುರೋಹಿತರು ಪರಸ್ಪರರ ಕಿವಿಯಲ್ಲಿ ಮಾತನಾಡಿಕೊಳ್ಳುವರು)

ಹಣಮು

ಹಂ, ರಾಯರs, ಒಂದs ಮಾತು. ಅದೇನು, ಕೊಟ್ಟದ್ದು ಯಾರ ಹತ್ತರೂ ಉಳಿಯೂದಿಲ್ಲ. ಎರಡು ಸಾವಿರ ರೂಪಾಯಿ ನಿಮ್ಮ ಕೈಯ್ಯಾಗ ಹಾಕಿಸಿ ಬಿಡತೇನಿ. ಎಲ್ಲಾ ಬಂತು. ಪಿಟ್ಟನಬಾರದು.

ಕಾಶಿ

ಎಲ್ಲಾ ಬಂತು ಅಂದ್ರ ಹ್ಯಾಂಗ? ಚೊಚ್ಚಿಲಮಗನ ಮದಿವಿ. ಮತ್ತ ನಮಗೇನು ಬ್ಯಾರೆ ಹುಡುಗರಿಲ್ಲಾ ಮತ್ತ ಮದಿವಿ ಕಾಣಲಿಕ್ಕೆ. ಎಲ್ಲಾ ಪಾಂಕ್ತಾಗಿ ಛಂದಾಗಿ ಆಗಬೇಕು. ಚೊಚ್ಚಿಲಮಗನ ತಾಯೀ ಸೇವಾ ಬಿಡಿಸಬೇಕು, ಚೌಕಲಾಣಿ ಹಾಕಬೇಕು, ಹಾಗಲಹಂದ್ರ ಹಾಕಬೇಕು, ಕಾರ್ಲಿಬಳಿ ಇಡಸಬೇಕು...

ರಾಮು

ಹಂಗs ಆಗಲಿ. ನಮಗೂ ಏನು ಬ್ಯಾರೆ ಮಕ್ಕಳೂ ಇಲ್ಲ.

ಸುಮ್ತಿ

ಇದು ಒಂದರಾಗs ನಮ್ಮ ಕಣ್ಣುಪ್ರೀತಿ ಎಲ್ಲಾ ತೀರಿಸಿಗೋಬೇಕು ನಾವೂ. ನೀವೇನು ಕಾಳಜಿಮಾಡಬ್ಯಾಡ್ರಿ ಕಾಶಿಬಾಯರ.

ರಾಮು

ಒಟ್ಟು ನಮ್ಮ ಹುಡುಗಿನ್ನ ತೊಗೊಂಡು ಮನೆತನ ಉದ್ಧಾರ ಮಾಡಬೇಕು ತೀರ್ತ್ಯ್ರ.

ಕಾಶಿ

ಪುರೋಹಿತರ, ಹುಂ, ಎಲ್ಲಾನು ಒಪ್ಪಿದ್ಹಾಂಗಾತು. ಇನ್ನ ನಿಶ್ಚಯದ ಶಾಸ್ತ್ರಾನೂ ಮುಗಿಸೇಬಿಡ್ರಿ ಈಗs.

ಹಣಮು

ಓಹೋ, ಅಗತ್ಯ ಆಗಲಿ. ಮನಸ್ಸಿನಾಗ ನಿಶ್ಚಯ ಆದಮ್ಯಾಲ ತೀರಿಹೋತು.

(ಗಡಿಬಿಡಿಯಿಂದ ಎದ್ದು ಅತ್ತಿತ್ತ ಓಡಾಡಿ, ಒಳಗೆ ಹೋಗಿ ಕಾಗದ ತಂದು, ರಂಗನ ತಲೆಯ ಮೇಲಿನ ಟೊಪ್ಪಿಗೆಯನ್ನು ತನ್ನ ತಲೆಯ ಮೇಲೆ ಅಡ್ಡಹಾಕಿಕೊಂಡು, ಶಾಲೆಯ ಹುಡುಗರು ಬರೆಯಲು ಕೂಡುವ ಭಂಗಿಯಲ್ಲಿ ಕುಳಿತು ಏನೇನೋ ಬರೆಯುವ ನಟನೆ ಮಾಡಿ, ಅನಂತರ ಆ ಕಾಗದವನ್ನಿಟ್ಟು ಅದಕ್ಕೆ ಅರಿಷಣ ಕುಂಕುಮ ಏರಿಸುವಂತೆ ಕೈಮಾಡಿ, ಬಾಯಲ್ಲಿಯೇ ಒಟಬಟ ಮಂತ್ರೋಚ್ಚಾರ ಮಾಡಿ ಒಂದೆರಡು ಕ್ಷಣದಲ್ಲಿ ಎಲ್ಲ ಮುಗಿಸುವನು.)

ಹುಂ, ಆತು ನೋಡ್ರಿ ಬಾಯರ.

(ಏಳುವನು)

(ಅನಂತರ ಎಲ್ಲರೂ ಎದ್ದುನಿಲ್ಲುವರು)

ಕಾಶಿ

ಹಂ, ಈಗ ನಿಶ್ಚಯ ಆದ್ಹಾಂಗಾಯಿತು. ಇನ್ನ ಲಗ್ನ. ಎಲ್ಲಾರೂ ತಯಾರಾಗ್ರಿ. ಹೋಗ್ರಿ ನೀವಿನ್ನ ನಿಮ್ಮ ಮನೀಗೆ.

[ರಾಮು, ರಂಗ, ಸುಮ್ಮಿ, ಹಣಮು ಆ ತುದಿಗಿರುವ ತಮ್ಮ ಮನೆಗೆ ಹೊರಟು ಹೋಗುವರು.]

ಏ ಭರಮು, ಕಲ್ಲ, ಒಂದಿಷ್ಟು ಇಲ್ಲೆಲ್ಲಾ ಶೃಂಗಾರಮಾಡಬೇಕು ಮದಿವಿಗೆ. ನೀವು ಹೋಗಿ ತಳಲು ತಂದು ಈ ಖಂಬದಿಂದ ಆ ಖಂಬದತನಕ ಕಟ್ಟರಿ. ಹಾಸಿಡರಿ. ನಾ ಒಳಗ ಹೋಗಿ ಅಕ್ಕೀಕಾಳಿಗೆ ತಯಾರುಮಾಡಿ ಕೋತೀನಿ.

(ಸುಮ್ಮಿಯ ಮನೆಯವರಿಗೆ)

ಹುಂ, ಹೊತ್ತಾತು, ಬ್ಯಾಗನ ಅಕ್ಕೀಕಾಳಿಗೆ ತಯಾರುಮಾಡ್ರಿ.

(ಒಳಗೆ ಹೋಗುವಳು)

[ಹೆಣ್ಣಿನ ಮನೆಯುವರೆಲ್ಲ ಬಂದು ತಮ್ಮ ತಮ್ಮ ತಯಾರಿ ಮಾಡಿಕೊಂಡು
ಕುಳಿತುಕೊಳ್ಳುವರು. ಗಂಗು ಮಾತ್ರ ಒಳಗೇ ಇರುವಳು. ಕಲ್ಲ, ಭರಮ ತಳಿರು
ಕಟ್ಟಿ ಶೃಂಗರಿಸುವರು. ಬಂದವರಿಗಾಗಿ ಹಾಸಿಡುವರು. ಕಾಶಿ ಹೊರಗೆ ಬಂದು
“ ಇನ್ನ ವರ ಕರೀಲಿಕ್ಕೆ ಬರ್ರಿ ” ಎಂದು ಹೇಳುವಳು. ರಾಮ, ಸುಮ್ಮಿ, ಕಾಶಿಯು
ಮನೆಗೆ ಪುರೋಹಿತರೊಡನೆ ಬರುವರು. ವರ ಕರೆದುಕೊಂಡು ಹೋಗಿ ಹಾಸಿದ
ಜಮಖಾನೆಯ ಮೇಲೆ ಕುಳ್ಳಿರಿಸುವರು. ನಡುವಿನ ವಿಧಾನಗಳನ್ನೆಲ್ಲ ಬಿಟ್ಟು ಒಮ್ಮೆಲೆ
ಅಕ್ಷತೆ ಹಾಕುವ ಗಡಿಬಿಡಿಯೇ ಪ್ರಾರಂಭವಾಗುವುದು. ಕಾಶಿ ಎರಡೂ ಕಡೆಯುವರಿಗೂ
“ ಅದನ್ನ ತಗೊಂಡು ಬರ್ರಿ ”..., “ ಬಾಜಾ ಮಾಡ್ಲಿಕ್ಕೆ ಹೇಳ್ರಿ ” ... “ ಕಳಸಗಿತ್ತಿನ್ನ
ಕರೀರಿ ”... “ ಪುರೋಹಿತರ, ಹುಂ, ಸುರುವು ಮಾಡ್ರಿ ಮಂತ್ರ ”... “ ಬರ್ರೀ ಲಗೂ
ಲಗೂ ” “ ಏ ತಾರಿ, ಇತ್ತತ್ತ ಸರದು ಕೂಡು ”....ಎಂದು ಒಂದೇ ಸವನೆ ಕಂಡಕಂಡವ
ರಿಗೆ ಕೆಲಸ ಹೇಳುತ್ತ, ಕೆಲಸ ಇರಲಿ ಬಿಡಲಿ, ಆ ತುದಿಯಿಂದ ಈ ತುದಿಗೆ, ಈ ತುದಿ
ಯಿಂದ ಆ ತುದಿಗೆ ಓಡಾಡಹತ್ತುವಳು. ಪುರೋಹಿತರು ತಮ್ಮ ಕಚ್ಚೆಯ ಪರಿವೆಯಿಲ್ಲದೆ
ಸುಮ್ಮನೆ ಗಡಿಬಿಡಿಮಾಡುತ್ತ ಕಂಡವರಿಗೆ ಹಾಯುತ್ತ ಓಡಾಡುವರು. ಇಡಿ ಈ ಮದಿ
ವೆಯ ಸಮಾರಂಭ ಅಲ್ಲಿ ದೊರೆಯುವ ಸಾಮುಗ್ರಿಗಳಲ್ಲಿಯೇ ನಡೆಯಬೇಕು. ಅಷ್ಟು
ಇಷ್ಟು ತಂದ ಸಾಮಾನುಗಳೂ ಸಹಕಾರಿಯಾಗಿದ್ದವು. ಕಾಶಿಯ ಮನೆಯಿಂದ ವರ
ನನ್ನು ಕರೆತರುವ ಮೆರವಣಿಗೆ ನೋಡುವಂತಹದಿತ್ತು. ದಂಟಿನ ಬಜಂತ್ರಿಯ ಮೇಳ
ಸುಶ್ರಾವ್ಯವಾಗಿತ್ತು. ಅಲಂಕಾರಗಳೂ ಅಲ್ಲಿ ಸಿಗುವ ಪದಾರ್ಥಗಳಿಂದಲೇ ತಯಾರಿಸಿ
ದುವು; ವಾಲಗ ವಾದ್ಯಗಳೂ ಅಲ್ಲಿಯೇ ಹುಟ್ಟಿದವುಗಳು. ಬೆಂಡಿನ ವಸ್ತುಗಳೇ ಅಲಂ
ಕಾರಗಳಾಗಿ, ಆಟಿಗೆಯ ಸಾಮಾನುಗಳಲ್ಲಿಯೇ ಮದಿವೆಯ ಅಡಿಗೆಯಾಗಿ, ಹಂಚಿಬಿಲ್ಲಿ
ಗಳೇ ವರದಕ್ಷಿಣೆಯ ರೂಪಾಯಿಗಳಾಗಿ, ಯಾವುದೋ ಗಿಡದ ಎಲೆ, ಎಲ್ಲಿಯದೊ
ಹರಳಿನೊಡನೆ ತಾಂಬೂಲವಾಗಿ, ಮೂರು ದಿನ ನಡೆಯುವ ಹಿರಿಯರ ಮದುವೆಯ
ಸಮಾರಂಭ ಮೂರು ನಿಮಿಷಗಳಲ್ಲಿ ಮುಗಿದುಹೋಗುವದು. ಮಂತ್ರಗಳಿಲ್ಲದೆ ವಿಧಾನ
ಗಳಿಲ್ಲವೂ ಆದವು. ಪುರೋಹಿತರ ಬಾಯಿಬಡಿಯುವುದೇ ಮಂತ್ರವಾಯಿತು. ಪುರೋ-
ಹಿತ ಮದಿವೆಯಲ್ಲಿ ಮಾಡುವ ಕೆಲಸ ಎಂದರೆ ಗಡಿಬಿಡಿ ಎಂಬುದಿಷ್ಟೇ ಗೊತ್ತು ಅವನಿಗೆ.
ಅಷ್ಟೇ ಮಾಡಿದ. ಅಕ್ಕೀಕಾಳು ಬೀಳುವ ಹೊತ್ತಿಗೆ ಸಿಂಗರಿಸಿದ ವಧುವನ್ನು ಕರೆತಂದು
ವರನ ಎದುರಿಗೆ ನಿಲ್ಲಿಸಿದರು. ಇಬ್ಬರ ನಡುವೆ ಅಂತಃಪಟ (ಒಂದು ಅರಿವೆ) ಹಿಡಿದು
ಮಂಗಳಾಷ್ಟಕದಂತೆ ಧ್ವನಿ ತೆಗೆದು ಅಕ್ಕೀಕಾಳು ಹಾಕಿದರು. ಎಲ್ಲರೂ ಚಪ್ಪಾಳೆ
ಬಾರಿಸಿದರು. ಬಾಯಿಂದಲೇ ವಾಲಗ ವಾದ್ಯಗಳಾದವು. ತಾಂಬೂಲ ಹಂಚಿವ್ಯಾ

ಯಿತು. ಗುಲಾಬದಾನಿ (ನೀರು) ಸಿಂಪಡಿಸಿದ್ದಾಯಿತು. ಸುಮ್ಮಿ, ಕಾಶಿ ಹೆಣ್ಣು ಮಕ್ಕಳಿಗೆ ಅರಿಷಣ-ಕುಂಕುಮ ಕೊಟ್ಟರು.

ಕಿಟ್ಟಿ ಇನ್ನೂ ಗಂಗೂನ ಎದುರಿಗೆ ಅವಳ ಕೈಹಿಡಿದುಕೊಂಡು ನಿಂತಿದ್ದಾನೆ. ಗಂಗು ಗಾಬರಿಯಾಗಿ ಮುಖ ಕೆಳಗೆ ಹಾಕಿ ನಿಂತಿದ್ದಾಳೆ. ಇಬ್ಬರ ಕೊರಳಲ್ಲಿಯೂ ಮಾಲೆಗಳಿವೆ.]

ಕಾಶಿ

(ಎಲ್ಲರಿಗೂ ಕೂಡಲಿಕ್ಕೆ ಹೇಳಿ, ವಧೂವರರ ಹತ್ತಿರ ಬಂದು)

ಬರ್ರೀ ಎಲ್ಲಾರೂ ಊಟ್ನ ಅಷ್ಟು ಮಾಡಿಸೋಣು. ಕೂತುಗೊಳ್ರಪ್ಪಾ ಇಬ್ಬರೂ.

(ಇಬ್ಬರೂ ಕುಳಿತುಕೊಳ್ಳುವರು)

ಹುಂ, ಏಳವಾ ಗಂಗು, ಒಗಟಾ ಹಾಕು.

(ಹೆಣ್ಣುಮಕ್ಕಳೆಲ್ಲ ಒಂದು ಕಡೆಗೆ, ಗಂಡಸರೆಲ್ಲಾ ಇನ್ನೊಂದು ಕಡೆಗೆ ಬಂದು ಕುಳಿತುಕೊಳ್ಳುವರು.)

ಹಾಡ್ರೇ ಯಾರಾರೆ. ಏ ದಮ್ಮಿ, ತಾರಿ ನೀವಿಬ್ಬರೂ ಹಾಡ್ರಿ, ಹಸಿಗೆ ಕರೆಯೋ ಹಾಡು.

ದಮ್ಮಿ-ತಾರಿ

(ಹಾಡುವರು)

ಹಸೆಗೇಳ್ಳೈ ಶ್ರೀನಿವಾಸಮೂರುತಿ। ಬಿಸಜಾಸನೆ ಸಹಿತ।

ಕಾಶಿ

ಸಾಕು, ಹುಂ ಗಂಗು, ಭಡಾ ಭಡಾ ಒಗಟಾ ಹಾಕು; ಹೊತ್ತಾಗತದ.

ಸುಮ್ಮಿ

ಹುಡಿಗಿ ದಣದದ ಬಿಡ್ರೇ. ಯಾಕ ಸುಮ್ಮನs ತ್ರಾಸು ಕೊಡತೀರಿ?

ಕಾಶಿ

ಗಂಗೂ, ಹಂಗಾರ ಒಂದು ಒಗಟ ಹಾಕಿ ಕುಂಕುಮಾ ಹಚ್ಚಿಬಿಡಸಾ.

ಗಂಗು

ರಾಮು ವನವಾಸಕ್ಕ ಹೋದದ್ದು ತಂದೆಯ ಮಾತು ನಡೆಸುವದಕ್ಕಾಗಿ,
ಕೃಷ್ಣರಾಯರಿಗೆ ಕುಂಕುಮ ಹಚ್ಚುವೆನು ನನ್ನ ಪುಣ್ಯಕ್ಕಾಗಿ.

(ಕುಂಕುಮ ಹಚ್ಚಿ ಕುಳಿತುಕೊಳ್ಳುವಳು)

ಕಾಶಿ

ಹುಂ, ಇನ್ನ ನೀ ಹೆಸರು ಹೇಳಪಾ. ಎಲ್ಲಾರಿಗೂ ಕೇಳಸೋ ಹಾಂಗ ಗಟ್ಟ್ಯಾಗಿ ಹೇಳು. ಒಗಟಾ ಹಾಕತಿಯೇನು ?

ಕಿಟ್ಟಿ

(ಇಲ್ಲ ಎಂದು ಗೋಣು ಹಾಕಿ)

ಗಂಗು.

ಕಾಶಿ

ಆರತಿ ಮಾಡ್ರೆವ್ವಾ ಇನ್ನ ಜ್ಯಾಗನ.

[ತಾರಿ, ದವ್ಮಿ ಇಬ್ಬರೂ ಎದ್ದು ಬಂದು ಆರತಿಯ ತಾಟು ಇಲ್ಲದೆ ಒಬ್ಬರ ಕೈ ಒಬ್ಬರು ಹಿಡಿದು, ಒಂದು ಹಾಡು ಹೇಳುತ್ತ ಆರತಿ ಮಾಡುವಂತೆ ಬರಿ ಕೈಗಳಿಂದ ತಿರುಹಿ, ಅಕ್ಷತೆ ಒಗೆದಂತೆ ಕೈಮಾಡಿ, ತಮ್ಮ ಜಾಗಕ್ಕೆ ಬಂದು ಕುಳಿತುಕೊಳ್ಳುವರು.]

ಪುರೋಹಿತರ, ಕೂಸು ಒಪ್ಪಸೋ ಕೆಲಸಾಅಷ್ಟು ಮುಗಿಸೇಬಿಡ್ರಿ ಇನ್ನ. ಏ ತಾರಿ, ದವ್ಮಿ ಆ ಕೂಸು ಒಪ್ಪಸೋ ಹಾಡು ಹೇಳ್ರಿ.

ದವ್ಮಿ-ತಾರಿ

(ಹಾಡುವರು)

ಕೂಸು ನಿಮ್ಮದು ನಿಮಗೆ ನೀಡುವೆವು। ಪ್ರೀತಿಯಿಂದಲಿ।
ಸಲಹಿರೆಂದು ನಿಮ್ಮ ಬೇಡುವೆವು
ತಂದೆತಾಯ್ಗಳು ಬಂಧುಬಳಗ
ತೊರೆದು ಬಂದಳು ನಿಮ್ಮ ಬಳಿಗೆ
ಪ್ರೀತಿದೋರುವದು ॥

[ಹಾಡು ನಡೆದಿರುವಾಗಲೇ ಪುರೋಹಿತರು ತೊಟ್ಟಿಲ, ಗೊಂಬಿ ತಂದಿಟ್ಟು, ಗಂಗೂನನ್ನು ಕಾಶಿಯ ಎದುರಿಗೆ, ಆಮೇಲೆ ಭೀಮುನ ಎದುರಿಗೆ, ಅಲ್ಲಿಂದ ಕಿಟ್ಟಿಯ

ಎದುರಿಗೆ ಕೂಡಿಸಿ ಕೂಸೊಪ್ಪಿಸುವ ಕಾರ್ಯವನ್ನು ಮುಗಿಸುವರು. ವಾತಾವರಣವು ಸಾವಕಾಶವಾಗಿ ಗಂಭೀರವಾಗುತ್ತ, ಕರುಣಕ್ಕೆ ತಿರುಗುತ್ತದೆ. ಹೆಣ್ಣು ಹುಡುಗರು ದುಃಖ ಭಾರದಿಂದ ಬಿಕ್ಕುವರು.]

ಕಾಶಿ

ಹಾಡು ಮುಗಿದನಂತರ)

ಇನ್ನ ಮದಿವಿ ಮುಗೀತು. ಎಲ್ಲಾರಿಗೂ ಇನ್ನ ಕಳಹೂಟ. ಹುಂ, ಏಳ್ರಿ, ತಯಾರಾಗಿ ಬರ್ರಿ; ಹೋಗ್ರಿ.

(ಎಲ್ಲರೂ ಅತ್ತ ಇತ್ತ ಮರೆಗೆ ಹೋಗುವರು. ಕಾಶಿಯೂ ಫಲಾಹಾರ ತರಲು ಒಳಗೆ ಹೋಗುವಳು.)

— ತೆರೆ —

ಅಂಕ : ೨ **ದೃಶ್ಯ : ೨**

ಮತ್ತೆ ದಾರಿಯಲ್ಲಿ

[ಆ ಮುಸೆಯಿರುವ ರಸ್ತೆಯ ಗುಂಟ, ಒಂದು ಕೈಯಲ್ಲಿ ಕಂದೀಲನ್ನು, ಇನ್ನೊಂದರಲ್ಲಿ ತೆರೆದ ಛತ್ರಿಯನ್ನು ಹಿಡಿದುಕೊಂಡ ಸಾರುವಯ್ಯನವರು, ನಿರ್ಜನವಾದ ಆ ಪ್ರದೇಶದಲ್ಲಿ ತಮಗೆ ಬರುವ ತಮ್ಮ ಭೀತಿಯನ್ನು ನಿವಾರಿಸಿಕೊಳ್ಳುವುದಕ್ಕಾಗಿ ತಮ್ಮ ದನಿಯನ್ನು ತಮಗೇ ಜೋಡುಮಾಡಿಕೊಳ್ಳುವದಕ್ಕಾಗಿ, ಗಟ್ಟಿಯಾಗಿ ಕಾಲಜ್ಞಾನದ ಒಂದು ವಚನವನ್ನು ಹೇಳುತ್ತ ಹೊರಟದ್ದಾರೆ.]

ಕೇಳಿರಪ್ಪಾ ಭಕ್ತಾದಿಗಳಿರಾ ।
ಮುಂದಾಗೋದು ಇಂದು ಕಂಡಿತ್ತು ಕೇಳಿರಣ್ಣಾ ।
ತೆರೆದದ್ದು ಮೆರೆದದ್ದು, ನೋಡಿದ್ದು ಮಾಡಿದ್ದು ಕೇಳಿರಣ್ಣಾ ।
ಹುಟ್ಟಿದ್ದು ಬೆಳೆದದ್ದು ಸತ್ತಿದ್ದು ಸೆಳೆದದ್ದು
ಬಯಲು ಬೆಸಲಾಗಿತ್ತು ಕೇಳಿರಣ್ಣಾ ।

ಬಯಲು ಉಸಿರಾಗಿತ್ತು ಕೇಳಿರಣ್ಣಾ ।
ಬಯಲು ಬಯಲಾಗಿತ್ತು ಕೇಳಿರಣ್ಣಾ ।
ಕಣ್ಣಿದ್ದವನು ಕಂಡಾನ ಕೇಳಿರಣ್ಣಾ ।
ತೂಗುತೊಟ್ಟಿಲವಾಗಿ ಬೆಳ್ಳಿಬಟ್ಟಲವಾಗಿ
ಶಿವನ ಕೃಪೆಯಾಗಿತ್ತು ಕೇಳಿರಣ್ಣಾ ।

(ಈ ಹಾಡು ಹೇಳುತ್ತ ಸಾವಕಾಶವಾಗಿ ಈ ದಿಕ್ಕಿನಿಂದ ಆ ದಿಕ್ಕಿಗೆ ಹೊರಟು ಹೋಗುವನು.)

ಅಂಕ : ೨ **ದೃಶ್ಯ : ೩**

ಮದುವೆಯಾದ ಮೇಲೆ

[ದಾರಿ ಸರಿಯುವದು. ಮತ್ತೆ ಆ ಮನೆಯ ಒಳಂಗಳದ ನೋಟ ಕಾಣಿಸುವುದು. ಮದುವೆಯ ಸಮಾರಂಭ ಮುಗಿದು ಅದರ ನೆನಪು ಮಾತ್ರ ಇದೆ. ಆ ಮನೆ ಈ ಮನೆಗಳು ಇನ್ನೂ ಇದ್ದರೂ ಸಾಡೇದ ಮನೆಗಳಂತೆ ನೀರವ ನಿಸ್ಸತ್ವವಾಗಿವೆ. ಕಿಟ್ಟು, ಗಂಗು ಇಬ್ಬರನ್ನು ಬಿಟ್ಟು ಉಳಿದವರಾರೂ ರಂಗದ ಮೇಲೆ ಇರುವುದಿಲ್ಲ. ಇಬ್ಬರೂ ದೂರದೂರವಾಗಿ ನಿಂತಿದ್ದಾರೆ. ಇನ್ನೂ ಮದುವೆಯ ವೇಷದಲ್ಲಿಯೇ ಇದ್ದಾರೆ. ಕಿಟ್ಟು ಕೈ ತೊಳೆಯದೆ ಅದನ್ನು ಎತ್ತಿಕೊಂಡು ಹಿಡಿದಿದ್ದಾನೆ. ತಾನಿನ್ನೂ ಗಂಗೂನ ಗಂಡ ಎಂಬ ತಿಳಿವಳಿಕೆಯಲ್ಲಿಯೇ ಇದ್ದಾನೆ. ಗಂಗೂನಿಗೆ ಮೊದಲಿಸಿಂದಲೂ ಈ ಭಾವನೆಯಿರಲಿಲ್ಲ. ತಾನು ಗಂಗೂ ಎಂದು ತಿಳಿದುಕೊಂಡೇ ನಡೆಯುತ್ತಿದ್ದಾಳೆ. ಉಳಿದವರೆಲ್ಲ ವೇಷ ಬದಲಾಯಿಸಿದ್ದರೂ, ಇನ್ನೂ ಹಿರಿಯರ ಆವೇಶದಲ್ಲಿ ಅರ್ಧ, ಹುಡುಗತನದಲ್ಲಿ ಅರ್ಧ ಮಾತನಾಡಿ ಗಂಗೂ ಕಿಟ್ಟುಯರ ದಾಂಪತ್ಯ ಜೀವನಕ್ಕೆ ವ್ಯಂಗ್ಯ, ಅಣಕದ ಕನ್ನಡಿ ಹಿಡಿಯುತ್ತಾರೆ. ರಸ ವಿರಸದ ಕಡೆ ಮುಖ ಹೊರಳಿಸಿದೆ.]

ಕಿಟ್ಟಿ

(ಗಂಡನೆಂಬ ದರ್ಪದಿಂದ)

ಗಂಗೂ !

ಗಂಗು

(ಸುಮ್ಮನೆ ಮುಖ ಕೆಳಗೆ ಮಾಡಿ ನಿಂತಿರುವಳು)

ಕಿಟ್ಟಿ

(ಇನ್ನೂ ಗಟ್ಟಿಯಾಗಿ)

ಏ ಗಂಗೂ, ಬಾ ಇಲ್ಲೆ.

ಗಂಗು

(ಇನ್ನೂ ಸುಮ್ಮನಿರುವಳು)

ಕಿಟ್ಟಿ

ಯಾಕ, ಸುಮ್ಮನs ನಿಂತೆಲ್ಲ ? ನಾ ಅಂದದ್ದು ಕೇಳಸಲಿಲ್ಲೇನು ನಿನಗs?

ಗಂಗು

(ಮತ್ತೂ ಸುಮ್ಮನಿರುವಳು)

ಕಿಟ್ಟಿ

ಗಂಗೂ, ನಾ ನಿನಗ ಹೇಳಿದ್ದೂ ಅಂದೆ. ಬಾ ಇಲ್ಲೆ.

ಗಂಗು

ನಾ ಬರೂದಿಲ್ಲಾ.

ಕಿಟ್ಟಿ

ಯಾಕs, ಬಡತ ಬೇಕಾಗೇವೇನು ? ಹೇಳಿದ ಮಾತು ಕೇಳತಿಯೋ ಏನಂತೀ ?

ಗಂಗು

(ಮನಸ್ಸಿಲ್ಲದೆ)

ಏನು ಬೇಕಾಗಿತ್ತು ?

ಕಿಟ್ಟಿ

ಊಟಾ ಮಾಡಿ ಮುಸರಿಕೈಲೆ ನಿಂತೀನಿ, ಕಾಣಸವಲ್ಲದೇನು? ಒಂದಿಷ್ಟು ಕೈಮ್ಯಾಲೆ ನೀರು ಹಾಕಿ, ಎಲಡಿಕಿ ತಂದುಕೊಡು.

ಗಂಗು

ನಾ ಕೊಡೂದಿಲ್ಲ.

ಕಿಟ್ಟಿ

ಯಾಕ?

ಗಂಗು

ನಾ ನಿನ್ನ ಹೇಣ್ತಿ ಅಲ್ಲ.

ಕಿಟ್ಟಿ

(ನಕ್ಕು)

ಮತ್ತೇನು? ಇದೇ ಈಗ ಲಗ್ನ ಆಗೇದ ಗೊತ್ತದsನೋ ಇಲ್ಲೋ? ಹೀಂಗೆಲ್ಲ ಮಾಡಿದರ ಹ್ಯಾಂಗ?

ಗಂಗು

ನಾ ನಿನ್ನ ಹೇಣ್ತಿ ಅಲ್ಲಾs ಅಂದೆ.

ಕಾಶಿ

(ಇವರ ಮಾತನ್ನು ಮರೆಯಲ್ಲಿದ್ದರೂ ಲಕ್ಷ್ಯವಿಟ್ಟು ಕೇಳಿ, ಇದೇ ಹೊತ್ತಿಗೆ ಹೊರಗೆ ಬಂದು, ಗಂಗೂನ ಹತ್ತಿರ ಹೋಗಿ ಹಿರಿಯರ ಆವಿರ್ಭಾವದಿಂದ)

ಹಾಂಗನಬಾರದವಾ, ಹೋಗು. ಗಂಡಗ ಹಾಂಗ ಎದುರುತ್ತರ ಕೊಡಬಾರದು. ನಮ್ಮನ್ಯಾಗ ಇಂಥಾದೆಲ್ಲ ನಡಿಯೂದಿಲ್ಲವಾ. ಹೇಳಿದ್ಹಂಗ ಕೇಳಬೇಕು, ಹೇಳಿದಷ್ಟು ಕೇಳಬೇಕು.

ಗಂಗು

(ಅಳುತ್ತಾಳೆ)

ಕಿಟ್ಟಿ

(ಮನಸ್ಸು ಕರಗಿ)

ಹೋಗಲಿ ಬಿಡವಾ. ಹೊಸದಾಗಿ ಬಂದಾಳ; ಆಕಿಗಿನ್ನೂ ಗೊತ್ತಿಲ್ಲ.

ಕಾಶಿ

ಏನು ಹೇಣ್ತೇಮ್ಯಾಲಿನ ಮೋಹ ಇದ್ದೀತಪಾ! ಮೊದಲ ಬಂದ ಕಿವಿಗಿಂತಾ ಆಮ್ಯಾಲ ಬಂದ ಕೋಡs ಹೆಚ್ಚಾದವಂತ. ಆಗಲಿ, ನಡೀಲೆಪಾ ನಡೀಲಿ. ನಿನ್ನ ಸಲುವಾಗಿ ಕಷ್ಟಪಟ್ಟು ಇಷ್ಟಿದ್ದಾವನ್ನ ಇಷ್ಟು ಮಾಡಿ ಲಗ್ನಾ ಮಾಡಿದೆ. ಅದರ ಉಪಕಾರಾ ತೀರಸ್ತೀಯೇನು?

ಕಿಟ್ಟಿ

ಆಕೀ ಮಾತೇನು ಕೇಳತಿ ಬಾ ಗಂಗು. ನಾವು ಇನ್ನೊಂದು ಕಡೆ ಹೋಗೋಣು.

ಗಂಗು

ನಾ ಬರೂದಿಲ್ಲ. ನಾ ಇಲ್ಲೇ ಇರತೇನಿ.

ಕಾಶಿ

ಆಕಿ ನನ್ನ ಸೊಸಿ ಇದ್ದಾಳ ಗೊತ್ತದೊ ಇಲ್ಲೋ? ಹೋಗಬ್ಯಾಡ ಗಂಗೂ, ಇಲ್ಲೇ ಕೂಡು.

ಕಿಟ್ಟಿ

ಹಂಗಾರ ನಾ ಒಬ್ಬನs ಹೋಗತೇನಿ.

(ಸಿಟ್ಟಿನಿಂದ ಹೋಗಿ ತುಳಸಿಕಟ್ಟೆಯ ಮೇಲೆ ಮುಖ ತಿರಿವಿಕೊಂಡು ಕೂಡುತ್ತಾನೆ.)

ದಮ್ಮಿ

(ಹೊರಗಿನಿಂದ ಬಂದು)

ಯಾಕ್ರೆವಾ, ನಿಮ್ಮ ಸೊಸಿಮುದ್ದು ಹ್ಯಾಂಗಿದ್ದಾಳ? ಅಂತೂ ಭಾಳ ಲಗೂ ಸೊಸಿನ್ನ ಕಂಡ್ರೆವಾ. ಇನ್ನೇನು ನಿಮ್ಮನ್ನ ಹಿಡಿಯವರ್ಯಾರಿದ್ದಾರ? ಹುಡಿಗೀನೂ ನಕ್ಷತ್ರ ಆಗ್ಯಾಳ. ಪುಣ್ಯ ಮಾಡೀರೆವಾ ನೀವು; ಪುಣ್ಯಾಮಾಡಿ ಬಂದೀರಿ! ಎಲ್ಲಾರಿಗೂ ಹೀಂಗ ಸೌಭಾಗ್ಯ ಬಾ ಅಂದರ ಬಂದೀತs?

ಕಾಶಿ

ಏನು ಕೇಳತೀರಿ ಬಕ್ರೆವಾ ಆ ಸೌಭಾಗ್ಯ. ಮಗನ ಲಗ್ನಾಮಾಡಿ, ನನಗs ಮೂಲಾ ತಂದುಕೊಂಡ್ಹಾಂಗ ಆಗೇದ. ಅದೇನೋ ಹೇಳತಾರಲ್ಲ...

ದಮ್ಮಿ

ಅವ್ವಾಕ್ರೇ, ನಿಮ್ಮ ಸೊಸಿಗೇನಾಗೇದ? ನಾ ಇಷ್ಟೊತ್ತಾತು ನೋಡತೇನಿ ಮಾತು ಸಹಿತ ಆಡಿಲ್ಲ.

ಕಾಶಿ

ಮಾತು ಆಡೋದೇ ಇಲ್ಲ ಆಕಿ. ಗುಮ್ಮನಗುಸಿಗಿ. ಗಂಡನ್ನ ತನ್ನ ಕಡೆ ಮಾಡಿಕೊಂಡು ನನ್ನ ಹೀಂಗ ಉರಸತಾಳ. ನಮ್ಮನ್ನ್ಯಾರು ಕೇಳಬೇಕು ಈಗ?

ದಮ್ಮಿ

(ಗಂಗೂನಿಗೆ)

ಹೀಂಗ್ಯಾಕ ಮಾಡತೀಯೇ ಗಂಗು?

ಗಂಗು

ನಾ ಏನು ಮಾಡೀನಿ?

ದಮ್ಮಿ

ಮತ್ತ ನಿಮ್ಮತ್ತೆವರೇನು ಸುಳ್ಳು ಹೇಳತಾರೇನು? ಅತ್ತಿಮಾವಾ ಅಂದರ ಭಯ-ಭಕ್ತಿ ಇರಬೇಕವಾ. ನಾವೆಲ್ಲ ನಮ್ಮ ಕಾಲಕ್ಕ ಎಷ್ಟು ಹೆದರಿ ನಡೀತಿದ್ವಿವಿ ಗೊತ್ತದಯೇನು? ಹರದಾರುದ್ದ ಹಳ್ಳದಿಂದ ನೀರು ತಂದು ಸತ್ತುಹೋದಿವಿ. ಆದರೂ ಪಿಟ್ ಅಂತ ಮಾತಾಡ್ತಿದ್ವಿಲ್ಲ.

ಕಾಶಿ

ನೀವರೆ ಹೇಳ್ರಿವಾ ಅಷ್ಟು. ನಾವೂ ಒಂದ ಕಾಲಕ್ಕ ಅತ್ತಿಮನಿ ಮಾಡಲಿಲ್ಲs? ಈಗಿನ ಕಾಲದ ಹುಡ್ರs ಹೀಂಗ ನಮ್ಮವ್ವಾ!

ದಮ್ಮಿ

ಕಾಶಿಬಾಯರ, ನೀವು ಹಿಂಗ್ಯಾಕ ಮಾಡಬಾರದು? ಅನಕಾತ ನೀವು ಈಕಿನ್ನ ತವರುಮನಿಗೆ ಯಾಕ ಕಳಿಸಬಾರದು?

ಕಾಶಿ

(ತಾತ್ಸಾರದಿಂದ)

ಅವೇನು ಕರಕೊಂಡು ಹೋದಾವs ನಮ್ಮವ್ವಾ! ಲಗ್ನ ಆದಮ್ಯಾಲೆ

ಮಗಳು ಇದ್ದಾಳೊ ಸತ್ತಾಳೋ ಅಂತ ಹಣಿಕಿಹಾಕಿ ನೋಡಿಲ್ಲ, ಇದ್ದೂ ಇಲ್ಲದ್ಹಾಂಗಿದ್ದು !

ದಮ್ಮಿ

ಏನರೆ ಆಗಲಿ, ನೀವs ಹೋಗಿ ಕಳಿಸಿಬರ್ರಿ. ಹೊಸಹೊಸವಾಗಿ ಅತ್ತಿ ಮನಿ ಅಂದರ ತ್ರಾಸ ಆಗತದ ಪಾಪ!... ಬರ್ತೇನ್ರವಾ, ಕೆಲಸಕ್ಕ ಹೊತ್ತಾಗತದ...

(ಹೊರಡಲುದ್ಯುಕ್ತಳಾಗುವಳು)

ಕಾಶಿ

ಅಯ್ಯs, ನಿಂದರ್ರೀ, ಕುಂಕುಮಾ ಹಚ್ಚತೇನಿ.

(ಒಳಗೆ ಹೋಗಿ ಕುಂಕುಮ ತಂದಂತೆ ಮಾಡಿ, ಅವಳ ಹಣೆಗೆ ಕುಂಕುಮ ಹಚ್ಚಿದಂತೆ ಮಾಡಿ ಒಳಗೆ ಹೋಗುವಳು.)

ದಮ್ಮಿ

ಬರ್ತೇನ್ರವಾ...

(ಒಂದು ಕಡೆಗೆ ಹೋಗುವಳು)

ಗಂಗು

(ಸಿಟ್ಟಿಗೆದ್ದು ಭರಿಂಗನೆ ಇನ್ನೊಂದು ಮೂಲೆಗೆ ಯಾರೂ ಇಲ್ಲವೆಂದು ಹೋಗಿ ಕೂಡುವಳು. ಕೆಲಕ್ಷಣಗಳ ನಂತರ ಸುಮ್ಮಿ ಅಲ್ಲಿಯೇ ಒಳಗಿನಿಂದ ಹೊರಗೆ ಬಂದು ಗಂಗೂನನ್ನು ನೋಡುವಳು. ಅವಳ ಹತ್ತಿರ ಕುಳಿತುಕೊಳ್ಳುವಳು.)

ಸುಮ್ಮಿ

(ಗಂಗೂನ ಬೆನ್ನಮೇಲೆ ಕೈಯಾಡಿಸುತ್ತ)

ಈಗ್ಯಾಕ ಬಂದೇ ಗಂಗೂ, ತವರಮನಿಗೆ? ಇನ್ನೊಂದು ಸ್ವಲ್ಪದಿವಸ ಬಿಟ್ಟಿದ್ದರ ನಾವs ಬರತಿದ್ದೆವಲ್ಲ ಕರೀಲಿಕ್ಕೆ?

ಗಂಗು

(ಸುಮ್ಮನೆ ಮುಖ ಕೆಳಗೆ ಹಾಕುವಳು)

ಸುಮ್ಮಿ

ಯಾಕs, ಸುಮ್ಮನs ಕೂತೀದಲ್ಲ! ಮಾತಾಡಲ್ಲ. ಮತ್ತ ಬಡದಾಡಿ ಬಂದೀಯೇನು?

ಗಂಗು

(ಇನ್ನೊಂದು ದಿಕ್ಕಿಗೆ ಮುಖ ತಿರಿವಿಕೊಂಡು ಬಿಮ್ಮನೆ ಬಿಕ್ಕೊಂಡು ಕೂಡುವಳು.)

ಸುಮ್ಮಿ

ಯಾಕ ಸುಮ್ಮನಿದ್ದೀದೇ ? ಮಾತಾಡಲ್ಲ ?

(ಮುಖ ತನ್ನಕಡೆ ಹೊರಳಿಸಿಕೊಳ್ಳುವಳು)

ಗಂಗು

(ಬಿಕ್ಕುವಳು)

ಸುಮ್ಮಿ

(ತಲೆಯನ್ನು ನೇವರಿಸುತ್ತ)

ಅಯ್ಯs ಖೋಡಿ ! ಅಳಲಿಕ್ಕೇನಾತs ? ಹಾಂಗೆಲ್ಲ ಕಣ್ಣೀರು ಹಾಕಬಾರದವಾ. ಕೊಟ್ಟವರ ಮನಿಗೆ ನೆಟ್ಟಗಲ್ಲ ಅದು. ನಿನಗ ಏನಾದರೂ ನಾ ಇದ್ದೀನಿ. ಹೇಳು, ಏನಾತು ಹೇಳು ?

ಗಂಗು

(ಎರಡೂ ಕೈಯಿಂದ ಮುಖ ಮುಚ್ಚಿಕೊಳ್ಳುವಳು)

ಸುಮ್ಮಿ

ಹಾಂಗ ಹಟಾ ಹಿಡೀಬಾರದು ಗಂಗೂ. ತಾಯಿ ಕೇಳಿದರ ಎಲ್ಲಾ ಹೇಳಬೇಕವಾ.

ಗಂಗು

(ಮುಖ ತಡೆಯಲಾರದೆ ಸುಮ್ಮಿಯ ಮೈಗೇ ಒರಗುವಳು)

ಸುಮ್ಮಿ

(ಬೆನ್ನು ಸವರುತ್ತ)

ಹೋತುಬಿಡು. ಅಳಲಿಕ್ಕೇನಾಗೇದ? ಏನ್ ಆಗಿದ್ದರೂ ಅವರು ಹೋಗಿ ಸರಿಮಾಡಿ ಬರತಾರ. ಅಳಬ್ಯಾಡ, ಸಂಜೀಹೊತ್ತು; ಹಾಂಗ ಕಣ್ಣೀರು ಹಾಕಬಾರದವಾ... ಹಾಕಬಾರದು. ನೆಟ್ಟಗಲ್ಲದೂ...

ರಾಮು

(ಹೊರಗಿನಿಂದ ಬಂದವನಂತೆ)

ಯಾರು ?... ಗಂಗೂ ಏನು ?... ಓಹೋ, ಹೌದಲ್ಲ!... ಯಾವಾಗ ಬಂದಾಳ ?... ಮತ್ತೇನು ಅಂತಽದ ಅತ್ತೀಮನಿ ?... ನಿಮ್ಮ ಮನಿಯವರು ಆರಾಮ ಇದ್ದಾರಽ ?...

ಸುಮ್ಮಿ

ತಂದಽ ತನಗ ರಗಡಾಗಿ ಬಂದದ ಕೂಸು... ನೀವರೆ ಲಗ್ನ ಆದಮ್ಯಾಲೆ ಆಕೀ ಮನಿಗೆ ಹೋಗಿ, ಕೇಳಿ, ನೋಡಿ, ಮಾಡಿ ಬಂದಿದ್ದರ ಆ ಮಾತು ಬ್ಯಾರೆ. ಈಗ ಮನಿಗೆ ಬಂದಾಗಽ ಉಕ್ಕಿಬಂತೇನೋ ಮಗಳಮ್ಯಾಲೆ ಪ್ರೀತಿ?

ಗಂಗು

(ಇನ್ನೂ ಬಿಕ್ಕುವಳು)

ರಾಮು

ಅಳಲಿಕ್ಕೇನಾಗೇದಽ ಗಂಗು? ಅತ್ತೀಮನಿ ಅಂದ್ರ ಸ್ವಲ್ಪ ತ್ರಾಸ ಆಗೋದಽ ಮತ್ತ. ಮುದಿಕಿ ಆಗಿ ಈಕಿ ಇನ್ನೂ ಮನ್ನೆಮನ್ನೆತನಕ ಮುಳುಮುಳು ಅತಗೋತ ಕೂಡತಿದ್ದಳು ಇಲ್ಲಿಗೆ ಬಂದರ. ಅವ್ವ ಹೋದಮ್ಯಾಲೆ ಈಕಿಗೆ ಹರಾಹುರಿ ಆಗೇದ; ಒಂದಿಷ್ಟು ನಕ್ಕೋತ ಇರಲಿಕ್ಕೆ ಹತ್ಯಾಳ. ಇಕಾ ಗಂಗು, ಎಷ್ಟಽ ಅಂದರೂ ಏನಽ ಅಂದರೂ ಅವರು ಅಂದದ್ದು ಅನಿಸಿ ಕೊಂಡು ಇರಬೇಕಾಗತದವಾ. ಅತ್ತೀಮನಿ ಅದು! ಗಂಡನ ಮನಸ್ಸು ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು.

(ಸುಮ್ಮಿಯು ಕಡೆಗೆ ನೋಡುವನು. ಸುಮ್ಮಿ ನಕ್ಕು ಮುಖ ತಿರುಹುವಳು)

ಯಾಕ, ಮಾತಽ ಇಲ್ಲಲ್ಲ? ಏನು, ಸೆಟಗೊಂಡು ಬಂದೀದಿ ಕಾಣಸ್ತದ? ಹಾಂಗಿದ್ದರ ನಡಿ, ಮೊದಲ ನಿನ್ನ ಕಳಿಸಿಬರತೇನಿ ಅತ್ತೀಮನಿಗೆ. ಅಲ್ಲೆ ನಾಯೆಲ್ಲಾ ಹೇಳೋದನ್ನ ಹೇಳಿಬರತೇನಿ ಅವರಿಗೆ.

ಸುಮ್ಮಿ

ನಿಂತ ಕಾಲಮ್ಯಾಲೆ ಈಗಽ ತಿರಿಗಿ ಹೋಗೋದೇನು ? ಮರ್ಯೋ ಬ್ಯಾಡ. ಈಗ ಇನ್ನೂ ದೇವರಽ ಅಂತ ಬಂದಽದ ಕೂಸು ಮನಿಗೆ. ಏನು, ತಾಯಿ

ಇಲ್ಲದ ಮಗಳs ಬೇಕಾದಾಗ ಕಳಸಲಿಕ್ಕೆ?ನಾವs ಅವರ ಮನೀ ಬಾಗಿಲಿಗೆ ಅಬ್ಬಾಗತಿ-ಆಲಾಗತಿ ಹೋಗೋದು ಯಾಕದು? ತಮ್ಮ ಹುಡಿಗಿ ಬೇಕಾಗಿದ್ದರ ಅವರs ಮನೀತನಕಾ ಬಂದು ಕರಕೊಂಡು ಹೋಗಲಿ.

ರಾಮು

(ಆವೇಶದಿಂದ)

ಅವರ್‍ಯಾಕ ಬರತಾರ? ಹ್ಯಾಂಗ ಬಂದಾಳ ಹಾಂಗ ಹೋಗಲಿ. ನೀ ಇಲ್ಲದ್ದs ಒಣಾ ಕಾರಭಾರ ಮಾಡಬ್ಯಾಡ ನಡುವ! ಗಂಗೂ, ನಡಿ, ಹೋಗೋಣು, ಬಿಟ್ಟುಬರತೇನಿ.

ಗಂಗು

ನಾ ಹೋಗೂದಿಲ್ಲ.

ರಾಮು

(ರಮಿಸುವ ದನಿಯಲ್ಲಿ)

ಅತ್ತೀಮನಿಗೆ ಹೋಗೂದಿಲ್ಲ ಅಂದ್ರ ಹ್ಯಾಂಗವಾ? ಕೊಟ್ಟ ಹೆಣ್ಣು ಕುಲಕ್ಕ ಹೊರತು ಅಂತ ಹೇಳಿಲ್ಲs? ಏನಿದ್ದರೂ ಇದು ನಿನ್ನ ಮನಿ ಅಲ್ಲ ಮಗಳs. ನೀ ಹೋಗಲಿಕ್ಕೆಬೇಕು.

ಸುಮ್ಮಿ

ಏನರೆ ಮಾತಾಡಿ ಆಕಿಗೆ ಸುಮ್ಮನ ತ್ರಾಸ ಕೊಡಬ್ಯಾಡ್ರಿ.

(ಗಂಗೂನಿಗೆ)

ಇಲ್ಲಿ ಬಾರs ಗಂಗು,

(ತಬ್ಬಿಕೊಂಡು)

ಯಾರು ಕರಕೊಂಡು ಹೋಗತಾರೋ ನೋಡೋಣ.

ಕಾಶಿ

(ಇದನ್ನೆಲ್ಲ ನೋಡುತ್ತ ಕೇಳುತ್ತ ತನ್ನ ಮನೆಯಲ್ಲಿ ನಿಂತಿದ್ದವಳು ಒಮ್ಮೆಲೆ ಮುಂದೆ ಧಾವಿಸಿ ಬಂದು)

ಯಾರು ಕರಕೊಂಡು ಹೋಗ್ತಾರs... ನಾ ಕರಕೊಂಡು ಹೋಗ್ತೇನಿ... ಹೇಳದ, ಕೇಳದ ಇದ್ದೂರಂತ ತವರಮನಿಗೆ ಬಂದು ಕೂತೀ ಹೌದs? ನಡಿ ಮನೀಗೆ...

ಗಂಗು

ನಾ ಬರೂದಿಲ್ಲ.

ಸುಮಿತ್ರ

ಹೌದು ಗಂಗೂ, ನೀ ಹೋಗಬ್ಯಾಡ.

ಕಾಶಿ

ಭಲೋ ಉಪದೇಶಮಾಡತೀಯವಾ ತಾಯೂಗಿ ಮಗಳಿಗೆ. ನಾ ಯಾರ್‍ಯಾರನ್ನೂ ಕೇಳೋವಾಕಿ ಅಲ್ಲ. ಆಕಿನ್ನ ಕರಕೊಂಡs ಹೋಗತೇನಿ. ಯಾರು ತಡೀತಾರೋ ನೋಡೋಣ...

(ಅಧಿಕಾರವಾಣಿಯಿಂದ)

ನಡೀಯುs ಗಂಗೂ.

ರಾಮು

ಗಂಗೂ, ನೀಯೇನು ಸಣ್ಣಾಕಿ ಅಲ್ಲ ಹೇಳಿಸಿಕೊಳ್ಳಲಿಕ್ಕೆ. ಏನs ಆದರೂ ನೀನು ಹೋಗಲಿಕ್ಕೆಬೇಕು.

(ಕಾಶಿಗೆ)

ನೀವು ಕರಕೊಂಡs ಹೋಗ್ರಿ.

ಗಂಗು

(ಅಳುದನಿಯಲ್ಲಿ)

ಏನು ಎಲ್ಲಾರೂ ಕೂಡಿ ನನ್ನ ಕಾಡಬೇಕೂ ಅಂತs ಈ ಆಟಾ ಹೂಡೀರೇನು ? ನಾ ಹೋಗೂದಿಲ್ಲ.

ರಾಮು

(ಸಿಟ್ಟಿಗೆದ್ದವರಂತೆ)

ನನಗ ಎದುರುತ್ತರ ಕೊಡತೀಯಾ? ಇಕಾ ಗಂಗು, ನನ್ನ ಮಾತು ಕೇಳೋಹಾಂಗಿದ್ದರs ನನ್ನ ಮನ್ಯಾಗ ನಿನಗ ಜಾಗಾ ಅದ. ಇಲ್ಲದಿದ್ದರ ಇಲ್ಲ. ನಿನ್ನ ಮನಸ್ಸಿಗೆ ಬಂದಲ್ಲೆ ಹೋಗು.

ಗಂಗು

(ಕಟವಾಸಿ)

ನಿಮ್ಮ ಸಹವಾಸನೇ ಬ್ಯಾಡ ನನಗ. ಯಾರೂ ಇಲ್ಲಾ ಅಂತ ಅಲ್ಲಿಂದ ಎದ್ದು ಬಂದು ಇಲ್ಲಿ ಕೂತರ, ಇಲ್ಲ್ಯೂ ಒಂದೇ ಸವನ ಕಾಡತಾರ. ನಾನೇ ಎಲ್ಲ್ಯರ ಹೋಗತೇನಿ.

(ಏಳುವಳು)

ಇಲ್ಲದ್ದೊಂದು ಏನಾರ ತಿಳಕೊಂಡು ನನ್ನ ಬೆನ್ನುಹತ್ತಿ ಒಂದೇ ಸವನ ಕಾಡತಾರ. ನಾ ಇವರ ಆಟದಾಗೇ ಸೇರಬಾರದಾಗಿತ್ತು ನಮ್ಮವ್ವಾ! ನಾನೇ ಹೋದಮ್ಯಾಲೆ ಯಾರ್ನ ಕಾಡತೀರೋ ಕಾಡರಿ.

[ಸಿಟ್ಟಿನಿಂದ ಭರಭರ ಮುಂದೆ ಹೋಗಿ, ಯಾರೂ ಇಲ್ಲವೆಂದು ತಿಳಿದು ತುಳಸಿ ಕಟ್ಟೆಯ ಮೇಲೆ ವೃಂದಾವನದ ಈ ಕಡೆ ಹೋಗಿ, ಗಲ್ಲದ ಮೇಲೆ ಕೈಯಿಟ್ಟುಕೊಂಡು ಕೂಡುವಳು. ಕಿಟ್ಟಿ ಅದೇ ವೃಂದಾವನದ ಆ ಮಗ್ಗಲು ಈ ಮೊದಲೇ ಬಂದು ಕುಳಿತಿದ್ದು ಇವಳಿಗೆ ಗೊತ್ತಿರಲಿಲ್ಲ. ಕಾಶಿ, ಸುಮ್ಮಿ, ರಾಮು ಅವಳನ್ನೇ ನೋಡುತ್ತ ಕೆಲ ಹೊತ್ತು ನಿಂತು, ಆಮೇಲೆ ಸಾವಕಾಶವಾಗಿ ಕಾಶಿಯ ಮನೆಯ ಕಡೆಗೆ ಬಂದು ಮರೆಯಾಗಿ ನಿಲ್ಲುವರು.]

ಕಿಟ್ಟಿ

(ಕೆಲ ನಿಮಿಷಗಳ ಮೌನದ ನಂತರ, ಗೋಣು ಹೊರಳಿಸಿ ಗಂಗೂನನ್ನು ನೋಡಿ)

ಗಂಗೂ, ಭಾಳ ಸಿಟ್ಟಿಗೆದ್ದೀಯೇನು?

(ಮತ್ತೆ ಮೊದಲಿನಂತೆ ಮುಖ ಹೊರಳಿಸಿ ಕೂಡುವನು)

ಗಂಗು

(ಬೆಚ್ಚಿಬಿದ್ದು, ಮುಖ ಹೊರಳಿಸಿ)

ಆಂ!

ಕಿಟ್ಟಿ

(ಮುಖ ಹೊರಳಿಸದೆ)

ಸಿಟ್ಟಿಗೆದ್ದೀಯೇನು ಅಂದೆ.

ಗಂಗು

ನನಗ ಏನೂ ತಿಳೀದ್ಹಾಂಗs ಆಗೇದ. ಎಲ್ಲಿ ಹೋದರೂ ಚ್ಯಾಷ್ಟಿ ಮಾಡ ವರು ಆಗ್ಯಾರ! ನಾ ಮದಿವಿಗೆ ಒಪ್ಪಿಗೊಂಡದ್ದs ನಂದು ತಪ್ಪಾಗೇದ. ಸುಮ್ಮನ ನನ್ನಷ್ಟಕ್ಕ ನನ್ನ ಯಾರೂ ಬಿಡೂದಿಲ್ಲ ಬ್ಯಾರೆ!

ಕಿಟ್ಟಿ

ಯಾಕ, ಇದು ಆಟಾ ಅಂಬೋದು ಗೊತ್ತಿಲ್ಲೇನು?

ಗಂಗು

(ಹತ್ತಿರ ಸರಿದು)

ಗೊತ್ತದ. ಆದರ ಆಟಾ ಇಷ್ಟು ದೀರ್ಘಕ್ಕ ಹೋಗತದ ಅಂತ ಗೊತ್ತಿರ ಲಿಲ್ಲ. ಏನು ಮಾತಾಡಿದರೂ ಮತ್ತ ಅಲ್ಲಿಗೇ ತಂದು ಹಚ್ಚತಾರ.

(ಮತ್ತೆ ಬಿಕ್ಕುವಳು)

ಕಿಟ್ಟಿ

(ಬೆನ್ನಮೇಲೆ ಕೈಯಾಡಿಸುತ್ತ)

ಇರಲಿ ಬಿಡು; ನಾ ಇರತೇನಿ. ಯಾರು ಏನು ಮಾಡತಾರೋ ನೋಡೋಣ.

(ಅಷ್ಟರಲ್ಲಿ ರಂಗ, ಭೀಮು, ಶ್ಯಾಮು ಹೊರಗಿನಿಂದ ಇವರು ಕುಳಿತಿದ್ದ ಕಡೆಗೇ ಬರುವರು.)

ಭೀಮು

ಯಾಕಪಾ ಕಿಟ್ಟು, ಶಹರದೂರವರ್ಹಾಂಗ ಮನಿಯವರನ್ನ ಕರಕೊಂಡು ಬರತೀಯೇನು ಅಡ್ಡಾಡಲಿಕ್ಕೆ?

ಕಿಟ್ಟಿ

ಇಕಾ, ಇಲ್ಲದ್ದೊಂದು ಮಾತಾಡಬ್ಯಾಡ್ರಿ. ಗತಿ ನೆಟ್ಟಗಾಗಲಿಕ್ಕಿಲ್ಲ.

ರಂಗ

ಮಗಾ, ಆಟದಾಗಿನ ಹೇಣ್ತಿ ಅಂದ್ರ ಖರೇನs ಹೇಣ್ತಿ ಅಂತ ತಿಳ ಕೊಂಡಾನ.

ಶ್ಯಾಮು

ಅವಗೇನಪಾ, ಗೌಡರ ಮಗಾ. ಅವನ್ಯಾರು ಕೇಳಬೇಕು? ಅವನದs ಅಪ್ಪಣಿ ಅಲ್ಲs ನಮಗೆಲ್ಲಾ? ಮತ್ತೇನಂತಾರ ಗೌಡರು?

ರಂಗ

ಆದರ ಗಂಗೂನರೆ ಇಲ್ಲಿ ಬರಬಾರದಿತ್ತು. ಅಲ್ಲಿ ಹೆಣ್ಣುಹುಡುಗರೊಳಗ ಹೋಗಬಾರದs ಗಂಗೂ; ಇಲ್ಲೇನವ ಗಂಡುಹುಡುಗರೊಳಗ ನಿಂದು?

ಭೀಮು

ಇವನs ಇಲ್ಲಿ ಕೂಡಿಸಿಕೊಂಡು ಕೂತಿರಬೇಕ್ರ್ಯೋ; ಅಂತs ನಾವು ಹೋಗಂದ್ರ ಹೋಗತಾಳs ಆಕಿ?

ಗಂಗು

ನಾ ಎಲ್ಲೂ ಹೋಗೂದಿಲ್ಲ. ನೀವs ಹೋಗ್ರಿ ಬೇಕಾರ. ನಾ ಇಲ್ಲೇ ಕೂಡೋವಾಕಿ.

ರಂಗ

(ವ್ಯಂಗ್ಯವಾಗಿ ಭೀಮುನಿಗೆ)

ಏ ಭೀಮು, ಬಾಯಿ ಬಿಗಿಹಿಡಿದು ಮಾತಾಡಲೇ. ಗೌಡಶಾನಿ ಆಕಿ, ಗೊತ್ತದ ಇಲ್ಲೋ? ಗೌಡರs ಸುಮ್ಮನಿದ್ದಾರ ಅಂದಮ್ಯಾಲೆ ನಮ್ಮದೇನೋ ಆಕಿಗೆ ಬಿಸಾತು!

ಭೀಮು

ಆಕಿ ಗೌಡಶಾನಿ ಆಗಿದ್ದs ಖರೇ ಇದ್ದರ, ನಾ ಆಕೀ ಮಾವ, ಗೊತ್ತದೋ ಇಲ್ಲೋ?

(ಹಿರಿಯರ ಗಾಂಭೀರ್ಯವನ್ನು ಅನುಕರಿಸಿ)

ಗಂಗೂ, ನೀ ಇಂಥಲ್ಲೆ ಹೀಂಗ ಕೂಡಬಾರದು. ಕಿಟ್ಟ್ಯಾ, ನಿನಗೂ ತಿಳೀ ಬಾರದೇನೋ?

ಕಿಟ್ಟಿ

ಇಲ್ಲದ್ದs ಹುಚ್ಚುಚ್ಚಾರ ನೀವು ಬಡಿಬ್ಯಾಡ್ರಿಅಂ! ಗತಿ ನೆಟ್ಟಗಾಗಲಿಕ್ಕಿಲ್ಲ.

ರಂಗ

ಅಬ್ಬಬ್ಬಾ! ಗೌಡರ ದರ್ಪಸಾ ಅದು!

ಶ್ಯಾನು

ಅಲೆಲೆ, ಒಡವಾಟಕ್ಕs ಬಂತೇನು ಪ್ರಕರಣ?

ಕಿಟ್ಟ

ಎಲ್ಲಿಗೇ ಬರವಲ್ಲದ್ಯಾಕ, ನಿಮಗ್ಯಾಕ ಬೇಕು? ಸುಮ್ಮನ ನಡ್ರಿ, ನಡುವ ಬಾಯಿ ಹಾಕಬ್ಯಾಡ್ರಿ.

ರಂಗ

(ನಾಟಕೀಯವಾಗಿ ಕಿಟ್ಟಗೆ ಬಗ್ಗಿ ಮುಜರೆಮಾಡಿ)

ಅಪ್ಪಣಿ ಧಣೇರ.

(ಭೀಮನ ಕಡೆಗೆ ತಿರುಗಿ)

ಹೌದೋ ಭೀಮ್ಯಾ, ಸುಮ್ಮನಿರು. ನೀ ಬರೆ ಆಟದಾಗ ಅಪ್ಪ ಮಗನs; ಇಲ್ಲೆ ಅಲ್ಲ. ಇಲ್ಲೆ ನಿಮ್ಮಪ್ಪ ಅಂವ, ತಿಳೀತs?

ಕಿಟ್ಟ

ಹೌದೋ, ನಿಮ್ಮೆಲ್ಲಾರ ಅಪ್ಪ ನಾನು, ತಿಳೀತs. ಹೆದರಿಕೀ ಹಚ್ಚೀರೇನು ನನಗ? ನಾ ಸಿಟ್ಟಿಗೆದ್ದೆ ಅಂದರ ಯಾರೂ ಈಡಾಗಲಿಕ್ಕಿಲ್ಲಾ ಅಂದೆ.

ರಂಗ

ಏ ಭೀಮ್ಯಾ, ನೋಡೋ ಹೇಣ್ತಿಯೆದುರಿಗೆ ಶೌರ್ಯ ತೋರಿಸಲಿಕ್ಕೆ ಬಂದಾನ ಅಂವ!

(ವ್ಯಂಗ್ಯವಾಗಿ)

ಮತ್ತ ಅಂವ ಸಿಟ್ಟಿಗೆದ್ದರೂ ಹಾಂಗs ಏನಪಾ. ಮೊನ್ನೆ ನಾ ಸಾಲ್ಯಾಗ ಇವಗ ಹೊಡದದ್ದಕ್ಕ ಮಾಸ್ತರಿಗೆ ಹೇಳಿ ನನ್ನ ಹೊಡಸಲಿಲ್ಲs?

(ಖಿಕ್‌ಖಿಕ್ ನಗುವನು)

ಕಿಟ್ಟ

ಮಾಸ್ತರಿಗೆ ಹೇಳಿ ಯಾಕ? ನಾನs ಹೊಡೀತಿದ್ದೆ. ಹೆದರಿಕೇನು ನಿಂದು ನನಗ? ಸಿಗಲಿಲ್ಲ ಬಾ ಅವೊತ್ತು ನೀ ನನ್ನ ಕೈಗೆ.

ರಂಗ

ಹೂಂ ! ಅಂತೂ ಹೊಡೀಲಿಕ್ಕೂ ಬರತದೇನು ತಮಗ ? ಆಗಲೆಲ್ಲ ಒಮ್ಮೆ ಪ್ರದರ್ಶನ. ಬೇಕಾದರ ಗಂಗೂನ ಇದಿರಿಗೇ ಆಗಲಿ.

ಕಿಟ್ಟಿ

ಏ, ನನ್ನ ಸಿಟ್ಟಿಗೆಬ್ಬಿಸಬ್ಯಾಡಾ ಅಂದೆ, ಕೊಂದೇನು ನಿನ್ನ.

ರಂಗ

ಕೊಲ್ಲಪಾ, ಕೊಲ್ಲು. ನಿಮ್ಮ ಮನೆತನಕ್ಕ ಬಂದದ್ದು ಅದು. ಅದೂ ಒಂದು ಆಗಿಹೋಗಲಿ. ನಿಮ್ಮಪ್ಪಾ, ನಮ್ಮ ಕಕ್ಕನ್ನ ಹೊಡಿಸಿ ಕೊಂದಿನ್ನಂತ. . ನೀ ಅಷ್ಟು ಮಾಡು ಆ ಶೌರ್ಯ ..

ಕಿಟ್ಟಿ

ಬಿಡತಾರs ಮತ್ತ, ಮಂದೀ ಹೊಲದಾಗಿನ ಬೆಳಿಯೆಲ್ಲ ಕದ್ದರ ?

ರಂಗ

ಇಕಾ ಕಿಟ್ಟ್ಯಾ, ನಾ ಇಷ್ಟೊತ್ತನಕ ಸುಮ್ಮನಿದ್ದೆ. ನೀ ಏನು ಒದರಿ ಕೊಂಡರೂ ನಾ ಸಿಟ್ಟಿಂದಿಲ್ಲ. ಇನ್ನ ನಮ್ಮ ಮನೀಸುತ್ತ ಬಂದೆಂದರ ಮಾತ್ರ ನನಗ ತಡಿಯೂದಿಲ್ಲ...

ಕಿಟ್ಟಿ

ಮತ್ತ ನೀಯಾಕ ಬಂದಿ, ನಮ್ಮ ಮನೀಸುತ್ತ ?

ರಂಗ

ಸುಳ್ಳೇನು ಅದು ? ಖರೇ ಮಾತಾಡಲಿಕ್ಕೆ ಯಾರಪ್ಪನ ಅಂಜಿಕಿ ?

ಕಿಟ್ಟಿ

ಮತ್ತ ನಿಮ್ಮದು ಸುಳ್ಳೇನು ?

ರಂಗ

ಹಂಗಾರ ಆಗಿಬಿಡಲಿ ಯಾರದು ಸುಳ್ಳು ಯಾರದು ಖರೆ.

ಭೀಮು

(ತಡೆದು)

ಹೋಗಲಿ ಬಿಡೋ ರಂಗ್ಯಾ, ಏನು ಮಾಡತಿ ತೊಗೊಂಡು ? ಅದೇನೊ ಹಿಂದಿನ ನ್ಯಾಯ ನೆನಸಿ ಹಿತ್ತಲಪಾಗ ಅತ್ತರಂತ.

ರಂಗ

ಅದು ಹ್ಯಾಂಗ ಬಿಡತಾರೊ ನಿನ. ಎಷ್ಟು ಚ್ಯಾಷ್ಟೆಪಾ ಅಷ್ಟು. ಇವ ಗೊಬ್ಬಗs ಬರಕೊಟ್ಟದೇನು ಸಿಟ್ಟಿಗೇಳಲಿಕ್ಕೆ? ನಾವೇನು ಇತ್ತಲಾಗಿನವರು ಬಳಿ ಇಟ್ಟಿವೇನೊ ?

ಕಿಟ್ಟಿ

ಏ, ಯಾಕ ಸುತ್ತುಸುತ್ತಾಡಿ ಮಾತಾಡತೀ ? ಒಮ್ಮೆ ಬಂದಾರೆ ಬಾ. ಆಗಿ ಹೋಗಲಿ.

(ತೋಳು ಏರಿಸುವನು)

ರಂಗ

ಬಾ, ಯಾರು ಬ್ಯಾಡಂತಾರ ?

(ಇವನೂ ತೋಳು ಏರಿಸುವನು)

[ಇಬ್ಬರೂ ಕೈಏರಿಸಿ ಬಡಿದಾಡಲು ಸಿದ್ಧರಾಗುವರು. ಇದನ್ನು ನೋಡಿ ಎಲ್ಲರೂ ಓಡಿಬರುತ್ತಾರೆ. ಗಂಗು ಎದ್ದು ದೂರ ಸರಿದು ನಿಲ್ಲುತ್ತಾಳೆ. ಕಾಶಿ ಒಳಗಿನಿಂದ ಬಂದು ಅವಳ ಹತ್ತಿರ ನಿಲ್ಲುತ್ತಾಳೆ.]

ರಾಮು

ಏ ಬಿಡ್ರ್ಯೋ ಯಾಕ ಬಡದಾಡತೀರಿ ?

ರಂಗ

ಉಹೂಂ, ಬಿಡೂದಿಲ್ಲ.

ಕಿಟ್ಟಿ

ನಾನೂ ಬಿಡೂದಿಲ್ಲ.

(ರಾಮು, ಶ್ಯಾಮು ಇಬ್ಬರ ನಡುವೆ ಬಂದು ನಿಲ್ಲುವರು)

ಕಾಶಿ

(ಮುಂದೆ ಬಂದು)

ಯಾಕ್ರ್ಯೋ, ಏನು ಆಟಕ್ಕ ಬಂದಿರೋ, ಬಡಿದಾಟಕ್ಕ ಬಂದೀರೋ? ಮೊದಲ ಬರೋಮುಂದ ಬಡಿದಾಡೂದಿಲ್ಲ ಅಂತ ಹೇಳಿ ಬಂದು, ಈಗ ಬಡದಾಡತೀರೇನು? ಈ ಗಂಡಸರಂದರs ಹೀಂಗ. ಎಲ್ಲಿ ಹೋದರೂ ಬಡಿದಾಡತಾರ ತಾಯೀ! ಏ ಕಿಟ್ಯಾ, ಸುಮ್ಮನಾಗೋ.

(ಭೀಮುನ ಕಡೆಗೆ ತಿರುಗಿ)

ಹಿರೇರಾಗಿ ಏನು ಜಗಳಾ ಬಿಡಿಸಬೇಕೋ, ಹಂಗs ನಿಂತು ಮೋಜು ನೋಡಬೇಕೋ? ಸಿಟ್ಟುಮಾಡಿ ಹೇಳೋದು ಬಿಟ್ಟು ಹಂಗs ನಿಂತಾರ! ಯಾಕೋ ಕಿಟ್ಯಾ?

ಕಿಟ್ಟಿ

ಅವನs ಮೊದಲ ಬಡದಾಟ ತಗದಾವ. ಅವಗ ಹೇಳು.

ರಂಗ

ಅಂವ ನಮ್ಮ ಮನೀ ಮುಂದಿನ್ನ ಬಯ್ದಾನ. ಅವಗs ಹೇಳು.

ಕಿಟ್ಟಿ

ಅಂವ ಸಿಕ್ಕಸಿಕ್ಕಾಂಗ ಮಾತಾಡತಾನ, ನಾನೂ ಗಂಗೂ ಇಲ್ಲಿ ಕೂತಾಗ.

ರಂಗ

ನಾ ಏನು ಅಂದೆ? ಬರೇ ಚ್ಯಾಷ್ಟಿ ಮಾಡಿದೆ.

ಕಿಟ್ಟಿ

ನಾನೂ ಚ್ಯಾಷ್ಟಿ ಮಾಡಿದೆ.

ಕಾಶಿ

ಚ್ಯಾಷ್ಟಿ ಮಾಡವರು ಬಡದಾತೀರ್ಯಾಕೊ? ಇನ್ನಷ್ಟು ಮಾಡ್ರೆಲ್ಲ ಚ್ಯಾಷ್ಟೀನ, ಯಾರು ಬ್ಯಾಡಂತಾರ. ನಿಮಗ ಗಂಡಸರಿಗೆ ಬಡದಾಡಲಿಕ್ಕೇ ಬರೂದುಲ್ಲಲಾ! ಬಡದಾಡಬೇಕೂ ನಾವs ಹೆಣಮಕ್ಕಳು. ಹೋದ ಜನ್ಮದ ಸೇಡು ಈ ಜನ್ಮ ದಾಗ ಬಂದರೂ ಬಿಡೂದಿಲ್ಲ ನಾವು. ನೀವೆಂದ ಬಡಿದಾಡಿದ್ದ್ರೆಲಾ!

ಆಗಳೇ ತೋಳೇರಿಸಿ ನಿಂತಿದ್ವು; ಈಗ ಚ್ಯಾಷ್ಟಿ ಮಾಡತಿದ್ದಿವಿ ಅಂತ ತಪ್ಪಿಸಿಗೋತಾವ. ಯಾಕಽ ಗಂಗೂ, ನೀಯಾಕ ಇಲ್ಲೆ ಬಂದು ಕೂತಿದ್ದಿ? ಗಂಡನ ಶೌರ್ಯ ನೋಡತಿದ್ದೇನು ?

(ಭುಜ ತಟ್ಟುವಳು. ಗಂಗು ಮುಖ ಕೆಳಗೆ ಹಾಕುವಳು)

ಕಿಟ್ಟಿ

ಮತ್ತ ಅದಽ ಮಾತು !

(ಗಂಗೂನ ಹತ್ತಿರ ಹೋಗಿ ಕೈಹಿಡಿದು)

ನಡಿ ಗಂಗೂ. ಇಲ್ಲಿದ್ದರ ಮತ್ತ ಎಲ್ಲಾರೂ ಕಾಡತಾರ ನಿನ್ನ. ನಾವಽ ಎಲ್ಲಾರ ಅನಕಾ ಮರೆಯಾಗಿ ಹೋಗೋಣು. ಹುಂ, ಬಾ. ಇವರ ಉಸಾಬರಿ ಬ್ಯಾಡ.

(ಎಳೆದುಕೊಂಡು ಮನೆಯ ಹಿಂದೆ ಓಡಿಹೋಗುವನು. ಕೂಡಿದವರೆಲ್ಲ ಅತ್ತ ಇತ್ತ ಚದರಿ ನಿಲ್ಲುವರು.)

ಕಾಶಿ

ಖೋಡಿ ಕಿಟ್ಟ್ಯಾ, ಮಾನ ಮುಕ್ಕಾಗಬಾರದು ಅಪ್ಪಂದು. ಅಪ್ಪ, ಅಳ್ಯಾ ಆಗ್ಯಾನ ಸಿಟಗೊಳ್ಳಲಿಕ್ಕೆ. ಆಟ ಮುಗಿಯೂ ಮುಂದರೆ ಅಷ್ಟು ನಕ್ಕೋತ ಮಾತಾಡಬಾರದಽ? ಈ ರಂಗ್ಯಾನೂ ಹಂಗಽ. ತಂದಽ ಆಷಾಢ್ಯ ಆಗಬೇಕು. ಸಾಕಾತವಾ ಆಟ! ಬರೆ ಬಡದಾಟನಽ ಆತು! ಇನ್ನ ನಡ್ರೇ ಹೋಗೋಣು. ಅಕಾ,ಆಟದಾಗ ಹೊತ್ತಽ ತಿಳೀಲಿಲ್ಲ.ಅಯ್ಯಽ ಚಂದಪ್ಪ ಯಾವಾಗ ಮೂಡಿ ದನಽ ? ಆಗಳೇ ಕಣ್‌ಮುಚ್ಚಿ ಕಣ್‌ತಗೆಯೋದರಾಗ ಎಂಥಾ ಬೆಳ ದಿಂಗಳು ಬಿದ್ದದಽ ! ಹುಂ, ಏಳ್ರೇ ಎಲ್ಲಾರೂ, ಭಾಳೊತ್ತಾತೂ. ಇನ್ನ ಮನಿಗೆ ಹೋದಮ್ಯಾಲೆ ಅದ, ವಾಲಗ ನಮ್ಮದು. ಏ ಸುಮ್ಮಿ, ದಮ್ಮಿ ಏಳ್ರೇ ಭಡಾಭಡಾ. ಸುಮ್ಮಿ, ನಿನ್ನ ಕೋಲು ಎಲ್ಲಿ ಅವನಽ, ತಗಿ; ಯಾರ ಬೆನ್ನಮ್ಯಾಲೆ ಹಾಕೋಣು ಹೇಳು. ನಡ್ರಿನ್ನ. ಎಲ್ಲಾ ಸಾಮಾನ ಒಂದೂ ಬಿಡದ ತಗೊಳ್ರಿ.

(ತಾನೂ ಅತ್ತಿತ್ತ ಓಡಾಡಿ ಸಾಮಾನು ಕೂಡಿಹಾಕುವಳು)

ಏನರೆ ಮರೀಬ್ಯಾಡ್ರಿ.

(ಗಂಡುಹುಡುಗರಿಗೆ)

ನಡೀರೋ ನೀವೂ ಇನ್ನ.

ರಾಮು

ನೀವು ನಡೀರಿ ಮುಂದ. ನಾವು ಹಿಂದಾಗಡೆ ಬರತೀವಿ.

ಕಾಶಿ

ಅದೇನಿಲ್ಲ. ಎಲ್ಲಾರೂ ಕೂಡೇ ಹೋಗೋದು. ಮತ್ತ ಇವರೆಲ್ಲಿ ಹೋದರು ಗಂಗೂ ಕಿಟ್ಯಾ? ನೋಡ್ರ್ಯೋ ಎಲ್ಲಿದ್ದಾರ?

(ಎತ್ತರದ ದನಿಯಲ್ಲಿ)

ಏ ಗಂಗೂ! ಏ ಕಿಟ್ಯಾ! ಬರ್ರ್ಯೋ ಮನಿಗೆ ಹೋಗಬೇಕು ಹೊತ್ತಾತೂ...

(ಎಲ್ಲರೂ ಸಾಮಾನು ಕಟ್ಟಿಕೊಂಡು ಮನೆಗೆ ಹೊರಡಲು ಸಿದ್ಧರಾಗಿ ಒಂದೇ ಕಡೆಗೆ ಗುಂಪಾಗಿ ಬಂದು ನಿಲ್ಲುವರು.)

ಎಲ್ಲಾರೂ ಹೋಗಿ ನೋಡಿಅರೆ ಬರೋಣು ನಡೀರ್ರ್ಯೋ. ಇಲ್ಲೆ ಎಲ್ಲ್ಯಾರ ಕೂತಿದ್ದಾರಾದೀತು.

[ಹೆಸರುಗೊಂಡು ಒದರುತ್ತ ಆ ಕಡೆ ಕೆಲವರು ಈ ಕಡೆ ಕೆಲವರು ಹುಡುಕಲು ಓಡಿಯಾಡುವರು. ಕಾಶಿಯೂ ಕೂಗುತ್ತ ಸುತ್ತುಹಾಕಿ ಬರುವಳು. ಕೆಲ ನಿಮಿಷಗಳ ನಂತರ ಎಲ್ಲರೂ ಬೇರೆಬೇರೆ ದಿಕ್ಕಿಗೆ ಹೋದವರು ಬಂದು ಕೂಡುವರು. ಯಾರಿಗೂ ಪತ್ತೆ ಹತ್ತಿರಲಿಲ್ಲ.]

ರಾಮು

ಎಲ್ಲ್ಯೂ ಸಿಗಲಿಲ್ಲವಾ ಕಾಶಿ !

ಕಾಶಿ

ಹ್ಯಾಂಗ ಮಾಡಬೇಕು ಹಂಗಾರ? ಎಲ್ಲೆ ಅಡಗಿಕೊಂಡು ಕೂತಿದ್ದಾರಾ ದೀತು ! ಹೊತ್ತು ಬ್ಯಾರೆ ಹೋಗಲಿಕ್ಕೆ ಹತ್ತೇದ. ನಾವಾರೆ ಅವರನ್ನ ಬಿಟ್ಟು ಮನೀಗೆ ಹ್ಯಾಂಗ ಹೋಗಬೇಕೂ ಅಂತೀನಿ ?

(ಮನೆಯ ಬಾಗಿಲ ಎದುರಿಗೆ ಹೋಗಿ)

ಏ ಗಂಗೂ, ಕಿಟ್ಯಾ, ಬರ್ರ್ಯೋ. ನಾವು ಹೋಗತೇವಿ. ಭಾವೀ ಕಡೆಗೆ ಹೋಗ್ಯಾರೇನೋ ಮತ್ತ ?

ರಂಗ

(ತೂಗುಮಣೆಯ ಮೇಲೆ ಒಂದು ಕಾಲಿಟ್ಟು ಜೀಕುತ್ತ)

ಮನಿಗೆ ಹೋಗಿದ್ದಾರೇಳು ಆಗಳೇ ಅವರು, ನಮ್ಮನ್ನ ತಪ್ಪಿಸಿ.

ಶ್ಯಾಮ

ಹೌದು ಕಾಶಿ, ಹೋಗಿದ್ದರೂ ಹೋಗಿರಬೇಕು. ಇಲ್ಲಿದ್ದರ ಇಷ್ಟೆಲ್ಲಾ ಹುಡಿಕಿದಿವಿ; ಸಿಗಬೇಕಾಗಿತ್ತು.

ಕಲ್ಲ

ಕಂಡಾಬಟ್ಟೆ ಕಾಡಾಣಾ ಮಾಡಿದಿರಿ ತಗೀರಿ ನೀವೂ! ಅsಟು ಮಾಡಬಾರದಾಗಿತ್ತು.

ರಂಗ

ಅವರಾಗೆಲ್ಲಾ ಏನವನೋ ಕಲ್ಲ್ಯಾ. ಅಂವಾ ಕಿಟ್ಟ್ಯಾಯೇಳು ಅಂವ. ಮಗಾ ನಮಕಿಂತ ಮೊದಲs ಹೋಗಿರಬೇಕು. ನಡ್ರಿ, ನಡ್ರಿ ಹೋಗೋಣು ಇನ್ನ.

(ಮುಂದಾಗುವನು)

ಕಾಶಿ

ಹಂಗಾರ ಹೋಗೋಣs ಎಲ್ಲಾರೂ ?. . ಏ ಭೀಮು, ನೀ ಇನ್ನೊಮ್ಮೆ ಹೋಗಿ, ಒಂದಿಷ್ಟು ನೋಡಿ ಬರ್ತೀದ್ಯಾ ?... ಆ ಭಾವೀತನಕ ಹೋಗಿ ಬಾರಪಾ!... ಶ್ಯಾಣಾ ನಮ್ಮಪ್ಪ!... ಹೋಗಿ ಬರತೀಯಾ?... ನನಗ್ಯಾಕೋ ಚಡಪಡಿಕಿ ಆಗಲಿಕ್ಕೆ ಹತ್ತೇದ... ಸಂಜಿ ಆತು. ಎಲ್ಲಿ ಹೋಗಿದ್ದಾರು ಇವರು ?... ನಾ ಯಾಕ ಈ ಆಟಾ ಹೂಡಿದ್ನೋ ಖೋಡಿ !...

ಸುಮ್ಮಿ

ಹೋಗಿದ್ದಾರು ಬಾರs ಕಾಶಿ. ಮನ್ಯಾಗ ಅವ್ವ ಏನಂತಾಳೋ ಏನೋ ! ಲಗೂಲಗೂ ನಡೀ ನಮ್ಮವ್ವಾ !

[ಎಲ್ಲರೂ ಹೋಗುತ್ತಾರೆ. ಕಾಶಿ ಮಾತ್ರ ಎಲ್ಲರಿಗಿಂತ ಹಿಂದೆ ಉಳಿದು ಸಾವಕಾಶವಾಗಿ ಸುತ್ತಲೂ ಹುಡುಕುಕಣ್ಣುಗಳಿಂದ ನೋಡುತ್ತ, ನಿರಾಸೆಯ ಭಾರದಿಂದ ಮೆಲ್ಲಡಿಯಿಡುತ್ತ, ನಾಲ್ಕು ಹೆಜ್ಜೆ ಮುಂದೆ ಬಂದು, ಮತ್ತೆ ಹಿಂತಿರುಗಿ ನೋಡಿ, ಓಡಿಹೋಗಿ ಮತ್ತೆ ಅವರ ಹೆಸರು ಕೂಗಿ, ಉತ್ತರವಿಲ್ಲದ್ದಕ್ಕೆ ಇನ್ನೂ ನಿರಾಸೆಗೊಂಡು, ಕೊನೆಗೆ ಮನೆಗೆ ಹೊರಡುವ ನಿರ್ಧಾರದಿಂದ ಹೊರಟು, ಆಕಾಶದ ಕಡೆಗೆ ನೋಡಿ ಕೈಮುಗಿದು ಹೋಗುತ್ತಾಳೆ.

ಅವಳ ಬೆನ್ನಟ್ಟಿಯೇ ಗಂಭೀರಮೌನ ಬಂದು ರಂಗವನ್ನು ವ್ಯಾಪಿಸುತ್ತದೆ. ತುಳಸಿ ಕಟ್ಟೆಯ ಮೇಲೆ ಹುಣ್ಣಿಮೆಯ ಪ್ರಾರಂಭದ ಸುವರ್ಣ ಬೆಳದಿಂಗಳು ಪಸರಿಸಿದೆ.

ಕೆಲ ಕ್ಷಣಗಳ ನಂತರ ಗಂಗೂ, ಕಿಟ್ಟಿ ವಿರುದ್ಧ ದಿಶೆಗಳಿಂದ ಕಳ್ಳಹೆಜ್ಜೆ ಇಡುತ್ತ ಬಗ್ಗಿಕೊಂಡು ಬರುತ್ತಾರೆ. ಬಂದು ತುಳಸಿಕಟ್ಟೆಯ ಆ ಮೂಲೆಗೊಬ್ಬರು ಈ ಮೂಲೆಗೊಬ್ಬರು ಕುಳಿತು ಒಬ್ಬರನ್ನೊಬ್ಬರು ನೋಡಿ ನಗುತ್ತಾರೆ. ಸುತ್ತಲೂ ನೋಡಿ ಮೊದಮೊದಲು ಕೈಸನ್ನೆ-ಬಾಯಿಸನ್ನೆಯಿಂದ ಮಾತು ಪ್ರಾರಂಭಿಸಿ ಆಮೇಲೆ ಮೆಲ್ಲಗೆ ತಗ್ಗಿದ ದನಿಯಲ್ಲಿ ಒಬ್ಬರಿಗೊಬ್ಬರು ಮಾತನಾಡುವರು.]

ಗಂಗು

ಹೋದರ ಕಾಣಸತದ ಎಲ್ಲಾರು.

ಕಿಟ್ಟಿ

ಹೌದು, ಹೋಗ್ಯಾರ ಎಲ್ಲಾರೂ.

ಗಂಗು

ಇನ್ನ ನಾವೂ ಹೋಗೋಣs?

ಕಿಟ್ಟಿ

ಈಗs ಬ್ಯಾಡ. ಅನಕಾ ಇಲ್ಲೆ ಕೂಡೋಣಲ್ಲ. ಅವರಿನ್ನೂ ಇಲ್ಲೇ ಇದ್ದಿದ್ದಾರು. ಆಮ್ಯಾಲೆ ಹೋಗೋಣು.

ಗಂಗು

ನನಗ್ಯಾಕೊ ಹೆದರಿಕಿ ಬರತದಪಾ. ಲಗೂ ಹೋಗೋಣ ನಡಿ. ಆ ರಂಗ್ಯಾ ಅಗದೀ ನನ್ನ ಹತ್ತೀಲೆ ಹಾದು ಹೋದ್ನಪಾ! ಎಲ್ಲಿ ಸಿಕ್ಕಬಿಡತೀನೋ ಅಂತ ಎದಿ ಡವಡವ ಅಂತಿತ್ತು. ಅಂತೂ ದೇವರು ಪಾರು ಮಾಡಿದ. ಇನ್ನೊಮ್ಮೆಂದೂ ಈ ಕಾಶೀ ಆಟಕ್ಕ ಬರೂದುಲ್ಲ ಮಹಾರಾಯಾ! ಸಾಕಾಗಿಹೋತು. ಕಾಡಿಕಾಡಿ ಜೀವಾ ತಿಂತಾರ. ಕಾಶೀ ಆಟಾನs ಇಂಥಾವು!

ಕಿಟ್ಟಿ

ಮತ್ತ ಕಾಶೀನೂ ನನ್ನ ಹತ್ತೀಲೆ ಹಾದುಹೋದ್ಲು. ಒಂದs ಸವನ ನಮ್ಮ ಹೆಸರು ತಗೊಂಡು ಒದರತಿದ್ದಳು. ನಗೀ ತಡದು ಹಿಡೀಬೇಕಾದರ ಸಾಕಾತು. ಉಳಿದ ಪ್ಯಾಲಿಗಳಂತೂ ನಮ್ಮ ಸನಿಯಪಕ್ಕs ಹಾಯಲಿಲ್ಲ. ಅಂತೂ ನಾವು ಹೀಂಗ ಅಡಿಗಿಕೊಂಡಿದ್ದs ನೆಟ್ಟಗಾತು ನೋಡು. ಇಲ್ಲಿದರ ನಿನ್ನ ಅವರೆಲ್ಲಾ ಹಂಗs ಕಾಡತಿದ್ದರು.

ಗಂಗು

ಇರಲಿ ನಡಿ, ಹೋಗೋಣು ಹೊತ್ತಾತು.

ಕಿಟ್ಟಿ

(ಹತ್ತಿರ ಬಂದು)

ಇಷ್ಟ್ಯಾಕ ಹೆದರತಿ ಗಂಗೂ? ಮಧ್ಯಾಹ್ನದಾಗೂ ಹಂಗs ಮಾಡಿದಿ. ನನ್ನ ಹೇಣ್ತಿ ಆಗಲಿಕ್ಕೆ ಯಾಕ ಹೆದರಿದಿ? ನಾಯೇನು ತಿಂತಿದ್ನೇನು ನಿನ್ನ? ಆಟ ಒಳೆ ಘಟ್ಟಿಗೆ ಬಂದಾಗ ಅಳಲಿಕ್ಕೆ ಹತ್ತಿದಿ. ಹೀಂಗ್ಯಾಕ?

ಗಂಗು

ಯಾಕ ಅಂದರ ಏನು ಹೇಳಲಿ? ಅದೆಲ್ಲ ನಿಮಗ ತಿಳಿಯುದೇ ಇಲ್ಲ. ಹಿಂದುಮುಂದ್ಯಾಗ ಚ್ಯಾಷ್ಟಿ ಮಾಡಿದರ ನಾ ಏನು ಮಾಡಲಿ?

ಕಿಟ್ಟಿ

ಹೌದು, ಅವಾಗ ಚ್ಯಾಷ್ಟಿ ಮಾಡತ್ತಿದ್ದರು, ಹೆದರತಿದ್ದಿ. ಈಗ ಯಾರು ಚ್ಯಾಷ್ಟಿ ಮಾಡತಾರ? ಈಗ ಯಾಕ ಹೆದರತೀ?

ಗಂಗು

ನೀನು.

ಕಿಟ್ಟಿ

ನಾಯೇನು ನಿನಗ ಚ್ಯಾಷ್ಟಿ ಮಾಡೂದಿಲ್ಲ ಇನ್ನಮ್ಯಾಲ, ಆತs? ಆಟದಾಗ ನಿನಗ ಇನ್ನೂ ಚ್ಯಾಷ್ಟಿ ಮಾಡಬೇಕಂತ ಭಾಳ ಮನಸ್ಸಿತ್ತು. ಆದರ ಏನು ಮಾಡಲಿ, ನಿನ್ನ ಮಾರಿ ನೋಡಿ ನನಗೂ ಕೆಟ್ಟ ಅನಿಸಿತು.

ಗಂಗು

ಅಂತೂ ಒಮ್ಮೆ ಆಟ ಮುಗೀತಲ್ಲಾ, ಸಾಕು!

ಕಿಟ್ಟಿ

ಇನ್ನೂ ಪೂರಾ ಎಲ್ಲಿ ಮುಗದದ ಆಟ?

ಗಂಗು

ಇನ್ನೇನು ಉಳೀತಪ್ಪಾ? ಎಲ್ಲಾ ಆತಲ್ಲ? ಮದಿವಿ ಮಾಡೋದಾತು, ಮಕ್ಕಳನ್ನ ಹಡೆಯೋದಾತು, ಸಂಸಾರ ಹೂಡೋದಾತು, ಜಗಳಾಟ ಆಡೋದಾತು, ನಗೋದಾತು, ಅಳೋದಾತು... ಹಿರೇರು ಮಾಡೋದು ಇನ್ನೇನು ಉಳೀತು? ಎಲ್ಲಾಽ ಬಂತು.

ಕಿಟ್ಟಿ

ಎಲ್ಲಾ ಬರಲಿಲ್ಲಽ. ಇನ್ನೊಂದುಳದದ ನೋಡು.

ಗಂಗು

ಮತ್ತೇನಪಾ ಅದು?

ಕಿಟ್ಟಿ

ಹುಂ, ನೆನಪು ಮಾಡಿಕೋ ನೀನಽ.

ಗಂಗು

(ತಲಿಹಿಡಿದುಕೊಂಡು ನೆನಪುಮಾಡಿಕೊಂಡು ಕೊನೆಗೆ)

ಉಹುಂ...

ಕಿಟ್ಟಿ

ನೋಡು ಇನ್ನೊಮ್ಮೆ...

ಗಂಗು

ನೀನಽ ಹೇಳಪಾ.

ಕಿಟ್ಟಿ

“ಊರ ತುತ್ತಾನತುದಿಗೆ ಒಂದು ಬಾವಿ. ಬಾವಿಗೆ ನೂರು ಪಾವಟಿಗೆ. ಆಲೇರು ಬಾಲೇರು ನೀರಿಗೆ ಹೋಗತಾರ. ನೀರಿಗೆ ಹೋದವರ್ಯಾರೂ ತಿರಿಗಿ ಬರೂದಿಲ್ಲ.” ಏನು, ತಿಳೀತಽ?

ಗಂಗು

ಅಯ್ಯಽ ಇದಽ ಹೌದಲ್ಲೋ? ಸಾವು. ಹೌದಪಾ, ಸಾಯೋ ಆಟಾ ಒಂದು ಆಡಲಿಲ್ಲ ನೋಡು. ನಾವಿಬ್ಬರಽ ಆಡೋಣೇನು?

ಕಿಟ್ಟಿ

(ಗಾಬರಿಯಾಗಿ)

ಹಾಂ ! ಏನಂತೀಯೇನು ?

ಗಂಗು

ಹೌದು ಕಿಟ್ಟೀ, ಎಲ್ಲಾ ಆಡಿದಿವಿ, ಸಾಯೋ ಆಟಾನs ಆಡಲಿಲ್ಲಲ್ಲ? ಅದನ್ನೊಂದು ಆಡಿಬಿಡೋಣು, ಅಂದರ ನಿರಂಬಳ ಆಗತದ. ನಾ ಬೇಕಾದರ ಸುರುವು ಮಾಡತೀನಿ ಮೊದಲ.

ಕಿಟ್ಟಿ

(ಆ ವಿಷಯ ಮರೆಯಿಸಲು)

ಅಲ್ಲs ಗಂಗು, ನೀ ಆಟಾ ಯಾಕೋ ಬಹಳ ಮನಸ್ಸಿಗೆ ಹಚ್ಚಿಗೊಂಡ್ಹಾಂಗ ಕಾಣಸತದ. ಇಷ್ಟು ಹಚ್ಚಿಗೋಬಾರದು ನೋಡು. ಅಲ್ಲಾ ಎಷ್ಟು ಬಡಿದಾಡಿದರೂ, ಅತ್ತರೂ, ನಕ್ಕರೂ ನಾಯೇನರೆ ನಿನ್ನ ಮ್ಯಾಲೆ ಖರೇವಂದ್ರೂ ಸಿಟ್ಟಿಗೆದ್ದಿದ್ದೆನೇನು ? ಆ ರಂಗ್ಯಾನs ಬಂದು ಆಟಾ ಎಲ್ಲಾ ಕೆಡಿಸಿದ. ಇಲ್ಲಾ ಅಂದರ ನಕ್ಕೋತ ಎಲ್ಲಾರೂ ಮನಿಗೆ ಹೋಗತಿದ್ದಿವಿ.

ಗಂಗು

ಹೌದು ನೋಡು. ನನಗನಕಾ ಆವಾಗ ಸಿಟ್ಟು ಅಳು ಎರಡೂ ತುಂಬಿ ಬಂದಿದ್ದವು ನೋಡು ! ಭಾಳ ದುಷ್ಟ ಇದ್ದಾನಪಾ ಅಂವ. ಮುಂದಿಗೆ ಛಲೋ ಆದದ್ದು, ಅಂವಗ ಒಂದಿಷ್ಟೂ ಸಹನ ಆಗೂದಿಲ್ಲ. ಮತ್ತ ನಿನಗ ಗೊತ್ತದೇನು, ಆಟದಾಗ ನನ್ನ ತಾ ಕಣ್ಣು ಕಟ್ಟಿಗೊಂಡು ಮುಟ್ಟಿದಾಗ, ನಾನs ಅವನ ಹೇಣ್ತಿ ಆಗ್ತೀನಿ ಅಂತ ತಿಳಕೊಂಡಿದ್ದ. ನಾನೂ ಭಾಳ ಹೆದರಿದ್ದೆನಪಾ, ಎಲ್ಲಿ ಅವನs ನನ್ನ ಪಾಲಿಗೆ ಬಂದು ಬೀಳತಾನೋ ಅಂತ! ಆದರ ಪುಣ್ಯಾವಂತಿ ಕಾಶಿ ಪಾರುಮಾಡಿದ್ಲು ನನ್ನ!

ಕಿಟ್ಟಿ

ಅವಗೇನು ನಿನ್ನಂತಾ ಹೇಣ್ತಿ ಸಿಗತಾಳs? ಮಹಾ ಖುದ್ದರಗೇಡಿ ಅಂವಾ ! ಆತು ಒಮ್ಮೆ ಅವಗ ನನಗ ಆಗತದ. ಅವಗದ, ನನಗದ.

ಗಂಗು

ಹಾಂಗೆಲ್ಲಾ ಮಾತಾಡಬಾರದಪಾ. ದುಷ್ಟರನ್ನ ಕಂಡರ ದೂರ ಇರಬೇಕು ಯಾವಾಗಲೂ. ಹೋಗೋಣ ನಡಿ ಇನ್ನ ಕಿಟ್ಟಿ. ಹೊತ್ತು ಭಾಳಾತು. ಮನ್ಯಾಗ ಹಾದೀ ನೋಡತಿದ್ದಾರಾದೀತು.

ಕಿಟ್ಟಿ

ನೋಡಲೇಳು. ಎಂಥಾ ಛಂದ ಬೆಳದಿಂಗಳ ಬಿದ್ದದ! ಮತ್ತ ನೀ ಕೇಳ ಬೇಕೂ ಅಂತಿದ್ದೆಲ್ಲ, ಆ ಬಂಗಾರ ಪಂಜರದಾಗಿನ ಗಿಳಿ, ಹರದಾಡೋ ಸುಣ್ಣ, ಮಾತಾಡೋ ಎಲಿ, ಕುಣದಾಡೋ ಅಡಿಕಿ ತರಲಿಕ್ಕೆ ಹೋದ ರಾಜಕುಮಾರನ ಆ ಕಥಿ ಹೇಳತೀನಿ. ಇಷ್ಟ್ಯಾಗಿ ಹೊತ್ತಾದರ ನಾ ಇದ್ದೇ ನಲ್ಲ, ಮನಿತನಕ ಮುಟ್ಟಿಸಿ ಬರತೇನಿ.

ಗಂಗು

ಕಥಿ ಕೇಳಬೇಕೂ ಅಂತ ಮನಸ್ಸಿದ್ದರೂ, ಯಾಕೋ ಧೈರ್ಯ ಸಾಲ ವಲ್ಲದು. ಅಪ್ಪ ಏನಂತಾನೋ ಏನೋ ಅಂತ ಎದಿಗುದಿ. ನೀ ಹೇಳತೀ ಹೌದಲ್ಲೋ ಅಪ್ಪಗ?

ಕಿಟ್ಟಿ

ಓಹೋ, ಅದರ ಕಾಳಜಿ ಬಿಡು, ನಾ ಹೇಳತೀನಿ. ಗಂಗೂ, ಇನ್ನೊಂದಿಷ್ಟು ಇತತ್ತ ಸರಿದು ಕೂಡು. ಇಲ್ಲಿ ನೋಡು, ನಿನಗ ಮುಂದ ಏನಾಗತೀನಿ ಅಂತ ಅನಸತದ?

ಗಂಗು

ನೀ ಏನಾಗತೀದಿ ಮೊದಲ ಹೇಳು. ಆಮ್ಯಾಲೆ ನಾ ಹೇಳತೀನಿ.

ಕಿಟ್ಟಿ

ಹೆಣ್ಮಕ್ಕಳು ಮೊದಲ ಹೇಳಬೇಕು.

ಗಂಗು

ನಮಗೇನು, ನಾವೆಷ್ಟಂದರೂ ಹೆಣ್ಮಕ್ಕಳು. ಕೊಟ್ಟ ಮನೀಗೆ ಹೋಗ ತೀವಿ. ನಮ್ಮ ಪುಣ್ಯ ಇತ್ತಂದರ ಛಲೋ ಗಂಡನ್ನ ಕಾಣತೇವಿ. ಇಲ್ಲಾಂದ್ರ ನಮ್ಮವ್ವನ ಹಾಂಗ ಭಾವೀಪಾಲಾಗತೇವಿ.

ಕಿಟ್ಟಿ

ಥೂ! ಇದs ಆತು ನಿಮ್ಮ ಹಣೇಬರಹ. ಹೆಂಗಸರಿಗೆ ಬ್ಯಾರೆ ವಿಚಾರನs ಇರೂದಿಲ್ಲ. ಯಾವಾಗೂ ಸಾಯೋ ವಿಚಾರ. ನಮ್ಮದು ಹಾಂಗ ಅಲ್ಲ ನೋಡು ಗಂಗು. ನಾಕು ಮಂದಿ ಇದ್ದಾಂಗ ಇದ್ದು ಹೋಗಾಂವ ನಾ ಅಲ್ಲ ನೋಡು. ನಾನು ಮುಂದ ಭಾಳಭಾಳ ಕಲಿತು, ದೂರದೂರ ದೇಶಕ್ಕೆ ಹೋಗಿಬರಾವ. ಬರತೀ ಇಲ್ಲೋ ನೀನೂ?

ಗಂಗು

ಗಂಡಸರ ಹಾಂಗ ಮಾಡಿದರ ಹ್ಯಾಂಗ ನಡದೀತಪಾ? ನಮ್ಮದು ನಮಗೆ, ನಿಮ್ಮದು ನಿಮಗ.

ಕಿಟ್ಟಿ

ಖರೇವಂದ್ರ ನನ್ನ ಮದಿವಿ ಆಗತೀಯೇನು ಗಂಗು? ಅಂದರ ಇಬ್ಬರೂ ಕೂಡಿ ಆರಾಮ ಇರೋಣಂತ.

(ಗಂಗೂನ ಮೈಮೇಲೆ ಕೈಯಾಡಿಸುವನು)

ಗಂಗು

ನಮ್ಮ ಮದಿವೀ ವಿಷಯ ನಾವಲ್ಲ ಮಾತಾಡವರು. ಅದ್ಯಾಕ ಈಗ? ಕಥಿ ಹೇಳತೀನಿ ಅಂದ್ಯೆಲ್ಲ? ಹೇಳು ಮತ್ತ.

ಕಿಟ್ಟಿ

ಹುಂ ಅನಬೇಕೂ. ಅಲ್ಲs ಗಂಗೂ, ಆಗಳೆ ಸಾಯೋ ಆಟ ಆಡೋಣ ಅಂದೀ. ಹ್ಯಾಂಗ ಆಡೋವಾಕಿ?

ಗಂಗು

ಅದರಾಗೇನದ? ಮಲಗಿಬಿಟ್ಟರಾಯಿತು. ನಮ್ಮವ್ವ ಸತ್ತಾಗ ಮಲಗಿಕೊಂಡೇ ಸತ್ತಳು.

ಕಿಟ್ಟಿ

ಹುಂ, ಹುಂ, ಇಷ್ಟs ಹೌದಲ್ಲೊ? ನಾ ಏನೋ ಅಂತ ಮಾಡಿದ್ದೆ... ಹೇಳತೀನಿ ಕೇಳು ಕಥಿ: ಹೀಂಗ ಒಬ್ಬ ರಾಜಾ ಇದ್ದನಂತ...

ಗಂಗು

ಹೂಂ...

ಕಿಟ್ಟಿ

ಅವಗ ಒಬ್ಬಳs ಮಗಳು ಇದ್ದಳಂತ...

ಗಂಗು

ಹೂಂ...

ಕಿಟ್ಟಿ

ಆಕಿನ್ನ ಮದಿವಿ ಆಗಬೇಕನ್ನವರು, ಬಂಗಾರ ಪಂಜರದಾಗಿನ ಬಂಗಾರ ಗಿಣಿ ತಂದು ಕೊಡಬೇಕೂ ಅಂತ ಪಣ ಇತ್ತಂತ ಆಕೀದು...

ಗಂಗು

ಹೂಂ...

ಕಿಟ್ಟಿ

ಒಬ್ಬ ರಾಜಕುಮಾರ, ತರತೀನಿ ಅಂತ ಹೊರಟನಂತ... ಸಪ್ತಸಮುದ್ರ ದಾಟಿದನಂತ... ಸಪ್ತಪರ್ವತ ದಾಟಿದನಂತ... ಚಂದ್ರಮಂಡಲ ಸುತ್ತಿ ಬಂದನಂತ.... ಸೂರ್ಯಮಂಡಲ ಹೊಕ್ಕು ಬಂದನಂತ.... ಎಲ್ಲಿ ಹೋದರೂ ಆ ಸುವರ್ಣಪಂಜರದಾಗಿದ್ದ ಬಂಗಾರಗಿಳಿ ಸಿಗಲಿಲ್ಲಂತ...

ಗಂಗು

ಹೂಂ...

ಕಿಟ್ಟಿ

ಆಗ ಏನು ಮಾಡಬೇಕು ತಿಳೀಲಿಲ್ಲಂತ... ಹಾಂಗ ಮುಂದ ಹೋಗೋ ವಾಗ ಒಬ್ಬ ಬಾವಾ ಭೆಟ್ಟಿ ಆದನಂತ... ಅಂವ ಮೂರು ಅಕ್ಕೀಕಾಳು ಮಂತ್ರಿಸಿಕೊಟ್ಟನಂತ... ಅಲ್ಲಿಂದ ಅವಗ ಉತ್ತರದಿಕ್ಕಿಗೆ ಹೋಗು ಅಂತ ಹೇಳಿಕೊಟ್ಟು ಮಾಯಾದನಂತ...

ಗಂಗು

(ತೇಲುಗಣ್ಣು ಮೇಲುಗಣ್ಣು ಹಾಕುತ್ತ)

ಹೂಂss...

ಕಿಟ್ಟಿ

ರಾಜಕುಮಾರ ಹೊರಟನಂತ... ಯೋಳುಸುತ್ತಿನಕೋಟೆ ಬಂತಂತ... ಭದ್ರಕಾವಲಿತ್ತಂತ... ಎಂಟೆಂಟು ಹರದಾರಿ ಉದ್ದ ಇದ್ದ ಸರ್ಪ ಅಲ್ಲೆ ಕಾವಲಿದ್ದವಂತ... ಒಂದು ಅಕ್ಕೀಕಾಳು ಒಗೆದ...

ಗಂಗು

ಹೂಂss...

ಕಿಟ್ಟಿ

ಮುಂದೆ ಯೋಳು ಮಹಾದ್ವಾರ ಇದ್ದವಂತ... ಅಲ್ಲೊಂದು ಅಕ್ಕೀಕಾಳು ಒಗೆದ... ಯೋಳೂ ಬಾಗಿಲ ತೆರೆದನಂತ... ಅಲ್ಲಿಂದ ಯೋಳು ನೆಲಮನಿ ಯೊಳಗಿಂದ ಹಾದು ಒಂದು ನೀರ್‌ಮನೆಗೆ ಬಂದನಂತ... ಆ ನೀರ ನಡುವ ಕಾಜಿನಮನಿಯೊಳಗ, ಅಂತರಲೆ ಜೋತಾಡತಿತ್ತಂತ ಸುವರ್ಣ ಪಂಜರ... ಅದರೊಳಗ ಆ ಬಂಗಾರಗಿಳಿ ಇತ್ತಂತ... ನೀರೊಳಗಿಂದ ಹ್ಯಾಂಗ ಹೋಗೋದು ?... ಕಡೀ ಅಕ್ಕೀಕಾಳು ಒಗದನಂತ... ನೀರೆಲ್ಲಾ ಮಾಯಾಪವಂತ... ಹೋಗಿ ಪಂಜರ ಹಿಡಿದನಂತ...

ಗಂಗು

(ಸಾವಕಾಶವಾಗಿ ನಿದ್ರಾಧೀನಳಾಗಿ ಕಿಟ್ಟಿಯ ಮೈಗೆ ಒರಗುವಳು)

ಕಿಟ್ಟಿ

(ಮೆಲ್ಲನೆ)

ಗಂಗೂ...! ಗಂಗೂ...!

(ಕೆಲಕ್ಷಣಗಳನಂತರ ಅವಳ ತಲೆಗೆ ಆಧಾರವಾಗಿದ್ದ ತನ್ನ ಭುಜವನ್ನೆ ಮೇಲು ಮಾಡಿಕೊಂಡು ಅವನೂ ನಿದ್ರೆಯ ಭಾರದಿಂದ ಕೆಳಕ್ಕೆ ಒರಗುವನು. ಮೂರು-ನಾಲ್ಕು ಕ್ಷಣಗಳು ಮೌನದಲ್ಲಿ ಉರುಳುವವು. ಬೆಳದಿಂಗಳ ಬೆಳಕು ಇವರ ಮುಖದ ಮೇಲೂ ಆಟವಾಡುತ್ತಿದೆ.)

ಗಂಗು

(ಕನವರಿಸುತ್ತ)

ಅವ್ವಾ... ಏ ಅವ್ವಾ... ಇಲ್ಲೇ ನೀ ಇರತೀ ಅಂತ ಹೇಳತಿದ್ದರಲ್ಲ ಎಲ್ಲಾರೂ... ಅವ್ವ, ಎಲ್ಲಿದ್ದೀಯಽ ಅವ್ವಾ... ನನ್ನ ಮದಿವಿ ಆಗ್ಯೇದ ನೋಡಽ ಅವ್ವಾ... ಬಾರಽ ಅವ್ವಾ... ಅವ್ವಾ, ಈ ಕಾಶಿ ನನಗ ಭಾಳ ತ್ರಾಸ ಕೊಡತಾಳ ಬಾರಽ ಅವ್ವಾ... ಬಂಗಾರಗಿಳಿ ಸಿಕ್ಕದ ನೋಡಽ ಅವ್ವಾ... ನನ್ನ ಕರಕೋ ಬಾರಽ...

[ಆ ಮನೆಯ ಹಿಮ್ಮಗ್ಗಲಿಂದ, ಪಸರಿಸಿದ ಆ ಮೌನವನ್ನು ಸೀಳಿ, ತಂಬೂರಿಯು ಮೊರೆತ ಪ್ರಶಾಂತ ಬೆಳುದಿಂಗಳ ಕೈಹಿಡಿದುಕೊಂಡು ಅಲೆಯ ಮೇಲೆ ಮಲಗಿಕೊಂಡು ಬರುತ್ತಿರುವಂತೆ ಬರುತ್ತಿದೆ. ಅನಂತರ ಧ್ವನಿಯೊಂದು ಅದರ ಒಡಲೊಳಗಿಂದ ಮೃದುವಾಗಿ ನಿರ್ಝರದ ಸಲಿಲದಂತೆ ಹರಿದುಬರುವದು. ಮುಗಿಲೇ ಮೋಹಿನಿಯ ರೂಪ ತಳೆದಂತೆ, ಸ್ವರವೇ ಹಾಡಿನ ರೂಪ ಪಡೆದು ಹೊರಹೊಮ್ಮಿ ಬಂದು, ಅರ್ಥದ ಸುಖಸ್ಪರ್ಶವನ್ನು ಹೃದಯಕ್ಕೆ ಕೊಡುತ್ತಿದೆ. ಆ ಸ್ವರದ ಹಾಡಿನ ರೂಪ ಇದು:

[ರಾಗ: ಚಾಂದ]

ಕಣ್ಣು ಮುಚ್ಚಿ ತೆರೆಯುತಿರಲು
ಬಿಸಿಲು ಕಳೆದು ಬೆಳುದಿಂಗಳು;
ಸಂಜೆ ಇರುಳ ಕರೆಯುತಿರಲು
ಬಿಸಿಲು ಕಳೆದು ಬೆಳುದಿಂಗಳು.

ಬಾಳಿನಾಚೆ ತೀರದಿಂದ
ಬೆಳುದಿಂಗಳ ಕಡಲ ದಾಟಿ
ಬಹವು ನೆನಪು ದೂರದಿಂದ
ಒಲಿದ ಎದೆಯ ತಂತಿ ಮೀಟಿ.

ಹಾಡು ನಡೆದಿರುವಾಗಲೆ ಸಾವಕಾಶವಾಗಿ ಮನೆಯ ಆ ಮುಚ್ಚಿದ ಬಾಗಿಲು ತೆರೆಯುವದು. ಒಳಗಿನಿಂದ ಒಂದು ಪ್ರಕಾಶ ಹೊರಚಿಮ್ಮುವದು. ಆ ಪ್ರಕಾಶದಲ್ಲಿ ಶುಭ್ರವಸ್ತ್ರಧಾರಿಯಾದ ಓರ್ವ ಸ್ತ್ರೀವ್ಯಕ್ತಿಯು, ಶುಭ್ರಪುಷ್ಪಾಲಂಕೃತಳಾಗಿ ಕೈಯಲ್ಲಿ ಎರಡು ಹೂ ಹಿಡಿದುಕೊಂಡು ಸಾವಕಾಶವಾಗಿ ಆ ಮನೆಯ ಮೆಟ್ಟಿಲುಗಳನ್ನು ಒಂದೊಂದಾಗಿ ಇಳಿಯುತ್ತ, ಮಕ್ಕಳು ಮಲಗಿದ ತುಳಸಿಕಟ್ಟೆಯ ಹತ್ತಿರಕ್ಕೆ ಬಂದು

ಸೌಮ್ಯಪ್ರಸನ್ನಭಂಗಿಯಲ್ಲಿ ನಿಲ್ಲುವಳು. ಮುಖವು ಮೃದುಹಾಸವನ್ನು ಬೀರುತ್ತಿದೆ. ಚಂದ್ರಾಕಾರದ ಕುಂಕುಮ ಹಣೆಯಲ್ಲಿ ಎಸೆಯುತ್ತಿದೆ. ಆಕೆ ಬಂದು ಅಲ್ಲಿ ನಿಲ್ಲುವ ವರೆಗೂ ಹಾಡು ನಡೆದಿರುತ್ತದೆ. ಹಾಡು ನಿಂತ ಮೇಲೆ]

ತಾಯಿ

ಪಾಪ,ಮಾತಾಡಿಕೋತ ಮಲಗಿಬಿಟ್ಟಾವ! ಊಟದ ಖಬರs ಇದ್ದಾಂಗಿಲ್ಲ.

(ಮೆಲ್ಲಗೆ)

ಗಂಗೂ, ಏs ಗಂಗೂ!... ಯಾಕ ಎಬ್ಬಿಸಬೇಕು ನಾ ಆಕಿನ್ನ?

ಕಿಟ್ಟಿ

(ಕನವರಿಸುತ್ತ)

ಏಯ್, ಕೈಹಚ್ಚಿದೀ ಅಂದರ ಕೊಲ್ಲತೀನಿ...

ತಾಯಿ

ಯಾರಿಗಂತಾವೋ ಏನೋ, ಹುಚ್ಚು!... ಗಂಗೂ, ಎಷ್ಟು ಚೆಲುವಿ ಆಗೀದೇ ಈಗ!... ಮುಂದ ಏನು ದೈವದಾನೋ ಏನೋ ನಿಂದು!... ಇವs ಕಿಟ್ಟ್ಯಾಗ ಕೊಟ್ಟು ಲಗ್ನಾಮಾಡತಿದ್ದೆ ನಾ ಇದ್ದರ... ನನ್ನ ಕಳಕೊಂಡು ಜೋಡಿ, ಪರದೇಶಿ ಆದಿ!...ಇನ್ನ ಯಾರು ಕೇಳವರು ನಿನ್ನ?...

(ಮೃದುವಾಗಿ ನಕ್ಕು)

ಯಾರು ಯಾಕ ಕೇಳಬೇಕು?... ನಮ್ಮವ್ವಾ, ಒಂದು ಒಳ್ಳೇ ಮುತ್ತಿನಂಥ ಗಂಡನ್ನ ಮಾಡಿಕೊಂಡು, ಮಕ್ಕಳನ್ನ ಹಡೆದು, ಅವನ್ನ ಸಾಕಿ ಸಲುಹಿ ದೊಡ್ಡವರನ್ನ ಮಾಡಿ, ಕಡೆತನಕ ಬಾಳು ನನ್ನ ಮಗಳ!... ನನಗೇನೂ ಮಾಡೂದಾಗಲಿಲ್ಲ ಇದ್ದಾಗ ನಿನಗ...ನನ್ನ ಉಳಿದ ಆಯುಷ್ಯಾ ಎಲ್ಲಾ ನಿನಗಿರಲಿ... ಹಂ, ಈ ಸ್ಮಶಾನದಂಥಾ ಮನಿಯೊಳಗ ಏನೂ ಅರಿವಿಲ್ಲದ ಮಲಗಿಕೊಂಡಾವ!...

(ನೆನೆದು ನಕ್ಕು)

ಹುಂ, ಮತ್ತ ಸಾಯೋಆಟಾ ಆಡತಾವಂತ!... ಪಾಪ, ಇವಕ್ಕೇನು ಗೊತ್ತು ಸಾವಂದರ...?

[ಕೈಯಲ್ಲಿಯ ಹೂಗಳನ್ನು ಹುಡುಗರ ತಲೆಯಮೇಲೆಸೆದು ಬಂದ ಬಾಗಿಲದಿಂದ ಮಾಯವಾಗುವಳು. ಬೆಳಕು ಇಲ್ಲದಾಗುವದು. ದೂರದಿಂದ ಊರ ಕಡೆಯಿಂದ ಕೆಲ ಜನರು ಇತ್ತಕಡೆಗೇ ಬರುತ್ತಿರುವಂತೆ ಕೇಳಿಸುವದು. ರಾತ್ರಿಯ ನಿಶ್ಯಬ್ದತೆಯಲ್ಲಿ ಅವರು ಮಾತನಾಡುತ್ತಿರುವದು ಕೇಳಬರುತ್ತದೆ.]

ಒಂದನೆಯ ದನಿ

ಎಲ್ಲಿ ಬಿಟ್ಟಿದ್ದಿರಿ ಅವರನ್ನ? ಭಾವೀ ಕಡೆಗೆ ಹೋಗಿದ್ದರೇನು?

ಎರಡನೆಯ ದನಿ

ಏ ನಿಂಗಾ, ನೀ ಅತ್ತಲಾಗಿಂದ ಹಾದು ನೋಡಿಕೊಂಡು ಬಾರಲೆ.

ಮೂರನೆಯ ದನಿ

ಕರಿಯಾ, ದೀಪಾ ತೋರಿಸಲೇ ಇತ್ತಲಾಗ. ಅಲ್ಲ್ಯೊಂದು ಗೂಟಗಲ್ಲು ಅದ ಜೋಯಿಸರ, ನೋಡಿಕೊಂಡು ಬರ್ರಿ.

ಒಂದನೆಯ ದನಿ

ಈ ಕಿಟ್ಟ್ಯಾ, ತಾ ಹೋಗೋದಲ್ಲದ ಆ ಪರದೇಶಿ ಹುಡಿಗಿ ಗಂಗೂ ನ್ನೊಂದು ಕಟಿಗೊಂಡು ಹೋಗ್ಯಾನ... ಸಿಕ್ಕಾರ ಸಿಗಲಿ... ಅವನ ಚರ್ಮಾ ಸುಲೀತೀನಿ...

ಮೂರನೆಯ ದನಿ

ಹುಡುಗರ ಕೆಲಸಾ, ಅವಕ್ಕೇನು, ಆಡಿದ್ದs ಆಟಾ ಮಾಡಿದ್ದs ಬದುಕು...

ನಾಲ್ಕನೆಯ ದನಿ

(ಮುಪ್ಪಿನಿಂದ ನಡುಗುವ ದನಿಯಲ್ಲಿ)

ದೇವರs ತಾಯಿ ಸತ್ತ ಹುಡಿಗಿ, ಆಕಿ ತಲೀಮ್ಯಾಲೆ ನಾಕು ಅಕ್ಕಿಕಾಳು ಬಿದ್ದವಂದರ ಪಾರಾತು... ಆಕಿ ತಾಯೀ ರಿಣಾ ಮುಟ್ಟಿದ್ಹಂಗಾತು... ಆಕೀಗೆ ಆ ಮನಿ, ನನಗ ನಿನ್ನ ಮನಿ...

[ಗಾಳಿಯ ಮೇಲೆ ತಾಕಲಾಡುತ್ತ ಬರುವ ಈ ಮಾತುಗಳನ್ನು ಸರಿಸಿ, ಮನೆಯ ಮಗ್ಗುಲಿಂದ ಮುದುಕನ ಲಾವಣಿ ಏಕತಾರಿಯ ಜೊತೆಯೊಡನೆ ಕೇಳಿಬರುವದು.]

ಮುದುಕ

ಮೂಡಿ ಮಸುಳುವ ಚಿತ್ರ ಕಾಣಣ್ಣಾ । ಈ ಬದುಕು ಬಾಳೆ-।
ವೆಲ್ಲ ನೋಟದ ಪಾತ್ರ ಕಾಣಣ್ಣಾ ॥
ದೂರ ದೇಶದ ಹಕ್ಕಿ ಬಂದಿತ್ತು । ಈ ಮರ್ತ್ಯದಾಗಿನ
ತೋಪಿಗಿಳಿದು ಗೂಡು ಕಟ್ಟಿತ್ತು
ಜೀವಕೇನೋ ಭ್ರಾಂತಿ ಹಿಡದಿತ್ತು
ಭಾವದೊಳಗಿನ ತಂತಿ ಮಿಡದಿತ್ತು
ಎಲ್ಲೆ ಎಲ್ಲಿಗೆ ಕಾಣಬಯಸಿತ್ತು
ಕನಸುನಾಡನು ಮನಸು ನೆನೆಸಿತ್ತು
ನಸುಕುನಾಡನು ಬೇಡಬೇಕಣ್ಣಾ । ಹಬ್ಬಿರುವ ಕತ್ತಲಿ
ಮುಸುಕು ಸರಿಸಿ ನೋಡಬೇಕಣ್ಣಾ ॥

[ಹಾಡು ನಡೆದಿರುವಾಗಲೇ ಸಾವಕಾಶವಾಗಿ ತೆರೆ ಸರಿಯುವದು

ಎರಡನೆಯ ಅಂಕ ಮುಗಿದುದು

ಮನೋಹರ ಗ್ರಂಥಮಾಲಾ, ಧಾರವಾಡ

ಈ ಗ್ರಂಥಮಾಲೆಯು ಹದಿನೈದನೆಯ ಅಗಸ್ಟ ೧೯೩೩ಕ್ಕೆ ಪ್ರಾರಂಭ ವಾಗಿದೆ.

ಕಾದಂಬರಿ, ಸಣ್ಣಕತೆ, ನಾಟಕ, ಹರಟೆ, ದಿನಚರಿ ಮೊದಲಾದ ಸರಸಸಾಹಿತ್ಯವನ್ನೂ ಕಾವ್ಯ, ವಿಮರ್ಶೆ, ವೇದಾಂತ, ವಿಜ್ಞಾನ ಮೊದಲಾದ ವಿಚಾರಸಾಹಿತ್ಯವನ್ನೂ ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ಆರೋಗ್ಯ, ಗೃಹಜೀವನ, ಸೂಚಿಶಿಲ್ಪ, ಗೃಹಾಲಂಕಾರ, ಪ್ರವಾಸ ಪರಿಚಯ ಮೊದಲಾದ ಸರ್ವಜ್ಞಾನಪರಿಚಯವನ್ನು ಮಾಡಿಕೊಡುವ ಪ್ರಯೋಜಕ ಸಾಹಿತ್ಯವನ್ನೂ ಈ ಗ್ರಂಥಮಾಲೆಯು ಪ್ರಕಟಿಸುತ್ತದೆ.

ಈ ಕಾರ್ಯದಲ್ಲಿ ಶ್ರೀಯುತರಾದ ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ರಂ. ಶ್ರೀ ಮುಗಳಿ ಇವರು ಪ್ರಾರಂಭದಿಂದಲೂ ಈ ಗ್ರಂಥಮಾಲೆಗೆ ಸಾಹಿತ್ಯವಿಷಯದಲ್ಲಿ ಸಲಹೆಗಾರರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.

ಇಡಿ ಕನ್ನಡನಾಡಿನ ಸಿದ್ಧಹಸ್ತ ಬರೆಹಗಾರರೆಲ್ಲರೂ ಈ ಗ್ರಂಥಮಾಲೆಗಾಗಿ ಗ್ರಂಥಗಳನ್ನು ಬರೆದುಕೊಟ್ಟು ಅದರ ಗೌರವವನ್ನೂ ಕೀರ್ತಿಯನ್ನೂ ಹೆಚ್ಚಿಸಿದ್ದಾರೆ; ಗ್ರಂಥಮಾಲೆಯ ಸಾಹಿತ್ಯಸ್ಥಾನವನ್ನು ಉನ್ನತವಾಗಿಸಿದ್ದಾರೆ.

ಗ್ರಂಥಮಾಲೆಯ ಹೊಸ ವರ್ಷಾರಂಭವು ಅಗಸ್ಟ ತಿಂಗಳಿಂದಾಗುತ್ತದೆ.

ಅಗಸ್ಟದಿಂದ ಜುಲೈ ವರೆಗಿನ ಒಂದು ವರ್ಷದ ಅವಧಿಯಲ್ಲಿ ಈ ಗ್ರಂಥಮಾಲೆಯು ತನ್ನ ಗ್ರಾಹಕರಿಗೆ, ಅವರಿಂದ ಸಂದ ಚಂದಾಹಣದಲ್ಲಿ ಒಂದು ಸಾವಿರ ಪುಟಗಳ ಸಾಹಿತ್ಯವನ್ನು ಸಲ್ಲಿಸುವುದು. ಅಂಚೆಯ ದರ ಮೊದಲಿಗಿಂತಲೂ ಹೆಚ್ಚೆಚ್ಚು ಏರುತ್ತ ಬಂದಿದ್ದರಿಂದ ಗ್ರಂಥಗಳನ್ನು ಒಂದೇ ಕಂತಿನಲ್ಲಿ, ಹೆಚ್ಚೆಂದರೆ ಎರಡು ಕಂತುಗಳಲ್ಲಿ ಮಾತ್ರ ಚಂದಾದಾರರಿಗೆ ರಜಿಸ್ಟರದಿಂದ ತಲುಪಿಸಲಾಗುತ್ತದೆ.

ಆಯಾ ವರ್ಷದಲ್ಲಿ ಪ್ರಕಟವಾಗುವ ಗ್ರಂಥಗಳ ಸಂಖ್ಯೆಯು ಅವುಗಳ ಪುಟಸಂಖ್ಯೆಯ ಪ್ರಮಾಣದ ಮೇಲಿಂದ ಹೆಚ್ಚುಕಡಿಮೆಯಾಗಬಹುದು.

ಗ್ರಂಥಮಾಲೆಯ ಸದ್ಯದ ವಾರ್ಷಿಕ ಚಂದಾ ಆರು ರೂಪಾಯಿ ಎಂಟಾಣೆ ಮಾತ್ರ. (೬-೮-೦) ಇದೆ.

[ಅಗಸ್ಟ ೧೯೫೪ರ ಹಿಂದೆ ಗ್ರಂಥಮಾಲೆಯ ವಾರ್ಷಿಕ ಚಂದಾ ಎಂಟು ರೂಪಾಯಿ ಇದ್ದುದನ್ನು, ಹೊಸ ವರ್ಷದಿಂದ - ಅಂದರೆ ಅಗಸ್ಟ ೧೯೫೪ರಿಂದ ಪ್ರಾರಂಭವಾಗುವ ಹೊಸ ವರ್ಷದಿಂದ - ಆರುರೂಪಾಯಿ ಎಂಟಾಣೆಗೆ ಇಳಿಸಲಾಗಿದೆ.]

ಗ್ರಂಥಮಾಲೆಗೆ ಒಂದೇ ಸಲಕ್ಕೆ ೧೫೦ ರೂಪಾಯಿ ಸಲ್ಲಿಸಿದವರನ್ನು ಆಜೀವ ಚಂದಾದಾರರನ್ನಾಗಿ ಮಾಡಿಕೊಂಡು, ಅವರಿಗೆ ಆ ವರ್ಷದಿಂದ ಪ್ರಾರಂಭಮಾಡಿಕೊಂಡು ಅವರ ಆಜನ್ಮಪರ್ಯಂತ ಮಾಲೆಯ ಗ್ರಂಥಗಳನ್ನು ಹಾಗೆಯೆ ಸಲ್ಲಿಸಲಾಗುವುದು ಮತ್ತು ಬಿಡಿಮುತ್ತುಗಳನ್ನು ಅವರಿಗೆ ಅರ್ಧ ಬೆಲೆಗೆ ಕೊಡಲಾಗುವುದು.

ವರ್ಷದಲ್ಲಿ ಯಾವಾಗ ಬೇಕಾದರೂ ಹೊಸದಾಗಿ ಚಂದಾದಾರರಾಗಬಹುದು.

ಚಂದಾಹಣವನ್ನು ಮುಂಗಡವಾಗಿ ಕೆಳಗೆ ಕಾಣಿಸಿದ ವಿಳಾಸಕ್ಕೆ ಮನಿಯಾರ್ಡರ ಮೂಲಕ ಕಳುಹಿಸಿಕೊಡಬೇಕು.

ಗ್ರಂಥಮಾಲೆಯು ಹಿಂದಿನ ಗ್ರಂಥಗಳಿಗೆ ಚಂದಾಸವಲತ್ತು ಅನ್ವಯಿಸುವುದಿಲ್ಲ.

ಗ್ರಂಥಗಳಿಗಾಗಿ ಬೇಡಿಕೆ ಕಳಿಸಿಕೊಡುವವರು "ಮಾರಾಟಕ್ಕೆ ದೊರೆಯುವ ಗ್ರಂಥಗಳ" ಪಟ್ಟಿಯನ್ನು ದಯವಿಟ್ಟು ಗಮನಿಸಬೇಕು.

ಪುಸ್ತಕವ್ಯಾಪಾರಿಗಳಿಗೆ ಮುಖಬೆಲೆಯ ಮೇಲೆ ೧೮¾% ಕಮಿಶನ್ ಕೊಡಲಾಗುವದು. ನೂರು ರೂಪಾಯಿಗಳ ಮೇಲ್ಪಟ್ಟ ಬೇಡಿಕೆಗಳಿಗೆ ೨೫% ಕಮಿಶನ್ ಕೊಡಲಾಗುವದು. ಪ್ಯಾಕಿಂಗ್, ಅಂಚೆವೆಚ್ಚ ಪ್ರತ್ಯೇಕ.

ಸಂಪಾದಕ :

ಮನೋಹರ ಗ್ರಂಥಮಾಲಾ, ಧಾರವಾಡ

ಮಾರಾಟಕ್ಕೆ ದೊರೆಯುವ ಗ್ರಂಥಗಳು

ಕಾದಂಬರಿಗಳು :

೧	ಧರ್ಮಸೆರೆ	ಜಡಭರತ	೨	೦	೦
೨	ಅನಂತ	ಸತ್ಯಬೋಧ	೧	೪	೦
೩	ಗಂಗಾಸಾನಿ	ವರಗಿರಿ	೧	೧೪	೦
೪	ಮಾದನಮಗಳು	ಎಂ. ವಿ. ಸೀ.	೬	೦	೦
೫	ಮರ್ಯಾದೆಮಹಲು	ಅಶ್ವತ್ಥ	೩	೮	೦
೬	ಮೇದಿನಾಪುರದ ಮಲ್ಲ	ಗುರುರಾಜ ಜೋಶಿ	೧	೮	೦
೭	ಇಂದ್ರಚಾಪ	ತಲ್ಚೇರ ರಂಗರಾವ್	೨	೮	೦
೮	ಎರಡನೆಯ ಸಂಬಂಧ	ಎನ್ಕೆ. ಕುಲಕರ್ಣಿ	೩	೦	೦
೯	ಗೃಹದಾರಣ್ಯಕ	ನಾ. ಕಸ್ತೂರಿ	೧	೮	೦
೧೦	ಔರಂಗಜೇಬ	ಕೆ. ವಾಸುದೇವಾಚಾರ್ಯ	೩	೦	೦
೧೧	ಯವನಸೈರಂಧ್ರಿ	,,	೨	೮	೦
೧೨	ವಾಲ್ಮೀಕಿ ವಿಜಯ	,,	೧	೦	೦
೧೩	ಗೃಹದೇವತೆ	ಶ್ರೀಮತಿ ಬಿ. ವಿ. ಚಂಪಕಮಾಲಾ	೪	೦	೦
೧೪	ಝೋಹರಾ	ಬಿ. ಎಚ್. ಕೊಪ್ಪರ	೧	೧೨	೦
೧೫	ಸಮರಸವೇ ಜೀವನ	ವಿ. ಕೃ. ಗೋಕಾಕ	೧೫	೦	೦

ನಾಟಕಗಳು :

೧೬	ಎತ್ತಿದ ಕೈ	ರಂ. ಶ್ರೀ. ಮುಗಳಿ	೧	೧೪	೦
೧೭	ಮಗು	ಅಶ್ವತ್ಥ	೧	೮	೦
೧೮	ಪತಿತೋದ್ಧಾರ	ಎನ್ಕೆ. ಹುಯಿಲಗೋಳ	೧	೮	೦
೧೯	ಭಾಗ್ಯಶ್ರೀ	ಅ. ಜಿ. ಬೇಂದ್ರೆ	೧	೦	೦
೨೦	ಸ್ವಪ್ನದರ್ಶಿ	ಕೀರ್ತಿನಾಥ ಕುರ್ತಕೋಟಿ	೨	೦	೦
೨೧	ಆ ಮನಿ	,, ,,	೧	೦	೦

ಸಣ್ಣ ಕತೆ, ಲಲಿತಪ್ರಬಂಧಗಳು :

೨೨	ಕುರಿಹಿಂಡು	ಜಲಧರ	೨	೮	೦
೨೩	ಹೂಬಾಣಗಳು	ಪ. ರಮಾನಂದ	೩	೦	೦

೨೪ ಜಡಭರತನ ಕನಸುಗಳು	ಜಡಭರತ	೧	೮	೦
೨೫ ಪ್ರೇಮವಿಜಯ	ಕೆ. ವಾಸುದೇವಾಚಾರ್ಯ	೨	೮	೦
೨೬ ತೊಳೆದ ಮುತ್ತು	,,	೩	೨	೦
೨೭ ಬೆಳಗಿದ ದೀಪಗಳು	,,	೧	೧೨	೦
೨೮ ಚೀನದ ಬಾಳು-ಬದುಕು	ಬೇರೆ ಬೇರೆಯವರು	೭	೦	೦
೨೯ ಬಾಳಕೆಳೆ	ಅಶ್ವತ್ಥ	೨	೮	೦
೩೦ ಮಾಲಾ ಮತ್ತು ಇತರ ಕತೆಗಳು	ಶ್ರೀಮತಿ ಕ್ಯಾತ್ಯಾಯಿನಿ	೨	೦	೦
೩೧ ಕೆಂಪುಗುಲಾಬಿ	ಶ್ರೀಮತಿ ಸೀತಾರತ್ನ	೧	೮	೦
೩೨ ಬಾಗಿನ	ಶ್ರೀಮತಿ ಲಲಿತಮ್ಮ	೧	೦	೦

ಕಾವ್ಯಗಳು :

೩೩ ಗರಿ	ಅಂಬಿಕಾತನಯದತ್ತ	(ಒಳ್ಳೆಕಾಗದ)	೨	೮	೦
೩೪ ಬಾಳದೇಗುಲದಲ್ಲಿ	ವಿ. ಕೃ. ಗೋಕಾಕ	,,	೫	೦	೦
		ಸಾದಾ	೩	೮	೦
೩೫ ಸಮುದ್ರಗೀತಗಳು	,,		೧	೦	೦
೩೬ ಬಾಸಿಗ	ರಂ. ಶ್ರೀ. ಮುಗಳಿ		೧	೦	೦
೩೭ ಮಹಾಯುದ್ಧ	ಅಶ್ವತ್ಥ		೧	೮	೦

ಇತರ ಸಾಹಿತ್ಯ:

೩೮ ಸಾಹಿತ್ಯ ಮತ್ತು ವಿಮರ್ಶೆ	ದ. ರಾ. ಬೇಂದ್ರೆ	೧	೮	೦
೩೯ ದತ್ತವಾಣಿ	ಮಿರ್ಜಿ ಅಣ್ಣಾರಾಯ	೧	೪	೦
೪೦ ಮಾತೃವಾಣಿ	ಮಧುರಚೆನ್ನ	೧	೪	೦
೪೧ ಯುಗಪ್ರವರ್ತಕ ಬಸವಣ್ಣ	ಚಿಂತಾಮಣಿ	೧	೦	೦
೪೨ ಯಾತ್ರಿಕ	ರಂಗನಾಥ ದಿವಾಕರ	೨	೦	೦
೪೩ ಕವಿ ಕಾವ್ಯ-ದೃಷ್ಟಿ	ವಿ. ಸೀ.	೨	೦	೦

ಅಚ್ಚಿನಲ್ಲಿರುವ ಗ್ರಂಥಗಳು

ಗ್ರಂಥಮಾಲೆಯಲ್ಲಿ :

೧ "ಖೊ !" (ಪ್ರಾಯೋಗಿಕ ಕಾದಂಬರಿ)	ವಿವಿಧ ಲೇಖಕರು
೨ ಗಾಳಿಯು ಉಡಿಯಲ್ಲಿ (ಪ್ರಬಂಧಗಳು)	ಶ್ರೀ. ಕೆ. ಆರ್. ಮಹಿಷಿ
೩ ಮೂಕಬಲಿ (ಕಾದಂಬರಿ)	ಜಡಭರತ
೪ ಸಾಹಿತ್ಯಕೇಳಿ (ಪ್ರಾಯೋಗಿಕ ಕಾದಂಬರಿ)	ವಿವಿಧ ಲೇಖಕರು

೫ ಮೊದಲ ಹೂ (ಸಣ್ಣ ಕತೆಗಳು)	ಜಡಭರತ
೬ ಜಡಭರತರ ದಿನಚರಿ	,,
೭ ನಾನು-ನನ್ನದು (ಪ್ರಬಂಧಗಳು)	,,
೮ ಕವಿ ಬೇಂದ್ರೆ (ಸಾಹಿತ್ಯವಿಮರ್ಶೆ)	ಶ್ರೀ. ಕೀರ್ತಿ ಕುರ್ತಕೋಟಿ
೯ ಕುಮಾರವ್ಯಾಸ (ಕಾವ್ಯರಸಗ್ರಹಣ)	,,
೧೦ ಚಕ್ರವ್ಯೂಹ (ನಾಟಕ)	,,
೧೧ ನಾಟಕ-ರಂಗ-ಪ್ರಯೋಗ	ಜಿ. ಬಿ. ಜೋಶಿ
೧೨ ಆಶುನಾಟಕಗಳು	,,

ಬಿಡಿಮುತ್ತುಗಳು :

೧೩ ಜೀವಫಲ (ಕವನಸಂಗ್ರಹ)	ಜಡಭರತ
೧೪ ಸಂಶೋಧನ ಮತ್ತು ಸಮಾಲೋಚನೆ	ಸದಾನಂದ ನಾಯಕ
೧೫ ತ್ರಿಶಂಕು (ಕವನಸಂಗ್ರಹ)	ಕೀರ್ತಿ ಕುರ್ತಕೋಟಿ

ಪುಸ್ತಕವನ್ನು ಕೊನೆಯಲ್ಲಿ ನಮೂದಿಸಲಾಗಿರುವ ದಿನದಂದು ಅಥವಾ ಅದಕ್ಕೆ ಮುನ್ನ ಹಿಂದಿರುಗಿಸಬೇಕು. ತಡವಾದ ಪ್ರತಿದಿನಕ್ಕೆ ನಿಯಮಾನುಸಾರ ದಂಡ ಶುಲ್ಕ ವಿಧಿಸಲಾಗುವುದು.

...ing
... Art
Press, Dharwar



ಕೀರ್ತಿನಾಥ ಕುರ್ತಕೋಟಿ

'ಕೀರ್ತಿಃ ಶ್ರೀರ್ವಾಕ್ ಚ ನಾರೀಣಾಂ ಸ್ಮೃತಿರ್ಮೇಧಾ ಧೃತಿಃ ಕ್ಷಮಾ' ಎಂಬ ಗೀತಾವಾಕ್ಯದಲ್ಲಿ 'ನಾರೀಣಾಂ' ಎಂಬ ಶಬ್ದವೊಂದು ಕೀರ್ತಿನಾಥರಿಗೆ ಅನ್ವಯಿಸದು. ಅವರ ಗಂಡೆದೆಯಲ್ಲಿ ಈ ಸದ್ಗುಣಗಳು ಪ್ರಯತ್ನವಿಲ್ಲದೆ ಸ್ವಾಭಾವಿಕವಾಗಿ ಮೈಗೊಂಡಿದೆಯೆಂದರೆ ಅತಿಶಯೋಕ್ತಿಯಾಗದು. ಕನ್ನಡ, ಇಂಗ್ಲೀಷು, ಮರಾಠಿ, ಸಂಸ್ಕೃತ ಈ ನಾಲ್ಕು ಭಾಷಾಸಾಹಿತ್ಯಗಳ ಸಮೀಪ ದರ್ಶನದಿಂದ ವಿಸ್ತಾರಗೊಂಡ ಅವರ ಮನಸ್ಸು ಅವರ ವಿಚಿತ್ರ ಸ್ಮರಣಶಕ್ತಿಯಲ್ಲಿ ವ್ಯವಸ್ಥಿತಗೊಂಡು ಅವರ ಸ್ವಾನುಭವದಿಂದ ಶಕ್ತಿ ಪಡೆದು ಅವರ ಮೇಧಾಬಲದಲ್ಲಿ ಕುಸುರುಕುಸುರಾಗಿ ಮೊನೆಮೊನೆಯಾಗಿ ಅರಳಿ ಬರುತ್ತದೆ. ಅವರ ಒಂದೊಂದು ಶಬ್ದದ ಹಿಂದೆ ಅವರ ಸೂಕ್ಷ್ಮಸಂವೇದನೆಯ ಸರ್ವಶಕ್ತಿ ನಿಂತುಕೊಂಡಿದೆ. ಅವರ ಆಂತರಿಕ ಜೀವನದ ಪರಿಚಯ ಮಾಡಿಕೊಡುವ ಎಡೆ ಯಾರಿಗಿದೆ? ಅವರು ಕವಿಗಳು, ನಾಟಕಕಾರರು, ವಾಗ್ಮಿಗಳು. ಆದರೆ ಎಲ್ಲವದಲ್ಲೂ ಮಿಗಿಲಾಗಿ ತೋರಿಬರುವ ಅವರ ವೈಶಿಷ್ಟ್ಯವೆಂದರೆ ಜೀವನದ ವಿವಿಧ ಅನುಭವಗಳನ್ನು ಒಂದು ಪ್ರತೀಕವೆಂದಾಗಿ ನೋಡಿ ಪ್ರತೀಕದಲ್ಲೇ ಹಿಡಿದಿಡುವ ಅವರ ಸಂವೇದನಾಶಕ್ತಿ. ಜಗತ್ತೇ ಒಂದು 'Flaming word' ಆಗಿರಬಹುದೆಂಬ ಕವಿ ಯೇಟ್ಸನ ಲೀಲಾವಾಕ್ಯವು ಇವರ ಮನಸ್ಸಿನ ಸತ್ಯವಾದ ವರ್ಣನೆಯೆಂದರೆ ಎಲ್ಲವನ್ನು ಹೇಳಿದಂತಾಯಿತು.